ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 51 | ಡಿಸೆಂಬರ್ 16-22, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com





ಕಿವುಡು ಸರ್ಕಾರದ ಕಿವಿ ಹಿಂಡಿದ ಅಂಗನವಾಡಿ ತಾಯಂದಿರು



ಕರ್ನಾಟಕದ ಕೂಲಿಕಾರರ 2000 ಕೋಟಿ ರೂ. ಬಾಕಿ ಇಟ್ಟುಕೊಂಡ ಮೋದಿ ಸರ್ಕಾರ - ಸುಭಾಷಿಣಿ ಅಲಿ



ಸಿಎಬಿ-ಎನ್‌ಆರ್‌ಸಿ ಹೊಸ ವಿಭಜನಕಾರಿ ಅಜೆಂಡಾ

ಡಿ. 19 - ದೇಶವ್ಯಾಪಿ ಪ್ರತಿಭಟನೆ



ಸಾಮಾಜಿಕ ಭದ್ರತೆಗಾಗಿ ಅಸಂಘಟಿತ ಕಾರ್ಮಿಕರ ಐಕ್ಯತೆ ಪ್ರದರ್ಶನ

ಡಿಸೆಂಬರ್ 19: ಪೌರತ್ವ ಕಾಯ್ದೆ ತಿದ್ದುಪಡಿ ವಿರುದ್ಧ ಅಖಿಲ ಭಾರತ ಪ್ರತಿಭಟನೆ

ಪೌರತ್ವ ತಿದ್ದುಪಡಿ ಮಸೂದೆ(ಸಿಎಬಿ) ಮತ್ತು ರಾಷ್ಟ್ರೀಯ ಪೌರರ ದಾಖಲಾತಿ(ಎನ್‌ಆರ್‌ಸಿ) ವಿರುದ್ಧ ಡಿಸೆಂಬರ್ 19 ರಂದು ದೇಶಾದ್ಯಂತ ಪ್ರತಿಭಟನೆ ನಡೆಸಬೇಕು ಎಂದು ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್)-ಲಿಬರೇಷನ್, ಎಐಎಫ್‌ಬಿ ಮತ್ತು ಆರ್‌ಎಸ್‌ಪಿ, ಈ ಐದು ಎಡಪಕ್ಷಗಳು ಕರೆ ನೀಡಿವೆ.

ಸಂಸತ್ತಿನ ಎರಡೂ ಸದನಗಳು ಈ ಸಿಎಬಿಯನ್ನು ಪಾಸು ಮಾಡಿವೆ. ಈ ಮಸೂದೆ ಭಾರತೀಯ ಸಂವಿಧಾನದ ಸಂಪೂರ್ಣ ಉಲ್ಲಂಘನೆಯಾಗಿದೆ, ಭಾರತೀಯ ಗಣತಂತ್ರದ ಪ್ರಜಾಸತ್ತಾತ್ಮಕ ಬುನಾದಿಯನ್ನು ನಾಶಪಡಿಸುವುದೇ ಅದರ ಉದ್ದೇಶ ಎಂದು ಪರಿಗಣಿಸಿರುವ ಎಡಪಕ್ಷಗಳು ಇದನ್ನು ಬಲವಾಗಿ ವಿರೋಧಿಸುತ್ತಿವೆ. ಇದು ಪೌರತ್ವವನ್ನು ಒಬ್ಬ ವ್ಯಕ್ತಿಯ ಧಾರ್ಮಿಕ ನೆಲೆಯೊಂದಿಗೆ ಜೋಡಿಸುತ್ತದೆ, ಇದು ಜಾತ್ಯತೀತತೆಗೆ ತದ್ವಿರುದ್ಧವಾದ ಸಂಗತಿ ಎಂದು ಎಡಪಕ್ಷಗಳು ಹೇಳಿವೆ.

ದೇಶದಲ್ಲಿ ಕೋಮು ವಿಭಜನೆ ಮತ್ತು ಸಾಮಾಜಿಕ ಧ್ರುವೀಕರಣವನ್ನು ಇನ್ನಷ್ಟು ತೀಕ್ಷ್ಣಗೊಳಿಸುವುದು ಈ ಮಸೂದೆಯ ಉದ್ದೇಶ. ಇದು ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಅಪಾಯಕಾರೀ ಹಾನಿಯುಂಟು ಮಾಡುತ್ತದೆ. ಇಂತಹ ಮಸೂದೆ ಪಾಸಾಗಿರುವುದು, ಮತ್ತು ಎನ್‌ಆರ್‌ಸಿಯನ್ನು ಇಡೀ ದೇಶಕ್ಕೆ ವಿಸ್ತರಿಸಲಾಗುವುದು ಎಂದು ಮೋದಿ-ಷಾ ಸರಕಾರ ಸಾರಿರುವುದು ಭಾರತೀಯ ಗಣತಂತ್ರದ ಸ್ವರೂಪವನ್ನೇ ಬದಲಿಸುವ ಒಂದು ಅವಳಿ ಸಂಯೋಜನೆ. ಇದು ನಮ್ಮ ಜಾತ್ಯತೀತ ಪ್ರಜಾಪ್ರಭುತ್ವ ಗಣತಂತ್ರವನ್ನು ಆರೆಸ್ಸೆಸ್‌ನ ರಾಜಕೀಯ ಯೋಜನೆಯಾದ ಹಿಂದೂರಾಷ್ಟ್ರವಾಗಿ ಪರಿವರ್ತಿಸುತ್ತದೆ. ಇದರ ವಿರುದ್ಧ ಡಿಸೆಂಬರ್ 19, 2019ರಂದು ಜನಗಳ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸಬೇಕು ಎಂದು ಈ ಐದು ಎಡಪಕ್ಷಗಳು ತಮ್ಮ ಘಟಕಗಳಿಗೆ ಕರೆ ನೀಡಿವೆ.

1927ರಲ್ಲಿ ಇದೇ ಡಿಸೆಂಬರ್ 19ರಂದು, ಸ್ವಾತಂತ್ರ್ಯ ಹೋರಾಟದಲ್ಲಿ ತನ್ನ 'ಸರ್ ಫರೋಶೀ ಕೀ ತಮನ್ನಾ ಅಬ್ ಹಮಾರೇ ದಿಲ್ ಮೇಂ ಹೈ, ದೇಖ್‌ನಾ ಹೈ ಜೋರ್ ಕಿತ್ನಾ ಬಾಜು-ಎ-ಕಾತಿಲ್ ಮೇಂ ಹೈ'(ನಮ್ಮ ಶಿರಸ್ಸನ್ನೇ ಅರ್ಪಿಸುವ ಆಕಾಂಕ್ಷೆ ಈಗ ನಮ್ಮ ಮನದಲ್ಲಿದೆ, ಆ ಕಟುಕನ ಕೈಗಳಲ್ಲಿ ಎಷ್ಟು ಬಲವಿದೆಯೋ ನೋಡೋಣ) ಎಂಬ ಕವನದ ಮೂಲಕ ಇಡೀ ದೇಶದ ಜನತೆಯನ್ನು ಜಾಗೃತಗೊಳಿಸಿದ ರಾಂಪ್ರಸಾದ್ ಬಿಸ್ಮಿಲ್‌ರನ್ನು ಗೋರಖ್‌ಪುರ ಜೈಲಿನಲ್ಲಿ ಗಲ್ಲಿಗೇರಿಸಲಾಗಿತ್ತು. ಅವರ ಸಹ-ಆರೋಪಿ ಅಷ್ಫಾಖುಲ್ಲ ಖಾನ್‌ರನ್ನು ಫೈರ್ಝಾಬಾದ್ ಜೈಲಿನಲ್ಲಿ ಮತ್ತು ಇನ್ನೊಬ್ಬ ಸಹ-ಆರೋಪಿ ರೋಶನ್ ಸಿಂಗ್‌ರನ್ನು ನೈನಿ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು. ಮತೀಯ ನೆಲೆಗಳನ್ನು ಮೀರಿ ನಿಂತ ಈ ಐಕ್ಯತೆಯಿಂದಲೇ ನಾವು ಬ್ರಿಟಿಶರಿಂದ ನಮ್ಮ ಸ್ವಾತಂತ್ರ್ಯವನ್ನು ಗೆದ್ದುಕೊಂಡಿದ್ದೇವೆ. ಆರೆಸ್ಸೆಸ್-ಬಿಜೆಪಿ ಅದನ್ನೀಗ ಛಿದ್ರಗೊಳಿಸುತ್ತಿವೆ ಎಂದು ದೇಶವ್ಯಾಪಿ ಪ್ರತಿಭಟನಾ ಕಾರ್ಯಾಚರಣೆಗೆ ಜಂಟಿ ಕರೆ ನೀಡಿರುವ ಈ ಐದು ಎಡಪಕ್ಷಗಳು, ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಭಾರತ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್‌ಪಕ್ಷ(ಮಾರ್ಕ್ಸ್‌ವಾದಿ-ಲೆನಿನ್‌ವಾದಿ)-ಲಿಬರೇಷನ್, ಅಖಿಲ ಭಾರತ ಫಾರ್ವರ್ಡ್ ಬ್ಲಾಕ್ ಮತ್ತು ರಿವೊಲುಶನರಿ ಸೋಶಲಿಸ್ಟ್ ಪಾರ್ಟಿ ಹೇಳಿವೆ.



ಕಾಕೋರಿ ಪಿತೂರಿ ಮೊಕದ್ದಮೆಯನ್ನು ಹಾಕಿ ಬ್ರಿಟಿಶರು 1927ರ ಡಿಸೆಂಬರ್ 19 ರಂದು ಗಲ್ಲಿಗೇರಿಸಿದ ರಾಮ್‌ಪ್ರಸಾದ್ ಬಿಸ್ಮಿಲ್, ರೋಶನ್ ಸಿಂಗ್ ಮತ್ತು ಅಷ್ಫಾಕುಲ್ಲ ಖಾನ್

ದಿಲ್ಲಿಯಲ್ಲಿ ಭೀಕರ ಬೆಂಕಿ ಅನಾಹುತ

ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಘಾತ ಮತ್ತು ಆತಂಕ

ಉತ್ತರ ದಿಲ್ಲಿಯ ಅನಾಜ್ ಮಂಡಿಯಲ್ಲಿ ಲಗ್ಗೇಜ್ ಕಾರ್ಖಾನೆಯೊಂದರಲ್ಲಿ ನಡೆದಿರುವ ಭೀಕರ ಬೆಂಕಿ ಅನಾಹುತದ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಳವಾದ ಆಘಾತ ಮತ್ತು ಆತಂಕವನ್ನು ವ್ಯಕ್ತಪಡಿಸಿದೆ. ಇದು ಈಗಾಗಲೇ 43 ಜೀವಗಳನ್ನು ಬಲಿ ತೆಗೆದುಕೊಂಡಿದೆ, ಹತ್ತಾರು ಇತರರು ವಿವಿಧ ಆಸ್ಪತ್ರೆಗಳಲ್ಲಿ ತೀವ್ರ ಸುಟ್ಟ ಗಾಯಗಳಿಗೆ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ವರದಿಯಾಗಿದೆ.

ಪ್ರಾಣ ಕಳಕೊಂಡವರೆಲ್ಲರೂ ಕಾರ್ಮಿಕರು. ಅವರು ಕಾಖಾನೆಯ ಆವರಣದಲ್ಲೇ ಮಲಗಿದ್ದರು, ಬೆಂಕಿಯಿಂದ ತಪ್ಪಿಸಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ಬೆಂಕಿ ತಗುಲಲು ಕಾರಣವೇನು ಎಂದು ಪತ್ತೆ ಹಚ್ಚಬೇಕು ಮತ್ತು ಬೆಂಕಿ ಸುರಕ್ಷಿತತೆಯಲ್ಲಿನ ಲೋಪಗಳಿಗೆ ಹೊಣೆಯಾದವರನ್ನು ಶಿಕ್ಷಿಸಬೇಕು. ಮುಂದೆ ಇಂತಹ ದುರಂತಗಳು ನಡೆಯದಂತೆ ಬೆಂಕಿ ಸುರಕ್ಷಿತತೆಯ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಖಾತ್ರಿ ಪಡಿಸಬೇಕು ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ತನ್ನ ಆಳವಾದ ಸಂತಾಪಗಳನ್ನು ವ್ಯಕ್ತಪಡಿಸಿದೆ, ಮತ್ತು ಕೇಂದ್ರ ಹಾಗೂ ರಾಜ್ಯ ಸರಕಾರಗಳೆರಡೂ ತಕ್ಷಣವೇ ಆಸ್ಪತ್ರೆಯಲ್ಲಿರುವವರ ಜೀವಗಳನ್ನು ಉಳಿಸಲು ಕ್ರಮ ಕೈಗೊಳ್ಳಬೇಕು ಮತ್ತು ಸಾವಿಗೀಡಾದವರ ಕುಟುಂಬಗಳಿಗೆ ಸಾಕಷ್ಟು ಪರಿಹಾರವನ್ನು ಪ್ರಕಟಿಸಬೇಕು ಎಂದು ಕರೆ ನೀಡಿದೆ.

ಸಿಪಿಐ(ಎಂ) ನಿಯೋಗದ ಭೇಟಿ

ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾಕಾರಟ್, ದಿಲ್ಲಿ ರಾಜ್ಯ ಕಾರ್ಯದರ್ಶಿ ಕೆ.ಎಂ. ತಿವಾರಿ ಹಾಗೂ ಇತರ ರಾಜ್ಯ ಮುಖಂಡರುಗಳಿದ್ದ ನಿಯೋಗವೊಂದು ಈ ಭೀಕರ ಅಘಘಾತದ ಸ್ಥಳಕ್ಕೆ ಭೇಟಿ ನೀಡಿ ಪ್ರಾಣ ಕಳಕೊಂಡವರ ಕುಟುಂಬಗಳಿಗೆ ಕನಿಷ್ಟ ತಲಾ 25 ಲಕ್ಷ ರೂ. ಪರಿಹಾರ ನೀಡಬೇಕು, ಈ ಅಘಘಾತಕ್ಕೆ ಕಾರಣರಾದವರ ವಿರುದ್ಧ, ಮುಖ್ಯವಾಗಿ ಕಾರ್ಖಾನೆಯ ಮಾಲಿಕ ಹಾಗೂ ದಿಲ್ಲಿಯ ಕಾರ್ಮಿಕ ಇಲಾಖೆಯ ಕಾರ್ಖಾನೆ ನಿರ್ದೇಶಕರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ. ನಿರ್ಲಕ್ಷ್ಯದಿಂದಾಗಿಯೇ ದೇಶದ ರಾಜಧಾನಿಯಲ್ಲಿ ಈ ರೀತಿಯ ಕಾರ್ಖಾನೆ ಅಘಘಾತಗಳ ಸಂಖ್ಯೆ ಹೆಚ್ಚುತ್ತಲೇ ಇವೆ. ಇದು ಸಾಲದೆಂಬಂತೆ ಮೋದಿ ಸರಕಾರ ಕಾರ್ಮಿಕ ಕಾನೂನುಗಳನ್ನು ದುರ್ಬಲಗೊಳಿಸುತ್ತಿರುವುದರಿಂದ ಬಹಳಷ್ಟು ಕಾರ್ಮಿಕರು ಕಾನೂನುಗಳ ವ್ಯಾಪ್ತಿಯಿಂದ ಹೊರತಳ್ಳಲ್ಪಡುತ್ತಿದ್ದಾರೆ, ಕಾರ್ಖಾನೆ ಮಾಲಿಕರು ಮತ್ತು ಸರಕಾರಕ್ಕೆ ಕೂಡ ಕಾರ್ಮಿಕರ ಸುರಕ್ಷಿತತೆಯ ಹೊಣೆ ಇಲ್ಲವಾಗುತ್ತಿದೆ ಎಂದು ನಿಯೋಗ ಎಚ್ಚರಿಸಿದೆ.

ಮಣಿಪುರದ ಹಿರಿಯ ಸಿಪಿಐ(ಎಂ) ಮುಖಂಡ

ಮೈತ್‌ರಾಂ ಶಾಮು ನಿಧನ

ಸಿಪಿಐ(ಎಂ)ನ ಮಣಿಪುರ ರಾಜ್ಯಸಮಿತಿಯ ಹಿಂದಿನ ಕಾರ್ಯದರ್ಶಿ ಮೈತ್ರಾವ್ ಶಾಮು ತಮ್ಮ 92ನೇ ವಯಸ್ಸಿನಲ್ಲಿ ಡಿಸೆಂಬರ್ 9 ರಂದು ನಿಧನರಾಗಿದ್ದಾರೆ. 1948ರಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸೇರಿದ ಅವರು 1940 ರ ದಶಕದ ಕೊನೆಯ ಭಾಗ ಮತ್ತು 1950 ರ ದಶಕದಲ್ಲಿ ರೈತ ಆಂದೋಲನದಲ್ಲಿ ಭಾಗವಹಿಸಿದರು. 1967ರಲ್ಲಿ ರಾಜ್ಯ ಕಾರ್ಯದರ್ಶಿಮಂಡಳಿಯ ಸದಸ್ಯರಾದರು. ನಂತರ ನಾಲ್ಕು ಅವಧಿಯ ವರೆಗೆ ರಾಜ್ಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ಮಣಿಪುರ ರಾಜ್ಯದಲ್ಲಿ ಎಡ ಆಂದೋಲನವನ್ನು ಬೆಳೆಸುವಲ್ಲಿ ಅವರು ದೊಡ್ಡ ಕೊಡುಗೆ ನೀಡಿದ್ದಾರೆ ಎಂದು ಶ್ರದ್ಧಾಂಜಲಿ ಅರ್ಪಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅವರ ಕುಟುಂಬದ ಸದಸ್ಯರಿಗೆ ಹಾರ್ದಿಕ ಸಂತಾಪವನ್ನು ಸೂಚಿಸಿದೆ.

ಅಂತರ್‍ರಾಷ್ಟ್ರೀಯ ಮಾನವ ಹಕ್ಕು ದಿನವಾದ ಡಿಸೆಂಬರ್ 10ರಂದು ಸಿಪಿಐ(ಎಂ) ದಿಲ್ಲಿ ರಾಜ್ಯಸಮಿತಿ ಜಂತರ್ ಮಂತರ್‌ನಲ್ಲಿ ಒಂದು ಪ್ರತಿಭಟನಾ ಧರಣಿಯನ್ನು ನಡೆಸಿತು. ಹಿರಿಯ ಪೊಲಿಟ್‌ಬ್ಯುರೊ ಸದಸ್ಯರಾದ ಪ್ರಕಾಶ ಕಾರಟ್ ಮಾತಾಡುತ್ತ ಕಾಶ್ಮೀರದಲ್ಲಿ ನಾಗರಿಕ ಮತ್ತು ಪ್ರಜಾಪ್ರಭುತ್ವ ಹಕ್ಕುಗಳನ್ನು ಮೊಟಕುಗೊಳಿಸಿ ನಾಲ್ಕು ತಿಂಗಳು ದಾಟಿದೆ, ಮತ್ತು ಜನಗಳನ್ನು ಧರ್ಮದ ಹೆಸರಿನಲ್ಲಿ ವಿಭಜಿಸುವ ಬಿಜೆಪಿ-ಆರೆಸ್ಸೆಸ್ ಪ್ರಯತ್ನಗಳು ಮುಂದುವರೆಯುತ್ತಿವೆ ಎಂದರು. ಪೌರತ್ವ ತಿದ್ದುಪಡಿ ಮಸೂದೆಯನ್ನು ಪಾಸು ಮಾಡಿಸಿಕೊಂಡಿರುವುದು ಈ ದಿಸೆಯಲ್ಲಿ ಮತ್ತೊಂದು ಕ್ರಮ. ಜನಗಳ ಗಮನವನ್ನು ನಿರುದ್ಯೋಗ, ಆರ್ಥಿಕ ಬಿಕ್ಕಟ್ಟು, ಶಿಕ್ಷಣಕ್ಕೆ ಸರಕಾರದ ವೆಚ್ಚದಲ್ಲಿ ಕಡಿತ ಮುಂತಾದವುಗಳಿಂದ ಬೇರೆಡೆಗೆ ತಿರುಗಿಸುವ ಪ್ರಯತ್ನಗಳಿವು ಎಂದರು.





ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ್ಮಿಕರ ಸಂಘ 7ನೇ ರಾಜ್ಯ ಸಮ್ಮೇಳನ

ಸುಶೀಲಮ್ಮ ವೇದಿಕೆ, ಕಲಬುರಗಿ.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ 7ನೇ ರಾಜ್ಯ ಸಮ್ಮೇಳನವನ್ನು ಅಖಿಲ ಭಾರತ ಮುಖಂಡರಾದ ಸುಭಾಷಿಣಿ ಅಲಿ ಯವರು ಉದ್ಘಾಟಿಸಿ ಮಾತಾಡಿದರು. "ದೇಶದಲ್ಲಿ ಬಡವರು ಬಡತನ ನಿರುದ್ಯೋಗದಿಂದ ನರಳುತ್ತಿದ್ದರೆ ಮೋದಿ ಸರಕಾರವು ಅಂಬಾನಿ, ಅದಾನಿಯವರ ಆದಾಯ ಹೆಚ್ಚಿಸುವಲ್ಲಿ ಮಗ್ನವಾಗಿದೆ. ಮಹಿಳೆ, ಮಕ್ಕಳ ಮೇಲೆ ಅತ್ಯಾಚಾರ ಹೆಚ್ಚುತ್ತಿದೆ. ಚಿಂಚೋಳಿ ಯಾಕಾಪುರ ಗ್ರಾಮದ ಎಂಟು ವರ್ಷ ವಯಸ್ಸಿನ ಹೆಣ್ಣು ಮಗುವಿನ ಅತ್ಯಾಚಾರ ಮತ್ತು ಕೊಲೆ ಹಾಗೂ ಇಂದಿನದೇ ಸುದ್ದಿಯಾದ ಹಾವನೂರು ಗ್ರಾಮದ ಐದು ವರ್ಷ ವಯಸ್ಸಿನ ಕೂಸಿನ ಹತ್ಯೆ ಇವೆಲ್ಲವೂ ಭಾರತದಲ್ಲಿ ಬಡವರಿಗೆ ಭವಿಷ್ಯವಿಲ್ಲದಂತಹ ಕರಾಳತೆಗೆ ಕನ್ನಡಿ ಹಿಡಿದಂತಾಗಿದೆ. ಆದರೆ ಇದೇ ಹೊತ್ತಿನಲ್ಲಿ ಕೇಂದ್ರ ಸರಕಾರವು ಉದ್ಯೋಗ ಖಾತ್ರಿ ಕಾಯ್ದೆಯನ್ನೇ ನಿಷ್ಕ್ರೀಯಗೊಳಿಸಲು ಹೊರಟಿದೆ. ಕಾರ್ಪೋರೇಟ್‌ಗಳಿಗೆ ಲಾಭ ಮಾಡಿಸುವಾಗಲೇ ಮೋದಿ ಸರಕಾರಕ್ಕೆ ಕರ್ನಾಟಕದ ಉದ್ಯೋಗ ಖಾತ್ರಿ ಕೆಲಸದ ಬಾಕಿ ಹಣ 2000 ಕೋಟಿ ಬಾಕಿ ಉಳಿಸಿಕೊಂಡಿದೆ. ರಾಷ್ಟ್ರೀಯ ಪೌರತ್ವದ ಹೆಸರಿನಲ್ಲಿ ದೇಶವನ್ನು ತುಕಡೆ ತುಕಡೆ ಮಾಡುತ್ತಿದೆ. ರೈತರ ಆತ್ಮಹತ್ಯೆಗಳು ಹೆಚ್ಚುತ್ತಿವೆ. ಹಾಗೂ ಕೃಷಿ ಕೂಲಿ ಕಾರ್ಮಿಕರ ಆತ್ಮಹತ್ಯೆಗಳು ಇನ್ನೂ ದುಪ್ಪಟ್ಟಾಗುತ್ತಿವೆ. ಇದು ಹೆಚ್ಚು ಆತಂಕದ ಸಂಗತಿಯಾಗಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಬಡವರನ್ನು ಸಂಪೂರ್ಣ ಅಪಾಯದ ಕೂಪಕ್ಕೆ ತಳ್ಳಿ ಉಳ್ಳವರ ಪರವಾಗಿ ಧ್ರಾಷ್ಟತೆಯಿಂದ ಅಡಿಯಿಡುತ್ತಿವೆ. ಇದರ ಫಲಿತಾಂಶವೇನೆಂದರೆ ದೇಶದ ಜಿಡಿಪಿಯು 4.5 ಕ್ಕೆ ಇಳಿದಿದೆ. ಬಾಬಾ ಸಾಹೇಬ ಅಂಬೇಡ್ಕರರು ಕೊಟ್ಟ ಸಂವಿಧಾನವನ್ನು ಕಿತ್ತು ಹಾಕಿ ಮನುಸ್ಮೃತಿ ತರಲು ಮೋದಿ ಸರಕಾರ ಹೊರಟಿದೆ. ಆದ್ದರಿಂದ "ಶ್ರಮಿಕರೆಲ್ಲ ಒಂದಾಗಬೇಕೆಂದು, ಹೋರಾಡಬೇಕೆಂದು" ಕರೆ ನೀಡಿದರು.

ಅಖಿಲ ಭಾರತ ಕೃಷಿ ಕೂಲಿಕಾರ್ಮಿಕರ ಸಂಘದ ಅಧ್ಯಕ್ಷರಾಗಿರುವ ತಿರುವನಾಕ್ಕರಸು ಅತಿಥಿಗಳಾಗಿ ಮಾತನಾಡುತ್ತ 'ದುಡಿಯುವ ಜನತೆಯ ಮುಂದೆ ಬಹು ದೊಡ್ಡ ಸವಾಲುಗಳು ಎದುರಾಗಿವೆ. ದಲಿತ ದಮನಿತ ಜನತೆಯನ್ನು ಒಡೆದು ಆಳುವ ಷಡ್ಯಂತ್ರವನ್ನು ಕೇಂದ್ರ ರಾಜ್ಯ ಸರಕಾರಗಳು ಜಾರಿಗೊಳಿಸುತ್ತಿವೆ. ಆದ್ದರಿಂದ ಶ್ರಮಿಕರು ನಿಜವಾದ ಶತೃವನ್ನು ಗುರುತಿಸುವಂಥ ತಿಳುವಳಿಕೆ ಪಡೆಯಬೇಕಿದೆ. ಆಂತರಿಕ ಕಿತ್ತಾಟದಿಂದ ಶತೃಗಳು ಸಲೀಸಾಗಿ ಬಡತನ ನಿರುದ್ಯೋಗ ಸೃಷ್ಟಿಸುತ್ತಲೇ ಐಕ್ಯತೆ ಒಡೆಯುತ್ತಿದ್ದಾರೆ. ಕೃಷಿಕೂಲಿಕಾರ್ಮಿಕರಿಗೆ ವರ್ಷದುದ್ದಕ್ಕೂ ಕೆಲಸ ಸಿಗುವುದಿಲ್ಲ. ಉದ್ಯೋಗ ಖಾತ್ರಿ ಕಾಯ್ದೆಯು ಕೊಂಚ ಆಸರೆಯಾಗಿದೆ. ಆದರೆ ಇದನ್ನೂ ಸಂಪೂರ್ಣ ಜಾರಿ ಮಾಡುತ್ತಿಲ್ಲ. ನೂರು ದಿನಗಳ ಕೆಲಸವನ್ನು ಪ್ರತಿ ಕುಟುಂಬಕ್ಕೆ ಕೊಡುವಲ್ಲಿ ಸರಕಾರವು ವಿಫಲವಾಗಿದೆ. ಎರಡು ನೂರು ದಿನಗಳು ಮತ್ತು ದಿನಕ್ಕೆ ರೂ. 600 ಕೂಲಿ ಕೊಡಲು ಸಾಧ್ಯವಾಗಬೇಕು. ಸಮ್ಮೇಳನದಲ್ಲಿ ಈ ಕುರಿತು ಚರ್ಚಿಸಿ ಹೋರಾಟ ರೂಪಿಸಬೇಕಿದೆ. ಅದಕ್ಕಾಗಿ ಕೃಷಿ ಕೂಲಿ ಕಾರ್ಮಿಕರು ಸಂಘಟನೆಯನ್ನು ಬಲಗೊಳಿಸಿಕೊಂಡು ಹೋರಾಡಬೇಕು. ಮತ್ತು ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಕೃಷಿ ಕೂಲಿಕಾರ್ಮಿಕರಾಗಿದ್ದಾರೆ. ಮಹಿಳೆಯರ ನಾಯಕತ್ವದ ಮುಂಚೂಣಿಗಾಗಿ ಸಂಘಟನೆಯು ಆದ್ಯತೆಯಾಗಿ ಪರಿಗಣಿಸಬೇಕು ಎಂದು ಸಂಘಟಕರಿಗೆ ಕಿವಿ ಮಾತು ಹೇಳಿದರು. ಮತ್ತು ಮಹಿಳೆ ಮಕ್ಕಳ ಮೇಲೆ ಆಗುತ್ತಿರುವ ಅನ್ಯಾಯ ಅತ್ಯಾಚಾರ ಕೊಲೆಗಳನ್ನು ಖಂಡಿಸಿ ಹೋರಾಟ ರೂಪಿಸಬೇಕು ಎಂದು ಹೇಳಿದರು.

ಆರಂಭದಲ್ಲಿ ಕೆ. ನೀಲಾ ಸ್ವಾಗತಿಸಿ ಕಲಬುರಗಿ ಜಿಲ್ಲೆಯ ಬಹುಸಾಂಸ್ಕೃತಿಕ ಪರಂಪರೆ, ಶ್ರಮಿಕ ಲೋಕದ ವಾಸ್ತವ ಚಿತ್ರಣ ಕೊಡುತ್ತ, ಕಲಬುರಗಿ ನೆಲವು ಬುದ್ಧ ಬಸವ ಅಂಬೇಡ್ಕರ್ ನೆಲವಾಗಿದೆ. ಎಲ್ಲ ಧರ್ಮದ ಜನತೆಯು ಕೂಡಿ ಬದುಕುತ್ತಾರೆ ಮತ್ತು ರಾಜ್ಯದ ಎಲ್ಲ ಜಿಲ್ಲೆಗಳಿಗಿಂತಲೂ ಕಲಬುರಗಿಯಲ್ಲಿ ಕೃಷಿ ಕೂಲಿಕಾರ್ಮಿಕರ ಸಂಖ್ಯೆ ಹೆಚ್ಚಿದೆ. ಇಲ್ಲಿ ಕಿತ್ತು ತಿನ್ನುವ ಬಡತನವೂ ಇದೆ. ಆದ್ದರಿಂದ ಕೃಷಿ ಕೂಲಿಕಾರ್ಮಿಕರ ಸಂಘಟನೆಯ ಸಮ್ಮೇಳನಕ್ಕೆ ಬಂದ ರಾಜ್ಯ ಪ್ರತಿನಿಧಿಗಳು ಮೂರು ದಿನಗಳ ಕಾಲ ಸಂಘಟನೆಯು ಬಲಗೊಳಿಸುವ ಐಕ್ಯತೆಯಿಂದ ಮುನ್ನಡೆಯುವ ದಿಕ್ಕಿನತ್ತ ಇನ್ನು ಗಟ್ಟಿಯಾಗಿ ಹೆಜ್ಜೆ ಹಾಕಲಿ ಎಂದು ಹೇಳಿ ಎಲ್ಲರನ್ನು ಸ್ವಾಗತಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಯು. ಬಸವರಾಜ, ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರಾದ ಮಾರುತಿ ಗೋಖಲೆ ಮಾತಾಡಿದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿರುವ ನಿತ್ಯಾನಂದಸ್ವಾಮಿಯವರು ಮಾತನಾಡಿ 'ಕೃಷಿ ಕೂಲಿಕಾರರು ಇತರ ಶ್ರಮಿಕರೊಂದಿಗೆ ಐಕ್ಯತೆಯಿಂದ ಹೋರಾಟ ರೂಪಿಸಿಕೊಳ್ಳಲು ಮುನ್ನಡೆಯೋಣ, ಸರಕಾರದಿಂದ ಆಗುತ್ತಿರುವ ಆರ್ಥಿಕ, ಸಾಂಸ್ಕೃತಿಕ ಧಾಳಿಯನ್ನು ಹಿಮ್ಮೆಟ್ಟಿಸೋಣ ಎಂದು ಹೇಳಿದರು.

ರಾಜ್ಯ ಕಾರ್ಯದರ್ಶಿಯಾಗಿರುವ ಚಂದ್ರಪ್ಪ ಹೊಸಕೇರಾ ಇವರು ಕಾರ್ಯಕ್ರಮ ನಿರೂಪಿಸಿದರು. ಭೀಮಶೆಟ್ಟಿ ಯಂಪಳ್ಳಿ ಇವರು ವಂದನಾರ್ಪಣೆ ಸಲ್ಲಿಸಿದರು. ಮಲ್ಲಮ್ಮ ಕೋಡ್ಲಿ, ಲವಿತ್ರ ವಸ್ತ್ರದ ಇವರು ಕ್ರಾಂತಿ ಗೀತೆಗಳನ್ನು ಹಾಡಿದರು. ಕಾರ್ಯಕ್ರಮದಲ್ಲಿ ಮೇಘರಾಜ ಕಠಾರೆ, ಪಿ.ಕೆ. ತಿವಾರಿ ಮತ್ತು ಶರಣಬಸವ ಮಮಶೆಟ್ಟಿ ಇವರು ಉಪಸ್ಥಿತರಿದ್ದರು.

ಮಹಿಳೆಯರ ಮೇಲಿನ ದೌರ್ಜನ್ಯ ವಿರೋಧಿಸಿ ಎಸ್‌ಎಫ್‌ಐ, ಜೆಎಂಎಸ್, ಸಿಐಟಿಯು ಜಂಟಿ ಪ್ರತಿಭಟನೆ

ಇತ್ತೀಚಿನ ಅತ್ಯಾಚಾರ ಮತ್ತು ಕೊಲೆ, ಕೊಲೆಯ ಪ್ರಯತ್ನದ ಪ್ರಕರಣಗಳಿಗೆ ಸಂಬಂಧಿಸಿದಂತೆ ಪೋಲೀಸರ ಕ್ರಿಯೆ ಮತ್ತು ನಿಷ್ಕ್ರಿಯೆ, ಆಡಳಿತ ವ್ಯವಸ್ಥೆಯ ಹಾಗೂ ನ್ಯಾಯ ವ್ಯವಸ್ಥೆಯ ಸಂಪೂರ್ಣ ವೈಫಲ್ಯವನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಭಾರತ ವಿದ್ಯಾರ್ಥಿ ಫೆಡರೇಷನ್ (SFI) ಸಿಐಟಿಯು ಸಂಘಟನೆಗಳು ತೀವ್ರವಾಗಿ ಖಂಡಿಸಿ ಇಂದು ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದ ಬಳಿ ಪ್ರತಿಭಟನೆ ನಡೆಸಿದರು.

2012 ರಲ್ಲಿ ದೆಹಲಿಯಲ್ಲಿ ನಿರ್ಭಯ ಘಟನೆ ಸಂಭವಿಸಿದ ಸಂಧರ್ಬದಲ್ಲಿ ವಿರೋಧ ಪಕ್ಷದಲ್ಲಿದ್ದ ಬಿ.ಜೆ.ಪಿ ಇಂದು ಕೇಂದ್ರದಲ್ಲಿ ಅಧಿಕಾರದಲ್ಲಿದ್ದು, ಅಂದು ತಾನು ಜನಪರ ಎಂದು ಬಿಂಬಿಸಲು ಪ್ರಯತ್ನಿಸಿ, ಇಂದು ಆ ಪಕ್ಷದ ಸುಮಾರು 39ಕ್ಕೂ ಹೆಚ್ಚು ಸಂಸದರು ಹಾಗು ಶಾಸಕರು ಅತ್ಯಾಚಾರ ಪ್ರಕರಣಗಳಲ್ಲಿ ಭಾಗಿಯಾಗಿರುವುದು, ಅವರಿಂದ ಮಹಿಳೆಯರಿಗೆ ನ್ಯಾಯ ದೊರಕುವುದಿಲ್ಲ ಎಂದು ಸ್ಪಷ್ಟವಾಗುತ್ತಿದೆ. ಇದೇ ಅಲ್ಲದೇ ನಿರ್ಭಯ ಪ್ರಕರಣದ ನಂತರ ಕೇಂದ್ರ ಸರ್ಕಾರಕ್ಕ ಸಲ್ಲಿಕೆಯಾದ ನ್ಯಾಯಮೂರ್ತಿ ವರ್ಮಾ ರವರ ವರಿದಿಯ ಶಿಫಾರಸ್ಸುಗಳನ್ನು ಕೂಡ ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗದ ಕಾರಣ ದಿನೇ ದಿನೇ ಇಂತಹ ಅತ್ಯಾಚಾರ, ಲೈಂಗಿಕ ದೌರ್ಜನ್ಯ ಮತ್ತು ಮಹಿಳೆಯರ ಮೇಲಿನ ದಬ್ಬಾಳಿಕೆಗಳು ಜಾಸ್ತಿಯಾಗುತ್ತಿವೆ.

ಉತ್ತರಪ್ರದೇಶದಲ್ಲಿ ಧೈರ್ಯ ಮಾಡಿ ದೂರು ದಾಖಲಿಸಿದ ಉನ್ನಾವ್ನ ಅತ್ಯಾಚಾರ ಸಂತ್ರಸ್ತೆಯ ಕೊಲೆ ನಡೆದಿದೆ. ಹಾಗೆಯೇ ಎರಡನೇ ಪ್ರಕರಣದ ಆರೋಪಿಗಳು ಜಾಮೀನಿನ ಮೇಲೆ ಬಿಡುಗಡೆಯಾಗಿ ಬಂದು ಸಂತ್ರಸ್ತೆಯ ಮೇಲೆ ಆಸಿಡ್ ಸುರಿದು ಕೊಲೆ ಘಟನೆಯೂ ನಡೆದಿದೆ. ಅಲ್ಲಿ ಸಾಕ್ಷಿಯೂ ಆದ ಸಂತ್ರಸ್ತೆಯ ರಕ್ಷಣೆ ಮಾಡುವಲ್ಲಿ ಪೋಲೀಸರು ವಿಫಲರಾಗಿದ್ದಾರೆ. ಇದು ಉತ್ತರ ಪ್ರದೇಶದ ಸರ್ಕಾರದ ಮಹಿಳಾ ವಿರೋಧಿ ನಡೆಯಾಗಿದೆ. ಈಗ ತೆಲಂಗಾಣದಲ್ಲಿ ನಡೆದ ಅತ್ಯಂತ ಹೇಯ ಅತ್ಯಾಚಾರ ಮತ್ತು ಸಜೀವ ದಹನದ ಪ್ರಕರಣದ ಎಲ್ಲ 4 ಆರೋಪಿಗಳನ್ನು ವಿಚಾರಣೆ ಮತ್ತು ನ್ಯಾಯಾಲಯದ ಕಲಾಪಗಳು ಪ್ರಾರಂಭವಾಗುವ ಮುನ್ನವೇ ಪೋಲೀಸ್ ಎನ್ಕೌಂಟರ್ ನಲ್ಲಿ ಸಾಯಿಸಲಾಗಿದೆ.

ಪ್ರಾರಂಭದಲ್ಲಿಯೇ ಸಂತ್ರಸ್ತೆ ಕಾಣೆಯಾಗಿದ್ದಾರೆ ಎಂದ ದೂರು ಬಂದಾಗಲೇ ಪೋಲೀಸರು ದೂರು ಸ್ವೀಕರಿಸಲು ತಕರಾರು ಮಾಡಿದ್ದರು ಎಂಬುದನ್ನಿಲ್ಲಿ ನೆನಪಿಸಿಕೊಳ್ಳಬೇಕು. ಒಂದೆಡೆ ಸಮಾಜದ 'ಪ್ರತಿಷ್ಠಿತ' ವಲಯದಿಂದ ಆರೋಪಿಗಳನ್ನು ಹೊಡೆದು ಸಾಯಿಸಬೇಕು ಎಂಬ ಕೂಗು, ಇನ್ನೊಂದೆಡೆ ಕಾನೂನಿನ ಕೆಲಸಗಳು ಪ್ರಾರಂಭವಾಗುವ ಮೊದಲೇ ಆರೋಪಿಗಳನ್ನೇ ಮುಗಿಸಿಬಿಟ್ಟಿದ್ದು, ಆ ಮೂಲಕ ಕಪಟತನದಿಂದ ವ್ಯವಸ್ಥೆಯ ದೋಷ ವೈಫಲ್ಯಗಳನ್ನು ಮುಚ್ಚಿಕೊಳ್ಳಲು, ಹಾಗೂ ಜನರ ಆಕ್ರೋಶದ ದಿಕ್ಕು ತಪ್ಪಿಸುವುದೇ ಉದ್ದೇಶವಾಗಿದೆ. ಇದೇ ಸಂಧರ್ಬದಲ್ಲಿ ಪ್ರಭಾವಿ ವ್ಯಕ್ತಿಗಳು ಅತ್ಯಾಚಾರ, ಲೈಂಗಿಕ ದೌರ್ಜನ್ಯ ಮತ್ತುದಬ್ಬಾಳಿಕೆಗಳಲ್ಲಿಭಾಗಿಯಾಗಿರುವಪ್ರಕರಣಗಳಲ್ಲಿ ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಆರೋಪಿಗಳನ್ನು ರಕ್ಷಿಸುವಂತಾಹ ನೀತಿಗಳನ್ನು ಅನುಸರಿಸುತ್ತಿದೆ. ಇದೇ ಮುಂದುವರೆದರೆ ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ, ವಿಕೃತಿಗಳು ಹಾಗೂ ಶಿಕ್ಷೆಯ ಪ್ರಮಾಣದ ಇಳಿಕೆಯಲ್ಲಿ ಯಾವುದೇ ಬದಲಾವಣೆ ಕಾಣುವುದು ಸಾಧ್ಯವಿಲ್ಲ.

ಆದ್ದರಿಂದ ನಾವು ನ್ಯಾಯದಾನ ವ್ಯವಸ್ಥೆಯಲ್ಲಿ ತೀವ್ರ ಸುಧಾರಣೆಯನ್ನು ಮತ್ತು ಅತ್ಯಾಚಾರ ಸಂತ್ರಸ್ತರಿಗೆ ಸೂಕ್ತ ರಕ್ಷಣೆಯನ್ನು ಒತ್ತಾಯಿಸುತ್ತೇವೆ. ಅಲ್ಲದೇ ಇಂಥಹ ಪ್ರಕರಣಗಳಲ್ಲಿ ಪೋಲಿಸರನ್ನು ಹೊಣೆಗಾರರನ್ನಾಗಿಸುವ ಹಾಗೂ ಸ್ವತಂತ್ರ ಸಂಸ್ಥೆಯ ಮೂಲಕ ತನಿಖೆಗೆ ಒತ್ತಾಯಿಸುತ್ತೇವೆ. ಈ ಕೂಡಲೇ ನಿರ್ಭಯ ಫಂಡ್ ದ ಪರಿಪೂರ್ಣ ಸಬ್ಬಳಕೆ ಹಾಗು ನ್ಯಾಯಮೂರ್ತಿ ವರ್ಮಾ ರವರ ವರಿದಿಯ ಶಿಫಾರಸ್ಸುಗಳನ್ನು ಕಟ್ಟುನಿಟ್ಟಾಗಿ ಜಾರಿಯಾಗಬೇಕು ಮತ್ತು ದಿನೇ ದಿನೇ ಮಹಿಳೆಯರ ಮೇಲೆ ಹೆಚ್ಚಾಗುತ್ತಿರುವ ಅತ್ಯಾಚಾರ, ಲೈಂಗಿಕ ದೌರ್ಜನ್ಯ ಮತ್ತು ದಬ್ಬಾಳಿಕೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾನೂನುಗಳು ಸರ್ಮಪಕವಾಗಿ ಜಾರಿಯಾಗುವಂತೆ ನೋಡಿಕೊಳ್ಳಬೇಕು. ಮಹಿಳೆಯರ ಮೇಲಿನ ಎಲ್ಲ ರೀತಿ ದೌರ್ಜನ್ಯಗಳನ್ನು ಹಿಮ್ಮೆಟಿಸಲು ಹಾಗು ನೊಂದವರಿಗೆ ನ್ಯಾಯ ಸಿಗುವಂತಾಗಲು ಇನ್ನಷ್ಟು ತ್ವರಿತ ನ್ಯಾಯಲಯಗಳ ರಚನೆಯೊಂದಿಗೆ ಕಾಲಮಿತಿಯೊಂದಿಗೆ ವಿಚಾರಣೆಗಳು ನಡೆದು ಶೀಘ್ರದಲ್ಲಿ ನ್ಯಾಯ ದೊರಕುವಂತಾಗಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಗೌರಮ್ಮ, SFI ರಾಜ್ಯಾದ್ಯಕ್ಷ ವಿ.ಅಂಬರೀಶ್ ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ, CITU ರಾಜ್ಯ ಕಾರ್ಯದರ್ಶಿ ಪ್ರತಾಪ್ ಸಿಂಹ ಹಾಗೂ SFI ನ ವಾಸುದೇವ ರೆಡ್ಡಿ, ಗಾಯತ್ರಿ, JMS ನ ರಾಜೇಶ್ವರಿ, ಲಲಿತಾ ಶಣೈ, ಶ್ರೀಮತಿ, ಬಸ್ಸಮ್ಮ, ಅಂಚೇ ನೌಕರ ಸಂಘಟನೆಯ ಸೀತಾಲಕ್ಷ್ಮಿ, ವಕೀಲರಾದ ಹುಳ್ಳಿ ಉಮೇಶ್ ಸೇರಿದಂತೆ ಅನೇಕರಿದ್ದರು.



ಮಂಗಳೂರಿನಲ್ಲಿ ಮೀನು ಲಾರಿ ಚಾಲಕರ ಯಶಸ್ವಿ ಮುಷ್ಕರ

ವರದಿ: **ವಾ.ಉ.**

ಕರಾವಳಿ ಜಿಲ್ಲೆಗಳಾದ ದ.ಕ., ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಮೀನು ಸಾಗಾಟ ಲಾರಿಗಳ ತ್ಯಾಜ್ಯ ನೀರು ಹೊರ ಚೆಲ್ಲಲು ಅವಕಾಶ ನೀಡಬೇಕೆಂದು ಒತ್ತಾಯಿಸಿ ದಿನಾಂಕ 12–12–2019 ರಂದು ಮೀನು ಸಾಗಾಟ ಲಾರಿ ಚಾಲಕರು 24 ಗಂಟೆಗಳ ಯಶಸ್ವಿ ಮುಷ್ಕರ ನಡೆಸಿದರು. ಮಂಗಳೂರು ಬಂದರು ದಕ್ಕೆಯಲ್ಲಿ ಮೀನು ಸಾಗಾಟ ಮಾಡುವ ಲಾರಿ ಚಾಲಕರ ಬೇಡಿಕೆಗೆ ಬೆಂಬಲಿಸಿ ಮೀನು ಮಾಲೀಕರು ಹಾಗೂ ವ್ಯವಹಾರ ನಡೆಸುವವರು ತಮ್ಮ ವ್ಯವಹಾರಗಳನ್ನು ಬಂದ್ ಮಾಡಿದ್ದರು. ದಕ್ಕೆ ಪೂರ್ತಿ ಶಾಂತ ರೀತಿಯಲ್ಲಿ ಇತ್ತು.



12 ಡಿಸೆಂಬರ್ 2019 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಮುಂದುಗಡೆ ಪ್ರತಿಭಟನಾ ಪ್ರದರ್ಶನ ನಡೆಸಿ ದ.ಕ. ಜಿಲ್ಲಾಧಿಕಾರಿಗಳ ಮುಖಾಂತರ ಸರಕಾರಕ್ಕೆ ಮನವಿಯನ್ನು ಸಲ್ಲಿಸಲಾಯಿತು. ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಮೋಟಾರ್ ಟ್ರಾನ್ಸ್‌ಪೋರ್ಟ್ ಎಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ (ರಿ) ಸಿಐಟಿಯು ಇದರ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿಯವರು ಮಾತನಾಡಿದರು. ಅವರು ಮಾತನಾಡುತ್ತಾ ಮೀನುಗಾರಿಕೆ ಅಭಿವೃದ್ಧಿಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಅಪಾರ ಪ್ರಮಾಣದ ಉದ್ಯೋಗವನ್ನು ನೀಡಿದೆ. ಮೀನು ಆಹಾರ ಉತ್ಪನ್ನವಾಗಿದೆ. ಲಾರಿ ಚಾಲಕರಿಗೆ ಕೂಡಾ ಉದ್ಯೋಗವನ್ನು ನೀಡಿದೆ. ಜಿಲ್ಲೆ, ಹೊರಜಿಲ್ಲೆ ಮತ್ತು ರಾಜ್ಯಕ್ಕೆ ಮೀನು ಸಾಗಾಟ ಮಾಡುವ ಲಾರಿ ಚಾಲಕರಿಗೆ ಜೀವಕ್ಕೆ ಭದ್ರತೆ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ. ಇತ್ತೀಚೆಗಿನ ವರ್ಷಗಳಲ್ಲಿ ಮೀನು ಸಾಗಾಟ ಮಾಡುವ ಲಾರಿಗಳಿಗೆ ತ್ಯಾಜ್ಯ ನೀರು ತುಂಬುವ 400 ಲೀಟರ್ ಟ್ಯಾಂಕ್ ಅಳವಡಿಸಲಾಗಿದೆ. ಅದರಲ್ಲಿ ನೀರು ತುಂಬಿದ ನಂತರ ನೀರು ಹೊರಚೆಲ್ಲುತ್ತದೆ. ಆ ನೀರನ್ನು ಚಾಲಕರು ಎಲ್ಲಿಯಾದರೂ ಖಾಲಿ ಮಾಡಬೇಕಾಗಿದೆ. ಆದರೆ ವ್ಯವಸ್ಥೆ ಇಲ್ಲ. ನೀರು ರಸ್ತೆಗೆ ಚೆಲ್ಲುತ್ತದೆ ಎಂಬ ಕಾರಣಕ್ಕೆ ಲಾರಿ ಚಾಲಕರ ಮೇಲೆ ಮಾರಣಾಂತಿಕ ಹಲ್ಲೆ, ಹಣ ಲೂಟಿ ಮಾಡುವುದು ಮಾಮೂಲಾಗಿದೆ. ಇತ್ತೀಚೆಗೆ 4 ಲಾರಿಗಳನ್ನು ತಡೆದು ಪೊಲೀಸ್ ಠಾಣೆಗೆ ಕೊಂಡೊಯ್ದು ಚಾಲಕರ ಮೇಲೆ ಎಫ್‌ಐಆರ್ ಹಾಕಲಾಗಿದೆ. ಈ ರೀತಿಯ ಮಾನಸೀಕ, ದೈಹಿಕ ಹಿಂಸೆಯನ್ನು ಕೂಡಾ ನೀಡಲಾಗಿದೆ ಎಂದ ಅವರು, ಮೋಟಾರ್ ವೆಹಿಕಲ್ ಆಕ್ಟ್ ಪ್ರಕಾರ ಕಾನೂನು ಪ್ರಕಾರ ದುಡಿಯುವ ಚಾಲಕರ ಮೇಲೆ ಹಿಂಸೆ ನಡೆಯುತ್ತಿರುವುದು ಖಂಡನೀಯ. ಈಗಾಗಲೇ ಸಚಿವರಿಗೆ, ಸಂಸದರಿಗೆ, ಶಾಸಕರಿಗೆ, ಜಿಲ್ಲಾಡಳಿತಕ್ಕೆ ಮನವಿ ನೀಡಿದ್ದರೂ ಫಲಿತಾಂಶ ಶೂನ್ಯವಾಗಿದೆ. ಕೂಡಲೇ ಜಂಟಿ ಸಭೆಯನ್ನು ಕರೆದು ಮೂರು ಜಿಲ್ಲೆಗಳಲ್ಲೂ ಮೀನು ತ್ಯಾಜ್ಯ ನೀರು ಹೊರ ಚೆಲ್ಲಲು ವ್ಯವಸ್ಥೆ ಮಾಡಬೇಕೆಂದು ಅವರು ಒತ್ತಾಯಿಸಿದರು.

ಸಭೆಯನ್ನುದ್ದೇಶಿಸಿ ಕರಾವಳಿ ಕರ್ನಾಟಕ ಚಾಲಕರ ಸಂಘದ ಅಧ್ಯಕ್ಷರಾದ ಮಹೇಶ್, ಪ್ರಧಾನ ಕಾರ್ಯದರ್ಶಿ ಹನೀಫ್ ಹಾಗೂ ಮಂಗಳೂರು ದಕ್ಕೆ ಮೀನು ಲಾರಿ ಚಾಲಕರ ಸಂಘದ ಗೌರವ ಅಧ್ಯಕ್ಷರಾದ ಸಿ.ಕೆ. ಇಸ್ಮಾಯಿಲ್ ರವರು ಮಾತನಾಡಿದರು.

ಪ್ರಾರಂಭದಲ್ಲಿ ಮಂಗಳೂರು ದಕ್ಕೆ ಮೀನು ಲಾರಿ ಚಾಲಕರ ಸಂಘದ ಅಧ್ಯಕ್ಷ ಅಮೀರ್ ಹುಸೈನ್ ಸ್ವಾಗತಿಸಿ ಕೊನೆಯಲ್ಲಿ ಅಧ್ಯಕ್ಷ ಅಬ್ದುಲ್ ಲತೀಫ್‌ರವರು ಧನ್ಯವಾದ ನೀಡಿದರು. ●

ಉನ್ನಾವೊ ಅತ್ಯಾಚಾರಕ್ಕೊಳಗಾದ ಸಂತ್ರಸ್ತೆಯನ್ನು ಬೆಂಕಿ ಹಚ್ಚಿ ಕೊಂದ ಅತ್ಯಾಚಾರಿಗಳಿಗೆ ಉಗ್ರ ಶಿಕ್ಷೆ ವಿಧಿಸುವಂತೆ ಒತ್ತಾಯಿಸಿ ಎಸ್‌ಎಫ್‌ಐ- ಡಿವೈಎಫ್‌ಐ ಪ್ರತಿಭಟನೆ

ಹಾವೇರಿ: ಉತ್ತರ ಪ್ರದೇಶದ ಉನ್ನಾವ್‌ನಲ್ಲಿ ಅತ್ಯಾಚಾರಕ್ಕೊಳಗಾಗಿದ್ದ ಸಂತ್ರಸ್ತೆಯನ್ನು ಜಾಮೀನಿನ ಹೊರಗಡೆ ಬಂದಿದ್ದ ಆರೋಪಿಗಳು ಬೆಂಕಿ ಹಚ್ಚಿ ಕೊಂದಿರುವ ಅಮಾನುಷ ಘಟನೆಯನ್ನು ಖಂಡಿಸಿ ಹಾಗೂ ಕೊಲೆಪಾತಕರಿಗೆ ಉಗ್ರ ಶಿಕ್ಷೆ ವಿಧಿಸಲು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ಸರಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿಯರು ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು.

ನಗರದ ಇಜಾರಿ ಲಕಮಾಪೂರದಲ್ಲಿರುವ ಕಾಲೇಜು ಎದುರು ಪ್ರತಿಭಟನಾ ಸಮಾವೇಶ ನಡೆಸದ ವಿದ್ಯಾರ್ಥಿನಿಯರು ಪ್ರತಿಭಟನೆಗೆ ಮುಂಚೆ ಅತ್ಯಾಚಾರ ಘಟನೆಗಳಲ್ಲಿ ಮೃತರಾದವರಿಗೆ ಮೌನಾಚರಣೆ ನಡೆಸಿ ಸಂತಾಪ ಸೂಚಿಸಿದರು.

ನಂತರ ಪ್ರತಿಭಟನಾಕಾರರನ್ನುದ್ದೇಶಿಸಿ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಮಾತನಾಡಿ, ಉತ್ತರ ಪ್ರದೇಶದ ಉನ್ನಾವೊ ಅತ್ಯಾಚಾರ ಸಂತ್ರಸ್ತೆ ಮೇಲೆ ಗುರುವಾರ ರಂದು ಜಾಮೀನಿನ ಮೇಲೆ ಹೊರಗಡೆ ಇದ್ದ ಆರೋಫಿಗಳು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಭೀಕರವಾಗಿ ಕೊಲ್ಲಲು ಯತ್ನಿಸಿದ್ದು, ಶೇ.90ರಷ್ಟು ದೇಹದ ಭಾಗ ಬೆಂಕಿಯಲ್ಲಿ ಬೆಂದು ಸಾವು ಬದುಕಿನ ಮಧ್ಯೆ ಹೋರಾಡುತ್ತಿದ್ದ ಸಂತ್ರಸ್ತೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾಳೆ. ಈ ಹೇಯ ಕೃತ್ಯವೆಸಗಿದ ಅತ್ಯಾಚಾರಿ ಜೀವವಿರೋಧಿ ಹಂತಕರಿಗೆ ಉಗ್ರ ಶಿಕ್ಷೆಯನ್ನು ನೀಡಲೇಬೇಕಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಮೊದಲು 2017ರಲ್ಲಿ ಅಂದಿನ ಬಿಜೆಪಿ ಶಾಸಕ ಕುಲದೀಪ್ ಸೆಂಗಾರ್ ಅತ್ಯಾಚಾರವೆಸಗಿದ ಆರೋಪಿಯಾಗಿದ್ದಾರೆ. 2018 ಡಿಸೆಂಬರ್ ನಲ್ಲಿ 23 ವರ್ಷದ ಸಂತ್ರಸ್ತೆ ಮೇಲೆ ಐವರಿಂದ ಸಾಮೂಹಿಕ ಅತ್ಯಾಚಾರ ನಡೆಯಿತು. ಇದೇ ಕೇಸ್ ನಲ್ಲಿದ್ದ ಆರೋಪಿಗಳು ಸಂತ್ರಸ್ತೆಗೆ ಪೆಟ್ರೋಲ್ ಸುರಿದ್ದು ಬೆಂಕಿ ಹಚ್ಚಿ ಕೊಲ್ಲಲು ಮುಂದಾಗಿದ್ದು ನಾಗರೀಕ ಸಮಾಜ ತಲೆ ತಗ್ಗಿಸುವ ಘಟನೆಯಾಗಿದೆ. ಕೂಡಲೇ ಇವರಿಗೆ ಅತ್ಯುಘ್ರ ಶಿಕ್ಷೆಯನ್ನು ವಿಧಿಸಬೇಕು ಎಂದು ಆಗ್ರಹಿಸಿದರು.

ಉತ್ತರ ಪ್ರದೇಶದ ಕನೂನು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ಈ ಘಟನೆಯೇ ಜೀವಂತ ಸಾಕ್ಷಿ. ಈ ವರ್ಷದಲ್ಲಿಯೇ 80ಕ್ಕಿಂತ ಇದುವರೆಗೆ ಅತ್ಯಚಾರ ಪ್ರಕರನಗಳು ದಾಖಲಾಗಿವೆ. ಇದರ ಜೊತೆಗೆ ಇನ್ನುರುರಷ್ಟು ಲೈಂಗಿಕ ಶೋಷನೆಯ ಪ್ರಕರನಗಳು ಉನ್ನಾಂವ್ ಜಿಲ್ಲೆಯಲ್ಲಿಯೇ ದಾಖಲಾಗಿವೆ. ಸ್ವತಃ ಆಳುವ ಪಕ್ಷದ ಶಾಸಕನೋರ್ವ ಈ ಹೇಯ ಕೃತ್ಯದಲ್ಲಿ ಆರೋಪಿಯಾಗಿದ್ದರು. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ನಿರ್ಲಜ್ಜತೆಯಿಂದ ನಡೆದುಕೊಳ್ಳುತ್ತಿರೋದು ಖಂಡನೀಯ ಎಂದು ಕಿಡಿಕಾರಿದರು.

ಎಸ್‌ಎಫ್‌ಐ ಜಿಲ್ಲಾ ಸಹ ಕಾರ್ಯದರ್ಶಿ ಬಸವರಾಜ ಭೊವಿ ಮಾತನಾಡಿ, ವಿದ್ಯಾರ್ಥಿನಿಯರ ಮತ್ತು ಮಹಿಳೆಯರ ಮೇಲೆ ದಿನನಿತ್ಯವೂ ದೌರ್ಜನ್ಯ, ದಬ್ಬಾಳಿಕೆ ಮತ್ತು ಅತ್ಯಾಚಾರಗಳು ಹೆಚ್ಚಾಗುತ್ತಲೇ ಇವೆ ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆ ನೀಡಿ ಶಿಕ್ಷೆಸುವ ಬದಲು ಆರೋಪಿಗಳಿಗೆ ಜಾಮೀನು ನೀಡಿ ಹೊರಗಡೆ ಬಿಟ್ಟಿರುವುದು ಸರಿಯಲ್ಲ ನ್ಯಾಯಾಲಯದಲ್ಲಿ ಕೇಸ್ ಪೂರ್ಣಗೊಳ್ಳುವವರೆಗೆ ಅತ್ಯಾಚಾರ ಪ್ರಕರಣದ ಆರೋಪಿಗಳಿಗೆ ನ್ಯಾಯಾಲಯಗಳು ಯಾವುದೇ ಕಾರಣಕ್ಕೂ ಜಾಮೀನು ನೀಡಬಾರದು ಎಂದರು.

ಉನ್ನಾವೊ ಮಹಿಳೆಯ ಮೇಲಿನ ಅತ್ಯಾಚಾರ ಸಂಬಂಧಿಸಿದಂತೆ ಆರೋಪಗಳಿಗೆ ನ್ಯಾಯಾಂಗ ಬಂಧನದಲ್ಲಿದ ಆರೋಪಗಳನ್ನು ಜಾಮೀನಿನ ಮೇಲೆ ಹೊರಗಡೆ ಬಿಡಲಾಗಿತ್ತು ಆರೋಪಗಳು ಅತ್ಯಾಚಾರ ಸಂತ್ರಸ್ತೆ ಮೇಲೆ ಬೆಂಕಿ ಹಚ್ಚಿ ಜೀವಂತವಾಗಿ ಸುಟ್ಟು ಹಾಕಿದ್ದಾರೆ. ದೇಶದ ನ್ಯಾಯಾಂಗ ವ್ಯವಸ್ಥೆ ಸರಿಯಾದ ಕಾರ್ಯನಿರ್ವಹಿಸದೆ ಆಳುವ ಸರಕಾರದ ಕೆಲಸ ಮಾಡುತ್ತಿದೆ ಎಂದು ಮೇಲ್ನೋಟಕ್ಕೆ ಕಂಡುಬರುತ್ತಿದೆ ಎಂದರು.

ಈ ರೀತಿಯ ಮಹಿಳೆಯರ ಮೇಲಿನ



ದೌರ್ಜನ್ಯ ಕೃತ್ಯಗಳು ನಿಲ್ಲಿಸಿ ಈ ಎರಡು ಪ್ರಕರಣದ ಆರೋಪಗಳಿಗೆ ಕಠಿಣ ಶಿಕ್ಷೆವಿಧಿಸಬೇಕು ಜೊತೆಗೆ ರಾಜ್ಯದಲ್ಲಿ ಉಗ್ರಪ್ಪ ವರದಿ ಶಿಫಾರಸ್ಸು ಗಳನ್ನು ಮತ್ತು ಕೇಂದ್ರದಲ್ಲಿ ಜಸ್ಟಿಸ್ ವರ್ಮಾ ವರದಿಯು ನೀಡಿರುವ ಶಿಫಾರಸುಗಳನ್ನು ಅನುಷ್ಟಾನಕ್ಕೆ ತರಬೇಕು. ರಾಜ್ಯದ ಎಲ್ಲಾ ಶಾಲಾ ಕಾಲೇಜು ಮತ್ತು ಮಹಿಳೆಯರು ದುಡಿಯುವ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ವಿರೋಧ ಸಮಿತಿಯನ್ನು ರಚಿಸುವುದರ ಜೊತೆಗೆ ಕಡ್ಡಾಯವಾಗಿ ಸಿ.ಸಿ ಟಿ.ವಿ ಅಳವಡಿಕೆ ಮಾಡಬೇಕು ಜೊತೆಗೆ ವಿದ್ಯಾರ್ಥಿನಿಯರಿಗೆ, ಮಹಿಳೆಯರಿಗೆ ಸೂಕ್ತ ಭದ್ರತೆ ನೀಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಕೃಷ್ಣ ಕಡಕೋಳ, ಕಾವ್ಯ ಎಮೆಸ್, ಜ್ಯೋತಿ ಎಸ್. ಕೆ, ನಾಗರತ್ನ ನಾಯಕ, ಸೌಜನ್ಯ, ಲತಾ ಡಿಆರ್, ಪವಿತ್ರಾ ಮುಂತಾದವರು ನೇತೃತ್ವ ವಹಿಸಿದ್ದರು. ಪ್ರತಿಭಟನೆಯಲ್ಲಿ ನೂರಾರು ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

ಬಸವರಾಜ ಭೋವಿ

ಹ.ಬೊ. ಹಳ್ಳಿ: ಜನವಾದಿಯಿಂದ ಮಾನವ ಹಕ್ಕುಗಳ ದಿನಾಚರಣೆ

ಈ ಹಿಂದೆ ನಮ್ಮ ದೇಶದಲ್ಲಿ ದೊಡ್ಡ ಬಂಡವಾಳಗಾರ, ಭೂಮಾಲಕರೇ ಎಲ್ಲಾ ಹಕ್ಕುಗಳನ್ನು ಪಡೆಯುತ್ತಿದ್ದರು. ಎಲ್ಲಾ ಮಹಿಳೆಯರು ತಮ್ಮ ಹಕ್ಕುಗಳಿಂದ ವಂಚಿತರಾಗಿದ್ದರು ಎಂದು ಹಿರಿಯ ವಕೀಲರಾದ ಹೆಚ್. ಸತ್ಯನಾರಾಯಣರವರು ಪಟ್ಟಣದ ಸರಕಾರಿ ನೌಕರರ ಭವನದಲ್ಲಿ ಜನವಾದಿ ಮಹಿಳಾ ಸಂಘಟನೆ ಏರ್ಪಡಿಸಿದ್ದ ಮಾನವ ಹಕ್ಕುಗಳ ದಿನಾಚರಣೆಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಗೌತಮಬುದ್ಧ ಮತ್ತು ಬಸವಣ್ಣನಂತಹ ಶರಣರು ಮಹಿಳೆಯರಿಗೆ ಸ್ವಾತಂತ್ರ್ಯ, ಸಮಾನತೆ, ಜಾತಿ ತಾರತಮ್ಯದ ವಿರುದ್ಧ ಹೋರಾಡಿದ್ದರು. ನಂತರ ಡಾ.ಬಿ.ಆರ್. ಅಂಬೇಡ್ಕರ್ ರವರು ದೇಶಕ್ಕೆ ಸಂವಿಧಾನ ರಚನೆ ಮಾಡಿಕೊಡುವುದರ ಮೂಲಕ ಎಲ್ಲಾ ನಾಗರೀಕರಿಗೂ ಸಮಾನ ಹಕ್ಕುಗಳನ್ನು ಪಡೆಯಲು ಅವಕಾಶ ಮಾಡಿ ಕೊಟ್ಟರು. ಅಮೇರಿಕವು

⇨⇨⇨



ಭತ್ತ ಖರೀದಿ ಕೇಂದ್ರ ಶೀಘ್ರವಾಗಿ ತೆರೆಯಲು ಕರ್ನಾಟಕ ಪ್ರಾಂತ ರೈತ ಸಂಘ ಒತ್ತಾಯ

ಭತ್ತ ಕಟಾವು ಪ್ರಕ್ರಿಯೆ ಪ್ರಾರಂಭವಾಗಿದ್ದು ರೈತರ ಭತ್ತವನ್ನು ಖರೀದಿಸಿಲು ಶೀಘ್ರ ಖರೀದಿ ಕೇಂದ್ರ ತೆರೆಯಬೇಕು ಹಾಗೂ ಓಂಕಾರ ಭತ್ತದ ಕಳಪೆ ಬಿತ್ತನೆ ಬೀಜ ನೀಡಿ ನಷ್ಟಕ್ಕೆ ಒಳಗಾದ ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಮತ್ತು ಇದಕ್ಕೆ ಕಾರಣರಾದ ಅಧಿಕಾರಿಗಳ ಮತ್ತು ಕಂಪನಿ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಎನ್.ಎಲ್. ಭರತ್ ರಾಜ್ ಹೇಳಿದ್ದರು.

ಪ್ರಾಂತ ರೈತ ಸಂಘದ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಾ ಭತ್ತ ಕಟಾವು ಹಂತ ಪ್ರಾರಂಭವಾಗಿದ್ದು ಸರ್ಕಾರ ಮತ್ತು ತಾಲೊಕು ಆಡಳಿತ ಜಿಲ್ಲಾಡಳಿತ ಖರೀದಿ ಪ್ರಕ್ರಿಯೆಯನ್ನ ಪ್ರಾರಂಭ ಮಾಡದೆ ವಿಳಂಬ ಮಾಡುತ್ತಿರುವ ನೀತಿಯನ್ನು ಖಂಡಿಸಿದರು ಈ ರೀತಿ ವಿಳಂಬ ಮಾಡುವುದು ರೈತರನ್ನು ವಂಚಿಸುವ ಕ್ರಮವಾಗಿದೆ ಎಂದು ಆರೋಪಿಸಿದರು ಕಳೆದ ವರ್ಷವೂ ಇದೆ ರೀತಿ ಮಾಡಿ ದಳ್ಳಾಳಿಗಳಿಗೆ ಕೇವಲ 1100–1200 ರೂಗಳಿಗೆ ಕ್ವಿಂಟಾಲ್ ಭತ್ತವನ್ನ ಮಾರಾಟಮಾಡಿ ನಷ್ಟಕ್ಕೆ ಒಳಗಾಗಿದ್ದಾರೆ ಈಗಲೂ ಅಂತಹ ಪರಿಸ್ಥಿತಿ ಬರಬಾರದು ರೈತರಿಗೆ ತುರ್ತು ಹಣಕಾಸಿನ ಅಗತ್ಯ ಇರುವುದರಿಂದ ಮತ್ತು ಭತ್ತವನ್ನು ಶೇಖರಿಸಿಟ್ಟುಕೊಳ್ಳಲು ಸ್ಥಳವಕಾಶದ ಕೊರತೆ ಇರುವುದರಿಂದ ತಕ್ಷಣದಲ್ಲೇ ಭತ್ತ ಮಾರಾಟ ಮಾಡಬೇಕಾದಂತಹ ಅನಿವಾರ್ಯ ಪರಿಸ್ಥಿತಿ ಇರುತ್ತದೆ ಆದ್ದರಿಂದ ಶೀಘ್ರವಾಗಿ ಭತ್ತ ಖರೀದಿ ಕೇಂದ್ರವನ್ನು ತೆರೆಯಬೇಕೆಂದು ರೈತ ಸಂಘ ಒತ್ತಾಯಿಸಿದೆ ಒಬ್ಬ ರೈತರಿಗೆ ಕೇವಲ 40 ಕ್ವಿಂಟಾಲ್ ಮಾತ್ರ ಕೊಂಡುಕೊಳ್ಳುವ ನಿರ್ಬಂಧವನ್ನು ತೆಗೆದು ಹಾಕಬೇಕೆಂದು ಒತ್ತಾಯಿಸಿದರು ಸ್ವಾಮಿನಾಥನ್ ಆಯೋಗದ ಪ್ರಕಾರ ಭತ್ತಕ್ಕೆ ಕನಿಷ್ಠ ಮೂರು ಸಾವಿರ ರೂಪಾಯಿಗಳನ್ನು ನೀಡ ಬೇಕೆಂದು ವರದಿಯಿದೆ ಈಗೆ ಇರುವಾಗ ಕನಿಷ್ಠ ಎರಡೂವರೆ ಸಾವಿರ ರೂಪಾಯಿಯನ್ನಾದರೂ ಕ್ವಿಂಟಲ್ ಭತ್ತಕ್ಕೆ ಕೊಡಬೇಕೆಂದುರು ಸರ್ಕಾರ ಜನಪ್ರತಿನಿಧಿಗಳು ಜಿಲ್ಲಾಡಳಿತ ತಾಲೂಕಾಡಳಿತ ಶೀಘ್ರವಾಗಿ ಕ್ರಮ ವಹಿಸಬೇಕೆಂದು ಒತ್ತಾಯಿಸಿದರು.

ಓಂಕಾರ್ ಕಳಪೆ ಭತ್ತದ ಬಿತ್ತನೆ ಬೀಜವನ್ನು ರೈತರಿಗೆ ನೀಡಿ ಕೋಟ್ಯಾಂತರ ರೂಪಾಯಿ ನಷ್ಟ ಉಂಟುಮಾಡಿದ್ದಾರೆ ನಷ್ಟಕ್ಕೆ ಒಳಗಾದ ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಮತ್ತು ಸಂಭಂಧಿಸಿದ ಅಧಿಕಾರಿಗಳು ಮತ್ತು ಕಂಪನಿ ಮೇಲೆ ಕಾನೂನು ರೀತಿ ಕ್ರಮ ಜರುಗಿಸಿಬೇಕೆಂದು ಒತ್ತಾಯಿಸಿದರು. ಈ ಪತ್ರಿಕಾಗೋಷ್ಠಿಯಲ್ಲಿ ಮಾಜಿ ಪುರಸಭೆ ಅದ್ಯಕ್ಷರಾದ ಎಮ್.ಹೆಚ್. ಕೆಂಪಯ್ಯ ರೈತ ಮುಂಖಡರಾದ ಎಳೇಗೌಡ, ಚಾಂಷುಗರ್ಸ್ ನಿವೃತ್ತ ಅಧಿಕಾರಿ ಪೇಟೆ ಬೀದಿ ಶಿವಣ್ಣ. ಪ್ರಾಂತ ರೈತ ಸಂಘದ ಮುಂಖಡರಾದ ಎಮ್ ಡಿ ಶಂಕರ್ ಉಪಸ್ಥಿತಿರಿದ್ದರು. ●

ಮಳವಳ್ಳಿ ನಗರದ ಗ್ರಂಥಾಲಯವು ಕತ್ತಲೆ ಕೋಣೆ, ಅವ್ಯವಸ್ಥೆಯ ಗೂಡು, ಸುಸಜ್ಜಿತ ಗೊಳಿಸಲು ಒತ್ತಾಯ

ಮಳವಳ್ಳಿ ನಗರದಲ್ಲಿರುವ ಗ್ರಂಥಾಲಯವು ವಿದ್ಯುತ್ ಸಂಪರ್ಕವಿಲ್ಲದೆ ಕತ್ತಲೆ ಕೋಣೆಯಿಂದ ಕೂಡಿದ್ದು ಅವ್ಯವಸ್ಥೆಯ ಗೂಡಾಗಿದೆ ಇದನ್ನು ಸರಿಪಡಿಸಿ ಸುಸಜ್ಜಿತ ಗೊಳಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಅದ್ಯಕ್ಷರಾದ ಎನ್.ಎಲ್. ಭರತ್‌ರಾಜ್ ಒತ್ತಾಯಿಸಿದ್ದಾರೆ

ನಗರದಲ್ಲಿರುವ ಗ್ರಂಥಾಲಯವು ಅವ್ಯವಸ್ಥೆ ಇಂದ ಕೂಡಿರುತ್ತದೆ ಸುಮಾರು ಎರಡು ವರ್ಷಗಳಿಂದ ವಿದ್ಯುತ್ ಸಂಪರ್ಕವಿರುವುದಿಲ್ಲ ಎಲ್ಲಾ ದಿನಪತ್ರಿಕೆಗಳು ಲಭ್ಯವಿರುವುದಿಲ್ಲ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ವಿದ್ಯಾರ್ಥಿ ಯುವಜನರಿಗೆ ಅನುಕೂಲವಾಗುವ ಪುಸ್ತಕಗಳು ಸಿಗುವುದಿಲ್ಲ ಈ ಗ್ರಂಥಾಲಯವು ಗೋಡನ್ ರೀತಿಯಲ್ಲಿ ಇದ್ದು ರಸ್ತೆ ಪಕ್ಕದಲ್ಲಿ ಇರುವುದರಿಂದ ಶಬ್ದ ದೂಳು ಕಶ್ಮಲ ದಿಂದ ಕೂಡಿರುತ್ತದೆ ಶೌಚಾಲಯದ ಸೌಲಭ್ಯ ಇರುವುದಿಲ್ಲ ಕುಡಿಯುವ ನೀರು ಸಹ ದೊರೆಯುವುದಿಲ್ಲ ಮೇಲ್ವಿಚಾರಕರು ವರ್ಗಾವಣೆಯಾಗಿ ವರ್ಷಗಳೇ ಕಳೆದಿದೆ ಅಟೆಂಡರ್ ವಾರದಲ್ಲಿ ಒಂದೆರಡು ಬಾರಿ ಮಾತ್ರ ಗ್ರಂಥಾಲಯಕ್ಕೆ ಬರುತ್ತಾರೆ ವಾಚರ್ ಬೆಳಿಗ್ಗೆಯಿಂದ ಮಧ್ಯಾಹ್ನದ ತನಕ ಕೆಲಸ ಮಾಡುತ್ತಾರೆ ಸಂಜೆ ವೇಳೆ ಕರೆಂಟ್ ಇಲ್ಲದಿರುವುದರಿಂದ ಸಂಜೆ ವೇಳೆ ಬಾಗಿಲು ತೆರೆಯುವುದಿಲ್ಲ ಇವರಿಗೆ ಕೇವಲ ಎರಡುವರೆ ಸಾವಿರ ಸಂಬಳ ಮಾತ್ರ ದೊರೆಯುತ್ತದೆ ಚೇರ್ ಗಳು ಸಹ ಹಾಳಾಗಿವೆ ಈ ದುಸ್ಥಿತಿಯ ಬಗ್ಗೆ ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಗಮನಕ್ಕೆ ತಂದರೂ ಏನೂ ಪ್ರಯೋಜನವಾಗಲಿಲ್ಲ ಪಟ್ಟಣದಲ್ಲಿ ಸುಮಾರು 40 ಸಾವಿರದಷ್ಟು ಜನಸಂಖ್ಯೆ ಇರುವ ಸುಮಾರು 6 ಸಾವಿರದಷ್ಟು ಕುಟುಂಬಗಳಿಂದ ಗ್ರಂಥಾಲಯಕ್ಕೆ ಅಂತ ತೆರಿಗೆಯನ್ನ ಪ್ರತಿ ಆಸ್ತಿಯ ಆದಾರದ ಮೇಲೆ ಸುಮಾರು 7 ರಿಂದ 8 ಲಕ್ಷ ರೂಪಾಯಿಯಷ್ಟು ವಸೂಲಿ ಮಾಡಿ ಕೊಳ್ಳುತ್ತಾರೆ ಆದರೆ ವ್ಯವಸ್ಥಿತವಾಗಿ ಗ್ರಂಥಾಲಯ ಕಲ್ಪಿಸುವಲ್ಲಿ ವಿಫಲರಾಗಿದ್ದಾರೆ ಎಂದು ಓದುಗರಾದ ನಿವೃತ್ತ ಅಧಿಕಾರಿ ಶಿವ ಪ್ರಕಾಶ್ ನಿವೃತ್ತ ಶಿಕ್ಷಕರಾದ ನಾಗೇಶ್ವರ ಎಂ.ಡಿ. ಶಂಕರ್ ಹರೀಶ್ ಕಾಂತರಾಜು ವಿಘ್ನೇಶ್ ಶಿವಕುಮಾರ್ ಮುಂತಾದವರು ಈ ಅವ್ಯವಸ್ಥೆಯನ್ನು ಖಂಡಿಸುತ್ತಾ ಸರಿಪಡಿಸದಿದ್ದರೆ ಓದುಗರು ಹಾಗೂ ಕರ್ನಾಟಕ ಪ್ರಾಂತ ರೈತ ಸಂಘ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ●

ನೋಟು ಬ್ಯಾನ್, ಜಿಎಸ್‌ಟಿ ಕಾರಣದಿಂದ – ಕಟ್ಟಡ ಕಾರ್ಮಿಕರುಗಳ ಹೊಟ್ಟೆಗೆ ಹಿಟ್ಟಿಲ್ಲದಂತಾಗಿದೆ : ಮಹಾಂತೇಶ್



ಸರಕಾರದ ನೀತಿಗಳಿಂದಾಗಿ ಕಳೆದ ಮೂರು ವರ್ಷಗಳಲ್ಲಿ ಕೋಟ್ಯಂತರ ಉದ್ಯೋಗ ನಾಶವಾಗಿದೆ. ಮೇಲ್ನೋಟಕ್ಕೆ ಅಭಿವೃದ್ಧಿ ಹೊಂದಿದಂತೆ ಭಾಸವಾದರೂ ನೋಟು ಬ್ಯಾನ್, ಜಿಎಸ್‌ಟಿ ಕಾರಣದಿಂದ ನೇರವಾಗಿ ಕಟ್ಟಡ ಕಾರ್ಮಿಕರುಗಳ ಹೊಟ್ಟೆಗೆ ಹಿಟ್ಟಿಲ್ಲದಂತಾಗಿದೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಮಹಾಂತೇಶ್ ಬೈಂದೂರು ಸಮಾವೇಶದಲ್ಲಿ ಹೇಳಿದರು.

ಅಂಬೇಡ್ಕರ್ ಭವನದಲ್ಲಿ ಬೈಂದೂರು ತಾಲೂಕು ಕಟ್ಟಡ ಕಾರ್ಮಿಕರು ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಆಶ್ರಯದಲ್ಲಿ ಜರುಗಿದ ಕಟ್ಟಡ ಕಾರ್ಮಿಕರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿ ದುಡಿಮೆಯ ಪಾಲು ಕಾರ್ಮಿಕರಿಗೆ ಸಿಗುತ್ತಿಲ್ಲ. ಕೇಂದ್ರ ಸರಕಾರ 2012ರ ಬೆಲೆಗಳ ಆಧಾರದಲ್ಲಿ ಕಾರ್ಮಿಕರ ಕೂಲಿಯನ್ನು ನಿಗದಿಗೊಳಿಸಿದೆ. ಆದರೆ 2019ರ ಬೆಲೆಯಲ್ಲಿ ಸರಕಾರ ನಿಗದಿ ಮಾಡಿರುವ ಕೂಲಿ ತೆಗೆದುಕೊಂಡ ಕಾರ್ಮಿಕನ ಕುಟುಂಬ ಬದುಕಲಾರದ ಸ್ಥಿತಿ ಇದೆ. ಕೂಲಿ ಹೆಚ್ಚಿಸಬೇಕು, ಸರಕಾರದ ದುಡ್ಡಿನಿಂದಲೇ ಕಾರ್ಮಿಕರಿಗೆ ಸೌಲಭ್ಯ ಒದಗಿಸಬೇಕು ಮುಂತಾದ 12 ಬೇಡಿಕೆಗಳನ್ನು ಇರಿಸಿಕೊಂಡು ಜ. 8 ರಂದು ದೊಡ್ಡ ಮುಷ್ಕರ ನಡೆಸಲು ಉದ್ದೇಶಿಸಲಾಗಿದೆ ಎಂದರು.

ಈರುಳ್ಳಿ ಬೆಲೆ ಹೆಚ್ಚಿದ್ದರಿಂದ ರೈತನಿಗೆ ಅದರ ಲಾಭ ದೊರೆತಿಲ್ಲ. ಇತ್ತ ಕೊಳ್ಳುವವನಿಗೂ ದುಬಾರಿ ಬೆಲೆಯ ಬಿಸಿ ತಟ್ಟಿದೆ. ವಾಸ್ತವದಲ್ಲಿ ಮಧ್ಯವರ್ತಿಗಳು ಇದರ ಲಾಭ ಪಡೆದುಕೊಳ್ಳುತ್ತಿದ್ದಾರೆ. ಕೃತಕ ಬೆಲೆ ಏರಿಕೆ ಸೃಷ್ಟಿಸಿದ್ದಾರೆ ಎಂದ ಅವರು ಮಾಧ್ಯಮಗಳು ಜನಸಾಮಾನ್ಯರ ಬೇಡಿಕೆಗಳ ಬಗ್ಗೆ ಚರ್ಚಿಸುವುದರ ಬದಲಾಗಿ ರಾಜಕಾರಣಿಗಳ ಸುತ್ತ ಸುತ್ತುತ್ತಿವೆ. ದೇಶದಲ್ಲಿ ರೈತರು, ಕಾರ್ಮಿಕರು, ಮೀನುಗಾರರು ಮೊದಲಾದ ಶ್ರಮಿಕ ವರ್ಗದ ನೋವು ಚರ್ಚೆಗೆ ಬಾರದಿರುವುದು ವಿಷಾದನೀಯ ಎಂದರು.

ಬೈಂದೂರು ತಾಲೂಕು ಕಟ್ಟಡ ಕಾರ್ಮಿಕರು ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷರಾಜೀವ ಪಡುಕೋಣೆ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿಗಳ ಕೋಶಾಧಿಕಾರಿ ರೊನಾಲ್ಡ್ ರಾಜೇಶ್ ಕ್ವಾಡ್ರಸ್, ಮಾಧವ ಉಪ್ಪುಂದ, ರಾಜೀವ ದೇವಾಡಿಗ, ವಿಜಯ ಬಿ., ಉದಯ ಗಾಣಿಗ, ಮಂಜು ಬಡಾಕೆರೆ, ಅಮ್ಮಯ್ಯ ಪೂಜಾರಿ, ರಾಮ ಖಂಬದಕೋಣೆ, ನಾಗರತ್ನ ನಾಡ ಮೊದಲಾದವರು ವೇದಿಕೆಯಲ್ಲಿ ಇದ್ದರು.

ಬೈಂದೂರು ತಾಲೂಕು ಕಟ್ಟಡ ಕಾರ್ಮಿಕರು ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಉಪಾಧ್ಯಕ್ಷ ವೆಂಕಟೇಶ ಕೋಣಿ ಕಾರ್ಯಕ್ರಮ ನಿರೂಪಿಸಿದರು.

⇨⇨⇨

ಹಿರೋಶಿಮ ಮತ್ತು ನಾಗಸಕಿಯ ಮೇಲೆ ಹಾಕಿದ ಅಣುಬಾಂಬ್ ಪರಿಣಾಮದಿಂದಾದ ಅಪಾರ ಸಾವು, ನೋವುಗಳಿಂದಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ 1948 ರಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ರಚನೆಯಾಯಿತು. ನಂತರ ರಾಷ್ಟ್ರೀಯ ಮತ್ತು ರಾಜ್ಯಮಟ್ಟಗಳಲ್ಲಿ ಕೂಡ ಆಯೋಗಗಳು ಅಸ್ತಿತ್ವಕ್ಕೆ ಬಂದಿವೆ. ಯಾವುದೇ ವ್ಯಕ್ತಿಯು ಯಾವುದೇ ರೀತಿಯ ಹಕ್ಕುಗಳಿಂದ ವಂಚಿತರಾದಾಗ ಮಾನವ ಹಕ್ಕುಗಳ ಆಯೋಗವು ಅವರ ನೆರವಿಗೆ ಬರುತ್ತದೆ ಎಂದರು. ಮುಖ್ಯ ಅಥಿತಿಯಾಗಿ ಮಾತನಾಡಿದ ಸಾಹಿತಿ ಮತ್ತು ಉಪನ್ಯಾಸಕರಾದ ಸುಧಾ ಚಿದಾನಂದಗೌಡರು ಪ್ರತಿಯೊಬ್ಬರು ತಮ್ಮ ಹಕ್ಕುಗಳ ಜೊತೆಗೆ ಮೂಲಭೂತ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಮರೆಯದೇ ಬದುಕಿನಲ್ಲಿ ಅಳವಡಿಸಿಕೊಂಡು ಸಮಾನವಾಗಿ ಬದುಕಬೇಕೆಂದರು. ಇದೇ ಸಂದರ್ಭದಲ್ಲಿ ಜನವಾದಿಯು ಮಹಿಳೆಯರ ಮೇಲಿನ ದೌರ್ಜನ್ಯ ಮುಕ್ತ ಬದುಕಿಗಾಗಿ ನಡೆಸುವ ಪ್ರತಿಭಟನಾ ಹೋರಾಟದ ಪೋಸ್ಟರ್ ಬಿಡುಗಡೆ ಮಾಡಿ ಡಿಸೆಂಬರ್ 16, 2019 ರಂದು ಬೆಂಗಳೂರಿನಲ್ಲಿ ನಡೆಯುವ ಈ ಹೋರಾಟದಲ್ಲಿ ಭಾಗವಹಿಸಲು ಸಂಘಟನೆಯ ಕಾರ್ಯದರ್ಶಿ ಜಿ. ಸರೋಜವರು ಮಹಿಳೆಯರಿಗೆ ಕರೆ ನೀಡಿದರು. ಎಸ್ ಹುಲಿಗೆಮ್ಮ, ಪಾಯಲ್ ಬಾನು ಶಮೀಮ್ ಬಾನು, ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಕಾರ್ಯದರ್ಶಿ ಡಿ. ಬಸವರಾಜ, ಸಮುದಾಯದ ಬಸವರಾಜ ಕಮ್ಮಾರ್, ಪಿ.ಅನಂತ ಮುಂತಾದವರಿದ್ದರು. ●



ಕೃಷಿ ಕೂಲಿಕಾರರ 7ನೇ ರಾಜ್ಯ ಸಮ್ಮೇಳನ ಉದ್ಘಾಟನೆ

* ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯ ಯೋಜನೆಯನ್ನು ವಿಸ್ತರಿಸಿ ಬಲಪಡಿಸಲು ಆಗ್ರಹಿಸಿ
* ವರ್ಷಕ್ಕೆ 250 ದಿನಗಳು ಕೆಲಸ ಮತ್ತು ದಿನಕ್ಕೆ 600 ರೂಪಾಯಿ ದಿನಗೂಲಿಗಾಗಿ ಒತ್ತಾಯಿಸಿ
* ಕೂಲಿಕಾರರಿಗೆ ವಾಸಕ್ಕೆ ಮನೆ, ಬೇಸಾಯ ಮಾಡಲು ಸರ್ಕಾರಿ ಭೂಮಿ ವಿತರಣೆಗಾಗಿ
* ಜಾತಿ ಅಸ್ಪೃಶ್ಯತೆ, ಕೋಮುವಾದ, ಮಹಿಳೆ ಮೇಲಿನ ಅತ್ಯಾಚಾರ ವಿರೋಧಿಸಿ

ಅಂಬಾನಿ ಆಧಾಯ ಜೀಯೋದಿಂದ 1 ಗಂಟೆಗೆ 11 ಕೋಟಿ – ಕೂಲಿಕಾರರ 12 ಗಂಟೆಯ ದುಡಿಮೆಗೆ ದಿನದ ಕೂಲಿ ಕೇವಲ 150 – ಸುಭಾಷಿಣಿ ಅಲಿ

ದೇಶದ ಅತಿದೊಡ್ಡ ಕೈಗಾರಿಕೋಧ್ಯಮಿಗೆ ಜಿಯೋ ಪೋನ್‌ನಿಂದ ದಿನದ 1 ಗಂಟೆಯ ಆಧಾಯ 11 ಕೋಟಿ ಆದರೆ ಅದೇ ಗ್ರಾಮಾಂತರ ಪ್ರದೇಶದ ಬಡ ಕೂಲಿಕಾರರ ದಿನದ 12 ಗಂಟೆಗೆ ಕೂಲಿ ವೇತನ ಕೇವಲ 150 ರೂಪಾಯಿ ಆಗಿರುವುದು ವಿಪರ್ಯಾಸ ನಮ್ಮನಳುತ್ತಿರುವ ಕೇಂದ್ರ ಸರ್ಕಾರ ಉದ್ಯೋಗ ಆರೋಗ್ಯ, ಶಿಕ್ಷಣದ ಬಗ್ಗೆ ಮಾತನಾಡುತ್ತಿಲ್ಲ. ಬದಲಿಗೆ ದೇಶದ ಶ್ರೀಮಂತ ಕೈಗಾರಿಕೋದ್ಯಮಿಗಳಿಗೆ ಲಕ್ಷಾಂತರ ಕೋಟಿ ರೂಪಾಯಿ ರಿಯಾಯಿತಿ ಕೋಡುತ್ತಿದೆ ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಮಾಜಿ ಸಂಸದರಾದ ಸುಭಾಷಿಣಿ ಆಲಿ ಅವರು ಹೇಳಿದರು.

ಕಲಬುರಗಿ ನಗರದ ರಾಜಾಪುರ ಎಚ್.ಬಿ. ಕೋಸಗಿ ಕಲ್ಯಾಣ ಮಂಟಪದಲ್ಲಿ ದಿನಾಂಕ: 13,14 ಮತ್ತು 15 ಡಿಸೆಂಬರ್ 2019 ರಂದು ಜರುಗಿದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ 7ನೇ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಡವರಿಗೆ ಬದುಕುವ ಕೂಲಿ ಸಿಗುತ್ತಿಲ್ಲ. ಸರ್ಕಾರ ಕೆಲಸ ಕೊಡುತ್ತಿಲ್ಲ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಾರಿಯಾಗಿ ದಶಕಗಳು ಕಳೆದರು ನರೇಗಾ ಕೂಲಿಕಾರರಿಗೆ ಸರಾಸರಿ 30 ದಿನಗಳ ಕೆಲಸ ಸಿಗಲಾರದ ಸ್ಥಿತಿ ಇದೆ. ನರೇಗಾ ಕೂಲಿ ವೇತನ ಪಾವತಿ ಬಾಕಿ 2000 ಕೋಟಿ ರೂಪಾಯಿ ಬಾಕಿ ನಿಂತಿದೆ.

ಆದರೆ ಕಾಂಗ್ರೆಸ್ ಜೆಡಿಎಸ್ ಸಮಿಶ್ರ ಸರ್ಕಾರವನ್ನು ಪತನ ಮಾಡಲು ಬಿಜೆಪಿಯವರು ಶಾಸಕರ ಖರೀದಿ ಕುದುರೆ ವ್ಯಾಪಾರಕ್ಕೆ ಕೋಟ್ಯಾಂತರ ರೂಪಾಯಿತಿ ಹಣ ಹಂಚಲು ಇವರ ಬಳಿ ಹಣ ಇದೆ.

ದಿನ ಬಳಕೆಯ ಆಹಾರ ಧಾನ್ಯಗಳ ಬೆಲೆಗಳ ಏರಿಕೆಯಿಂದ ಜನ ತತ್ತರಿಸಿದ್ದಾರೆ. ಹಣ್ಣು ತರಕಾತಿ ಈರುಳ್ಳಿ ಬೆಲೆಗಳು ಜನ ಸಾಮಾನ್ಯರ ಕೈಗೆ ನಿಲುಕದಾಗಿದೆ.

ಮಹಿಳಾ ಕೂಲಿಕಾರರೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರಾಗಿರುವ ಸಮಾಜದ ಶೇಖಡ ಶೇ 50 ರಷ್ಟು ಮಹಿಳೆಯರಿದ್ದು ಅವರ ಮೇಲೆ ನಿರಂತರವಾಗಿ ನಡೆಯುವ ಅತ್ಯಾಚಾರ, ಹತ್ಯೆ ವಿರೋದಿಸಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ಸಮರಶೀಲ ಹೋರಾಟ ನಡೆಸಬೇಕು ಎಂದು ಸುಭಾಷಿಣಿ ಅಲಿ ಕರೆ ಕೊಟ್ಟರು.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ರಾಷ್ಟ್ರಧ್ಯಕ್ಷ ತಿರುನವುಕ್ಕರಸು ಉದ್ಘಾಟನಾ ಸಮಾರಂಭದಲ್ಲಿ ಅಥಿತಿಯಾಗಿ ಭಾವಹಿಸಿ ಮಾತನಾಡಿದರು.

ಸಭೆಯನ್ನು ಉದ್ದೇಶಿಸಿ, ಕೇಂದ್ರ ಸರ್ಕಾರ ಸುಮಾರು 15 ಲಕ್ಷ ಕೋಟಿ ಹಣವನ್ನು ದೊಡ್ಡ ಕಂಪನಿಗಳಿಗೆ ತೆರಿಗೆ ರಿಯಾಯಿತಿ, ಸಾಲಮನ್ನಾ ಇತ್ಯಾದಿ ಕೊಡುಗೆ ನೀಡಿದೆ ಅಂತೆಯೇ ಕಾರ್ಪೋರೇಟ್ ಕಂಪನಿಗಳಿಂದ ಚುನಾವಣಾ ಬ್ಯಾಂಕ್ ಮೂಲಕ ಬಿಜೆಪಿ ಪಕ್ಷ 17780 ಕೋಟಿ ನಿಧಿಯನ್ನು ಪಡೆದಿದೆ ಎಂದು ಆರೋಪಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಯು. ಬಸವರಾಜು ಸಮ್ಮೇಳನದ ಯಶಸ್ಸಿಗೆ ಶುಭಾಷಯ ಕೋರಿ ಮಾತನಾಡಿದರು.

ಕೃಷಿ ಕೂಲಿಕಾರರ ತಲಾ ಆದಾಯ ಸರಾಸರಿ ಕೇವಲ 25 ರೂಪಾಯಿ ಮಾತ್ರ ಇದೆ. ರೈತರು ಕೃಷಿ ಕೂಲಿಕಾರರು ದೊಡ್ಡ ಸಂಕಷ್ಟ ಎದುರಿಸುತ್ತಿದ್ದಾರೆ. ಈ ಸಂಕಷ್ಟಗಳಿಗೆ ಕಾರಣ ಯಾರು ಎಂಬುವುದನ್ನು ನಾವು ತಿಳಿಯಬೇಕಾಗಿದೆ. ನಮ್ಮ ಹೋರಾಟಕ್ಕೆ ಪೂರಕವಾದ ವಾತವರಣ ವಿದೆ ಆದ್ದರಿಂದ ಕೃಷಿ ಕೂಲಿಕಾರರ ಸಂಘದ ಸದಸ್ಯರು ಸಕ್ರಿಯವಾಗಿ ಹೋರಾಟದಲ್ಲಿ ತೋಡಗಿಸಿಕೊಳ್ಳಬೇಕು. ಕೃಷಿ ಕೂಲಿಕಾರರು ತಮ್ಮ ಎಲ್ಲಾ ಸಂಕಷ್ಟಕ್ಕೆ ಹಣೆ ಬರಹ, ಹಿಂದಿನ ಜನ್ಮದ ಪಾಪ ಕರ್ಮ ಎಂದು ಹೇಳಿಕೊಳ್ಳದೆ ನಾವೆಲ್ಲ ಧರ್ಮ ಜಾತಿ ಎಲ್ಲಾವನ್ನು ಮೀರಿ ಸವಾಲನ್ನು ಎದುರಿಸಲು ಹೋರಾಟಕ್ಕೆ ಧುಮುಕಬೇಕು. ಎಂದು ಅಭಿಪ್ರಾಯಪಟ್ಟರು.

ಈ ನಡುವೆ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ನೇತೃತ್ವದಲ್ಲಿ ರಾಜ್ಯ ಮಟ್ಟದ ಹೋರಾಟ ತುಮಕೂರಿನಲ್ಲಿ ಜರುಗುತ್ತಿದ್ದು ಅಂಗನವಾಡಿ ನೌಕರರ ನ್ಯಾಯವಾದ ಬೇಡಿಕೆ ಈಡೇರಿಸಲು ಸರ್ಕಾರ ಕೂಡಲೇ ಕ್ರಮ ವಹಿಸಬೇಕು ಹಾಗೂ ಈ ಹೋರಾಟಕ್ಕೆ ಕೃಷಿ ಕೂಲಿಕಾರರ ಸಂಘದ



7ನೇ ರಾಜ್ಯ ಸಮ್ಮೇಳನ ತನ್ನ ಒಕ್ಕೋರಲಿನ ಬೆಂಬಲ ಸೂಚಿಸಿ ನಿರ್ಣಯವನ್ನು ಅಂಗಿಕರಿಸಿತು ಕೇಂದ್ರ ಸಮಿತಿ ಸದಸ್ಯರಾದ ಎಂ. ಪುಟ್ಟಮಾದು ಠರಾವು ಮಂಡಿಸಿದರು. ನಾಗರತ್ನನಾಡ ಅನುಮೋದಿಸಿದರು.

ಕೃಷಿ ಕೂಲಿಕಾರರ ಸಂಘದ 7ನೇ ಸಮ್ಮೇಳನದ ಯಶಸ್ಸಿಗೆ ಸ್ವಾಗತ ಸಮಿತಿ ರಚನೆ ಮಾಡಲಾಗಿದ್ದು ಇದರ ಅಧ್ಯಕ್ಷೆ ಕೆ. ನೀಲಾ ಅವರು ಆಗಮಿಸಿದ ಮುಖಂಡರನ್ನು, ಪ್ರತಿನಿಧಿಗಳನ್ನು ಮತ್ತು ಸಭಿಕರನ್ನು ಸ್ವಾಗತಿಸಿದರು.

ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷ ನಿತ್ಯಾನಂದಸ್ವಾಮಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸ್ವಾಗತ ಸಮಿತಿಯ ಕಾರ್ಯಧ್ಯಕ್ಷ ಮಾರುತಿ ಗೋಖಲೆ, ಕೋಶಧಿಕಾರಿ ಎಂ.ಬಿ. ಸಜ್ಜನ್, ಕೂಲಿಕಾರರ ಸಂಘದ ರಾಜ್ಯ ಉಪಧ್ಯಕ್ಷ ಜಿ.ಎನ್. ನಾಗರಾಜು, ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ಭೀಮಶೆಟ್ಟಿಯಂಪಳ್ಳಿ, ಕೃಷಿ ಕೂಲಿಕಾರರ ಸಂಘದ ರಾಜ್ಯ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು ಕೃಷಿ ಕೂಲಿಕಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಮತ್ತು ಸಹ ಕಾರ್ಯದರ್ಶಿ ಹನುಮೇಗೌಡ ಕಾರ್ಯಕ್ರವನ್ನು ನಿರೂಪಿಸಿದರು.

ವರದಿ: ವೆಂಕಟೇಶ್ ಕೋಣಿ.

ಕೊಲೆಗಡುಕನನ್ನು ಎಂದಿಗೂ ಕ್ಷಮಿಸಬೇಡ

ಕವನ

ನಿನ್ನ ಮನೆಯ
ಒಂದು ಕೋಣೆಯಲ್ಲಿ ಬೆಂಕಿ ಬಿದ್ದಿದ್ದರೆ
ನೀನು ಮತ್ತೊಂದು
ಕೋಣೆಯಲ್ಲಿ ನಿದ್ರಿಸ ಬಲ್ಲೆಯಾ?

ನಿನ್ನ ಮನೆಯ
ಒಂದು ಕೋಣೆಯಲ್ಲಿ ಹೆಣಗಳು ಕೊಳೆಯುತ್ತಿದ್ದರೆ
ನೀನು ಮತ್ತೊಂದು ಕೋಣೆಯಲ್ಲಿ
ಪ್ರಾರ್ಥನೆ ಮಾಡ ಬಲ್ಲೆಯಾ?

ಹೌದು! ಎನ್ನುವುದಾದರೆ
ನಿನ್ನೊಂದಿಗೆ ನನಗೆ ಮಾತನಾಡುವುದು ಏನೂ ಉಳಿದಿಲ್ಲ.

ದೇಶ ಕಾಗದದಿಂದಾದ ನಕ್ಷೆಯಲ್ಲ
ಒಂದು ಭಾಗ ಹರಿದ ಮೇಲೂ
ಉಳಿದ ಭಾಗ ಮೊದಲಿನಂತೆ ಸ್ವಸ್ಥವಾಗಿರಲು
ಹಾಗು ನದಿ, ಪರ್ವತ, ನಗರ, ಹಳ್ಳಿಗಳೆಲ್ಲ
ಹಾಗೆಯೇ ತಂತಮ್ಮ ಜಾಗದಲ್ಲಿ ಒಟ್ಟಾಗಿ ಕಾಣಲು

ಇದನ್ನು ನೀನು
ಒಪ್ಪುವುದಿಲ್ಲವಾದರೆ
ನನಗೆ ನಿನ್ನೊಂದಿಗಿರಲು ಸಾಧ್ಯವಿಲ್ಲ.

ಈ ಜಗತ್ತಿನಲ್ಲಿ
ಮಾನವ ಜೀವಕ್ಕಿಂತ
ದೊಡ್ಡದು ಯಾವುದೂ ಇಲ್ಲ
ದೇವರು, ಜ್ಞಾನ, ಚುನಾವಣೆ
ಯಾವುದೂ ಅಲ್ಲ
ಕಾಗದದಲ್ಲಿ ಬರೆದ
ಯಾವುದೇ ಒಡಂಬಡಿಕೆಯನ್ನು
ಹರಿದು ಹಾಕಬಹುದು
ಭೂಮಿಯ ಏಳು ಪದರಗಳಡಿ
ಹೂತು ಹಾಕಲೂಬಹುದು

ಆತ್ಮಸಾಕ್ಷಿಯೇ
ಹೆಣಗಳ ರಾಶಿಯ ಮೇಲೆ ನಿಂತಿದ್ದರೆ
ಅಲ್ಲಿ ಅಂಧಕಾರವಿದೆ
ಬಂದೂಕಿನ ನಳಿಕೆಯಲ್ಲಿ
ಅಧಿಕಾರ ನಡೆಯುತ್ತಿದ್ದರೆ
ಅದು ಆಯುಧಗಳ ದಂಧೆಯಾಗಿದೆ

ನೀನಿದನ್ನು ಒಪ್ಪದಿದ್ದಲ್ಲಿ
ನಿನ್ನನ್ನು ಒಂದೂ ಕ್ಷಣವೂ ಸಹಿಸಲಾರೆ.

ನೆನಪಿಡು
ಒಂದು ಮಗುವಿನ ಹತ್ಯೆ
ಒಂದು ಹೆಂಗಸಿನ ಸಾವು
ಗುಂಡಿನಿಂದ ಛಿದ್ರಗೊಂಡ
ಒಬ್ಬ ಮನುಷ್ಯನ ದೇಹ
ಅದು ಯಾವುದೇ ಸರ್ಕಾರದ ಪತನ ಮಾತ್ರವಲ್ಲ
ಅದು ಇಡೀ ರಾಷ್ಟ್ರದ ಪತನ.

ಹೀಗೇ ರಕ್ತ ಹರಿದು
ಭೂಮಿಯಲ್ಲಿ ಇಂಗುವುದಿಲ್ಲ
ಆಕಾಶದಲ್ಲಿ ಹಾರುವ
ಬಾವುಟವನ್ನೂ ಕಪ್ಪಾಗಿಸುತ್ತದೆ.

ಯಾವ ನೆಲದಲ್ಲಿ
ಸೈನಿಕರ ಬೂಟುಕಾಲುಗಳ ಗುರುತಿರುವುದೋ
ಅಲ್ಲಿ ಅವುಗಳ ಮೇಲೆ
ಹೆಣಗಳು ಬೀಳುತ್ತಿರುತ್ತವೋ
ಆ ನೆಲ ನಿನ್ನ ರಕ್ತದಲ್ಲಿ ಬೆಂಕಿಯಾಗಿ ಹರಿಯದಿದ್ದಲ್ಲಿ
ನೀನು ಬರಡಾಗಿರುವೆ ಎಂದು ತಿಳಿದುಕೋ
ನಿನಗಲ್ಲಿ ಉಸಿರಾಡಲೂ ಹಕ್ಕಿಲ್ಲ
ನಿನಗಾಗಿ ಈ ಜಗತ್ತೂ ಸಹ
ಇಲ್ಲವೆಂದೇ ತಿಳಿ.

ಕೊನೆಗೊಂದು ಮಾತು
ಸ್ಫಟಿಕದಷ್ಟೇ ಸ್ಪಷ್ಟ
ಯವುದೇ ಕೊಲೆಗಡುಕನನ್ನು ಎಂದಿಗೂ ಕ್ಷಮಿಸಬೇಡ
ಅವನು ನಿನ್ನ ಗೆಳೆಯನೆ ಆಗಿರಲಿ
ಧರ್ಮದ ಗುತ್ತಿಗೆ ಪಡೆದವನಿರಲಿ
ಅಥವಾ ಪ್ರಜಾತಂತ್ರದ ಸ್ವಯಂಘೋಷಿತ
ಕಾವಲುಗಾರನೇ ಆಗಿರಲಿ.

ಕವಿ: ಸರ್ವೇಶ್ವರ ದಯಾಳ ಸಕ್ಸೇನ.
ಕನ್ನಡಕ್ಕೆ: ಪಿ. ಸುನೀತ ಹೆಬ್ಬಾರ್

‘ಕ್ಲಾಸಿಕ್ಸ್’ ಅಧ್ಯಯನದ ಬೆನ್ನು ಹತ್ತಿ...

ಕಾರ್ಲ್‌ಮಾರ್ಕ್ಸ್ ಮೂಲ ಕೃತಿಗಳ ಉಪನ್ಯಾಸ ಸರಣಿ – ಒಂದು ವಿಶಿಷ್ಟ ಪ್ರಯೋಗ

ಮೊಬೈಲ್ ಗೀಳಿನ ಯುಗದಲ್ಲಿ ಪುಸ್ತಕಗಳ ಓದು ಕ್ಷೀಣಗೊಳ್ಳುತ್ತಿದೆ ಎಂಬ ಹಿರಿಯರ ಆತಂಕ ಅರ್ಥವಾಗುವಂತದ್ದೆ. ಅದರಲ್ಲೂ ಕ್ಲಾಸಿಕ್ಸ್ ಅಧ್ಯಯನ ದೂರದ ಮಾತೇ ಸರಿ. ಬಹಳ ಹಿಂದಿನಿಂದಲೂ ಕಾರ್ಲ್‌ಮಾರ್ಕ್ಸ್ ಕೃತಿಗಳು ‘ಗಣಿತ’ದಂತೆ ಕಬ್ಬಿಣದ ಕಡಲೆ ಎಂಬ ಅಪವಾದ ಹೊತ್ತಿವೆ. ಆಶ್ಚರ್ಯವೆಂದರೆ, ಹೀಗಿದ್ದೂ ಅವು ಅಂದು ಇಂದು ಚರ್ಚೆಯಲ್ಲೇ ಇವೆ! ಕೆಲವೊಮ್ಮೆ ಮಾರ್ಕ್ಸ್ ಕೃತಿಗಳನ್ನು ಓದದೆಯೂ ಈ ‘ಅಪವಾದ’ ಜಾನಪದದಂತೆ ಬಾಯಿಂದ ಬಾಯಿಗೆ ಹರಿದು ಬಂದಿದ್ದು ಸುಳ್ಳೇನು ಅಲ್ಲ! ಹಾಗೆಯೇ ಅನುವಾದದಲ್ಲಿ ತೋರಿದ ಕಠಿಣತೆಯೂ ಆ ಭಾವನೆ ಮೂಡುವಂತೆ ಮಾಡಿರಲೂಬಹುದು!

ಮಾರ್ಕ್ಸ್ ಕೃತಿಗಳು ನಿಜಕ್ಕೂ ಕಬ್ಬಿಣದ ಕಡಲೆಯೇ? ಕಥೆಯಂತೆ ಓದಿಸಿಕೊಂಡು ಹೋಗುವುದಿಲ್ಲ, ಬೋರು ಹೊಡೆಸುತ್ತವೆ, ಮಾರ್ಕ್ಸ್‌ನ ಪುಸ್ತಕ ಹಿಡಿದರೆ ಬಹುಬೇಗನೆ ನಿದ್ರಾದೇವತೆ ಆವರಿಸುತ್ತಾಳೆ ಎಂಬ ತರಾವರಿ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನಕ್ಕೆ ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಕೈ ಹಾಕಿತ್ತು. ಆಸಕ್ತ ಓದುಗರನ್ನು ಒಂದೆಡೆ ಕಲೆ ಹಾಕಿ ಪುಸ್ತಕವನ್ನು ಓದಿಸುತ್ತಲೇ ಅದರ ಅರ್ಥ ತಿಳಿಸುವ, ಚರ್ಚಿಸಿ ಅರ್ಥಮಾಡಿಸುವ ಪ್ರಯೋಗಾರ್ಥ ಪ್ರಯತ್ನಕ್ಕೆ ಕೈ ಹಾಕಲಾಯಿತು.

ಮಾರ್ಕ್ಸ್‌ರವರ ಕ್ಲಾಸಿಕ್ಸ್ ಗ್ರಂಥಗಳಾದ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ, ದಾಸ್ ಕ್ಯಾಪಿಟಲ್, ಭಾರತ ಕುರಿತು, ಲೂಯಿ ಬೋನೋಪಾಟೇ, ಮತ–ಧರ್ಮದ ಕುರಿತು, ಫ್ರಾನ್ಸ್‌ನಲ್ಲಿ ಅಂತರ್ಯುದ್ಧ, ತತ್ವಶಾಸ್ತ್ರದ ದಾರಿದ್ರ್ಯ, ರಾಜಕೀಯ ಅರ್ಥಶಾಸ್ತ್ರದ ವಿಮರ್ಶೆ. ಈ ಕೃತಿಗಳನ್ನು ಆಯ್ಕೆ ಮಾಡಿ, ಇವುಗಳನ್ನು ಪರಿಚಯಿಸುವ ಜತೆಗೆ ಅಧ್ಯಯನದ ಆಸಕ್ತಿ, ಕುತೂಹಲ ಮೂಡಿಸುವ ಪ್ರಯತ್ನ ನಡೆಸಲಾಗಿದೆ. ಈ ಪ್ರಯತ್ನದ ಒಂದು ಫಲವೆಂದರೆ ಪಾಠ ಮಾಡಬಹುದಾದ ಹೊಸ ಉಪನ್ಯಾಸಕರನ್ನು ತೆರೆಗೆ ತಂದಿದ್ದು. ಹಾಗೆಯೇ, ಈ ಪ್ರಯೋಗ ಉಪನ್ಯಾಸಕರಿಗೆ ತಾನೂ ಪಾಠ ಮಡಬಲ್ಲೆ ಎಂಬ ವಿಶ್ವಾಸವನ್ನು ನೀಡಿತ್ತು!

‘ಕಮ್ಯುನಿಸ್ಟ್ ಮ್ಯಾನಿಫೆಸ್ಟೋ’ ಒಂದ್ದೇ

ಪುಟ 15 ಕ್ಕೆ

ವ್ಯಂಗ್ಯಚಿತ್ರ: ಪಿ.ಮಹಮ್ಮದ್



ಪೌರತ್ವ (ತಿದ್ದುಪಡಿ) ಮಸೂದೆ ಅಥವ ಸಿ.ಎ.ಬಿ. ಮುಸ್ಲಿಮೇತರ ವಲಸಿಗರನ್ನು ನಾಗರಿಕರೆಂದು ಕಾನೂನುಬದ್ಧಗೊಳಿಸಿದರೆ, ಎನ್.ಆರ್.ಸಿ. ಮುಸ್ಲಿಂ ನುಸುಳುಕೋರರು ಎನ್ನಲಾಗುವವರ ಮೇಲೆ ಗುರಿಯಿಡುತ್ತದೆ. ಬಿಜೆಪಿ ಇಟ್ಟುಕೊಂಡಿರುವ ಗುರಿಯೆಂದರೆ, ಎರಡನೇ ದರ್ಜೆಯ ನಾಗರಿಕರು ಎಂಬೊಂದು ವಿಧವನ್ನು ಸೃಷಿಸುವುದು ಮತ್ತು ಅವರ ಹಕ್ಕುಗಳನ್ನು ತೀವ್ರವಾಗಿ ಮಿತಿಗೊಳಿಸುವುದು. ಈ ಯೋಚನೆಯ ಹಿಂದೆ ಇರುವುದು ವಿ.ಡಿ.ಸಾವರ್ಕರ್ ಪ್ರತಿಪಾದಿಸಿದ ಎರಡು–ರಾಷ್ಟ್ರಗಳ ಸಿದ್ಧಾಂತ. ಸಿ.ಎ.ಬಿ. ಮತ್ತು ಎನ್.ಆರ್.ಸಿ.ಯ ಎರಡು ಕಡೆಗಳಿಂದ ಸುತ್ತುವರೆಯುವ ತಂತ್ರವನ್ನು ಬಿಜೆಪಿ–ಆರೆಸ್ಸೆಸ್‌ನ ಸಂಕುಚಿತ ರಾಜಕಾರಣಕ್ಕೆ ಹೊಂದುವಂತೆ ಕೋಮು ಆತಂಕಗಳನ್ನು ಹೆಚ್ಚಿಸಲು ಮತ್ತು ಒಂದು ಹೊಸ ವಿಭಜನಕಾರೀ ಅಜೆಂಡಾವನ್ನು ಸೃಷ್ಟಿಸಲು ಉಪಯೋಗಿಸಲಾಗುತ್ತದೆ. ಬಿಜೆಪಿಯ ದುಷ್ಟತಂತ್ರಗಳನ್ನು ವಿಫಲಗೊಳಿಸಲು ಈ ಮಸೂದೆಗೆ ಸುಪ್ರಿಂ ಕೋರ್ಟಿನಲ್ಲಿ ಸವಾಲು ಹಾಕುವುದರೊಂದಿಗೇ, ಅವನ್ನು ಬಯಲಿಗೆಳೆಯಲು ವ್ಯಾಪಕವಾದ ಪ್ರಚಾರಾಂದೋಲನವನ್ನು ನಡೆಸಬೇಕು.

ಪ್ರಕಾಶ ಕಾರಟ್

ಪೌರತ್ವ (ತಿದ್ದುಪಡಿ) ಮಸೂದೆ ದುಷ್ಟತನದಿಂದ ತುಂಬಿರುವ ಶಾಸನ



CAB: Protest Intensify in Assam, Left Parties Call for Nationwide Protest on Dec 19

ಪೌರತ್ವ (ತಿದ್ದುಪಡಿ) ಮಸೂದೆ, 2019(ಸಿ.ಎ.ಬಿ.) ಸಂಸತ್ತಿನ ಒಳಗೂ, ಹೊರಗೂ ಬಲವಾದ ಪ್ರತಿಭಟನೆಗಳ ನಡುವೆ ಅಂಗೀಕಾರಗೊಂಡಿದೆ. ಸಿ.ಎ.ಬಿ. ಸಂವಿಧಾನದ ಮೂಲ ನೀತಿಗಳಿಗೆ ತದ್ವಿರುದ್ಧವಾಗಿರುವ ಒಂದು ಅಪಾಯಕಾರಿ ಶಾಸನ. ಈ ಮಸೂದೆಯಲ್ಲಿ ವಿಧಿಸಿರುವ ಅಂಶಗಳು ಸಂವಿಧಾನದಲ್ಲಿ ಪ್ರತಿಷ್ಠಾಪಿತಗೊಂಡಿರುವ ಪೌರತ್ವದ ಜಾತ್ಯತೀತ ಪರಿಕಲ್ಪನೆಯನ್ನು ಶಿಥಿಲಗೊಳಿಸುತ್ತವೆ. ಸಂವಿಧಾನದ ಕಲಮು 14, ಭಾರತದ ಪ್ರದೇಶದ ಒಳಗೆ ಯಾವುದೇ ವ್ಯಕ್ತಿಗೆ ಕಾನೂನಿನ ಎದುರು ಸಮಾನತೆ ಅಥವ ಕಾನೂನಿನ ಸಮಾನ ರಕ್ಷಣೆಯನ್ನು ನಿರಾಕರಿಸಲಾಗದು ಎಂದು ವಿಧಿಸಿದೆ. ಸಂವಿಧಾನವು ಮತ, ಜಾತಿ, ಪಂಥ ಅಥವ ಲಿಂಗದ ಆಧಾರದಲ್ಲಿ ತಾರತಮ್ಯವನ್ನು ಕೂಡ ನಿಷೇದಿಸಿದೆ.

ಸಿ.ಎ.ಬಿ. ಕೆಲವು ವಿಭಾಗಗಳ ಜನರನ್ನು ಪೌರತ್ವ ನೀಡಿಕೆಗೆ ಪರಿಶೀಲಿಸುವಾಗ ಒಂದು ಮತೀಯ ಮಾನದಂಡವನ್ನು ಸೇರಿಸಿದೆ. ಈ ತಿದ್ದುಪಡಿಯ ಪ್ರಕಾರ ಡಿಸೆಂಬರ್ 31, 2014ರ ಮೊದಲು ಅಫಘಾನಿಸ್ತಾನ, ಬಾಂಗ್ಲಾದೇಶ್ ಅಥವ ಪಾಕಿಸ್ತಾನದಿಂದ ಬಂದಿರುವ ಹಿಂದೂಗಳು, ಸಿಖ್ಖರು, ಔದ್ಧರು, ಜೈನರು, ಪಾರ್ಸಿಗಳು ಅಥವ ಕ್ರಿಶ್ಚಿಯನ್ನರನ್ನು ಕಾನೂನುಬಾಹಿರ ವಲಸಿಗರು ಎಂದು ಕಾಣುವುದಿಲ್ಲ. ಅವರು ಭಾರತದಲ್ಲಿ ಕನಿಷ್ಟ ಐದು ವರ್ಷಗಳನ್ನು ಕಳೆದಿದ್ದರೆ, ಸಹಜೀಕರಣ(ನೆಚರಲೈಸೇಶನ್)ದಿಂದ ಪೌರತ್ವಕ್ಕೆ ಅರ್ಹರಾಗಬಹುದು. ಈ ಮೊದಲು ಸಹಜೀಕರಿಸಲು ಸಮಯಮಿತಿ ಹನ್ನೊಂದು ವರ್ಷಗಳಾಗಿದ್ದವು. ಅಂದರೆ ಈ ಮಿತಿಯನ್ನು ಸಡಿಲಿಸಲಾಗುತ್ತಿದೆ.

ಅದರೆ ಇದು ಈ ಮೂರು ದೇಶಗಳಿಂದ ಬಂದಿರುವ ಮುಸ್ಲಿಮರಿಗೆ ಅನ್ವಯಿಸುವುದಿಲ್ಲ. ಅವರನ್ನು ಕಾನೂನುಬಾಹಿರ ವಲಸಿಗರೆಂದು ಪರಿಗಣಿಸಲಾಗುತ್ತದೆ. ಮತೀಯ ಆಧಾರದಲ್ಲಿ ಈ ತಾರತಮ್ಯವೇ ಪೌರತ್ವದ ಕಾಯ್ದೆಗೆ ಈ ತಿದ್ದುಪಡಿಯನ್ನು ಅಸಂವಿಧಾನಿಕ ಮತ್ತು ಕಾನೂನುಬಾಹಿರಗೊಳಿಸುತ್ತದೆ.

ಬಿಜೆಪಿ ಈ ಮೊದಲೇ ಹಿಂದಿನ ಲೋಕಸಭೆಯಲ್ಲಿ ಈ ಮಸೂದೆಯನ್ನು ಪಾಸುಮಾಡಿಕೊಂಡಿತ್ತು. ಆದರೆ ರಾಜ್ಯಸಭೆಯಲ್ಲಿ ಬಹುಮತವಿಲ್ಲದ್ದರಿಂದ ಪಾಸಾಗಲಿಲ್ಲ. ಈ ಮಸೂದೆಯ ಉದ್ದೇಶ ಬಾಂಗ್ಲಾದೇಶದಿಂದ ಅಸ್ಸಾಂಗೆ ಬಂದಿರುವ ಹಿಂದೂ ವಲಸಿಗರಿಗೆ ಪೌರತ್ವವನ್ನು ಖಾತ್ರಿಪಡಿಸುತ್ತಲೇ, ಆ ದೇಶದಿಂದ ಬರುವ ಯಾವುದೇ ಮುಸ್ಲಿಂ ವಲಸಿಗರನ್ನು ಹೊರಗಿಡುವ ಕೋಮುವಾದಿ ಅಜೆಂಡಾ. ಅಸ್ಸಾಂನಲ್ಲಿ ಎನ್.ಆರ್.ಸಿ. ಪ್ರಕ್ರಿಯೆ ಮಾರ್ಚ್ 24, 1971ರ ನಂತರ ಪ್ರವೇಶಿಸಿರುವ ಎಲ್ಲರನ್ನೂ ಹೊರಗಿಡುವುದರಿಂದಾಗಿ ಈ ಕ್ರಮ ಅಗತ್ಯವಾಗಿತ್ತು.

ಅಸ್ಸಾಂನಲ್ಲಿ 'ರಾಷ್ಟ್ರೀಯ ಪೌರರ ದಾಖಲಾತಿ'(ಎನ್.ಆರ್.ಸಿ.)ಯ ಅಂತಿಮ ಪಟ್ಟಿಯನ್ನು ಈ ವರ್ಷ ಆಗಸ್ಟ್ 31ರಂದು ಸಿ.ಎ.ಬಿ.ಯನ್ನು ಜಾರಿಗೊಳಿಸುವ ಮೊದಲು ಪ್ರಕಟಿಸಲಾಯಿತು. ಇದರ ಫಲಿತಾಂಶವಾಗಿ ಬಾಂಗ್ಲಾದೇಶದಿಂದ ಬಂದು ಹಿಂದೂಗಳನ್ನೂ ದೊಡ್ಡ ಸಂಖ್ಯೆಯಲ್ಲಿ ಹೊರಗಿಡಲಾಗಿದೆ. ಆದ್ದರಿಂದಲೇ ಅಸ್ಸಾಂನ ಬಿಜೆಪಿ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರ ಎನ್.ಆರ್.ಸಿ. ಪಟ್ಟಿಯನ್ನು ವಿರೋಧಿಸಿವೆ. ಹೀಗೆ ಮೋದಿ ಸರಕಾರಕ್ಕೆ ಇಡೀ ದೇಶಕ್ಕೆ ಎನ್.ಆರ್.ಸಿ. ಯನ್ನು ಸಿದ್ದಪಡಿಸುವ ಕೆಲಸಕ್ಕೆ ಕೈಹಾಕುವ ಮೊದಲು ಸಿ.ಎ.ಬಿ.ಯನ್ನು ಅಂಗೀಕರಿಸುವ ತುರ್ತು ಬಂದಿತು. ಗೃಹಮಂತ್ರಿ ಅಮಿತ್ ಷಾ ಕಪಟತನದಿಂದ ಅಸ್ಸಾಂನಲ್ಲಿ ಎನ್.ಆರ್.ಸಿ. ಯನ್ನು ಇಡೀ ದೇಶದ ಜತೆಗೆ ಮತ್ತೊಮ್ಮೆ ಮಾಡಲಾಗುವುದು ಎಂದು ಪ್ರಕಟಿಸಿದ್ದಾರೆ.

ಈ ಸಿ.ಎ.ಬಿ. ಗೆ ಅಸ್ಸಾಂ ಮತ್ತು ಈಶಾನ್ಯ ಭಾರತದ ಜನಗಳಿಂದ ಕೋಪಾವೇಶದ ಪ್ರತಿಕ್ರಿಯೆ ಎದುರಾಗಿದೆ. ಅಸ್ಸಾಂನ ಜನರು ಈ ಶಾಸನ ಅಸ್ಸಾಂ ಒಪ್ಪಂದದಲ್ಲಿ ನೀಡಿದ ವಚನಕ್ಕೆ ಮಾಡಿರುವ ವಿಶ್ವಾಸದ್ರೋಹ ಎಂದು ಕಾಣುತ್ತಿದ್ದಾರೆ. ಏಕೆಂದರೆ ಆ ಒಪ್ಪಂದದ ಪ್ರಕಾರ ಮಾರ್ಚ್ 1971ರ ನಂತರ ಅಸ್ಸಾಂ ಪ್ರವೇಶಿಸಿದವರಿಗೆ ಪೌರತ್ವವನ್ನು ಕೊಡಲಾಗುವುದಿಲ್ಲ. ಸಿ.ಎ.ಬಿ. ಈ ಸಮಯಮಿತಿಯನ್ನು ಡಿಸೆಂಬರ್ 31, 2014 ರ ವರೆಗೆ ವಿಸ್ತರಿಸಿ ಕಾನೂನುಬಾಹಿರ ವಲಸಿಗರನ್ನು ಕಾನೂನುಬದ್ಧಗೊಳಿಸಿ, 1985ರಲ್ಲಿ ಅಸ್ಸಾಂ ಒಪ್ಪಂದದ ಮೂಲಕ ಏರ್ಪಟ್ಟಿರುವ ಜಾಗರೂಕತೆಯಿಂದ ಸಮತೋಲಗೊಳಿಸಿದ್ದ ಒಡಂಬಡಿಕೆಯನ್ನು ತಲೆಕೆಳಗಾಗಿಸಿದೆ.

ಈಶಾನ್ಯ ಭಾರತದ ಎಲ್ಲ ರಾಜ್ಯಗಳಲ್ಲಿ ಅಲ್ಲಿಯ ಮೂಲನಿವಾಸಿಗಳ ಅಸ್ಮಿತೆಗಳು ಹೊಸದಾಗಿ ಪೌರತ್ವ ಪಡೆಯುವ ಜನಗಳು ದೊಡ್ಡಪ್ರಮಾಣದಲ್ಲಿ ಬಂದು ಸೇರುವುದರಿಂದಾಗಿ ಮುಳುಗಿ ಹೋಗಬಹುದು ಎಂಬ ಭಯ ಮೂಡಿದೆ. ಸಂವಿಧಾನದ ಆರನೇ ಶೆಡ್ಯೂಲಿನ ಅಡಿಯಲ್ಲಿ ಬರುವ ಬುಡಕಟ್ಟು ಪ್ರದೇಶಗಳಿಗೆ ಮತ್ತು 'ಇನ್ನರ್ ಲೈನ್'(ಒಳಗಣ ರೇಖೆ) ಇರುವ ಪ್ರದೇಶಗಳಿಗೆ ಈ ಸಿ.ಎ.ಬಿ.ಯಿಂದ ವಿನಾಯ್ತಿ ಕೊಟ್ಟು ಅವರನ್ನು ಸಮಾಧಾನ ಪಡಿಸುವ ಮೋದಿ ಸರಕಾರದ ಪ್ರಯತ್ನ ವಿಫಲವಾಗಿದೆ. ಈ ಸುರಕ್ಷಿತ ಕ್ಷೇತ್ರಗಳು ಹೊರಗಿಂದ ಅಲ್ಲಿಯೇ ನೆಲೆಸಲು ಬರುವ ಜನಗಳಿಂದ ಸತತವಾಗಿ ಒತ್ತಡಗಳನ್ನು ಎದುರಿಸುತ್ತಲೇ ಇರುವುದರಿಂದಾಗಿ ಮೋದಿ ಸರಕಾರದ ಈ ಪ್ರಯತ್ನ ಫಲ ಕೊಟ್ಟಿಲ್ಲ.

ಸಿ.ಎ.ಬಿ. ಮತ್ತು ಎನ್.ಆರ್.ಸಿ. ಯನ್ನು ಒಟ್ಟಾಗಿ ಕಾಣಬೇಕು. ಸಿ.ಎ.ಬಿ. ಮುಸ್ಲಿಮೇತರ ವಲಸಿಗರನ್ನು ನಾಗರಿಕರೆಂದು ಕಾನೂನುಬದ್ಧಗೊಳಿಸಿದರೆ, ಎನ್.ಆರ್.ಸಿ. ಮುಸ್ಲಿಂ ನುಸುಳುಕೋರರು ಎನ್ನಲಾಗುವವರ ಮೇಲೆ ಗುರಿಯಿಡುತ್ತದೆ. ಬಿಜೆಪಿ ಇಟ್ಟುಕೊಂಡಿರುವ ಗುರಿಯೆಂದರೆ, ಎರಡನೇ ದರ್ಜೆಯ ನಾಗರಿಕರು ಎಂಬೊಂದು ವಿಧವನ್ನು ಸೃಷಿಸುವುದು ಮತ್ತು ಅವರ ಹಕ್ಕುಗಳನ್ನು ತೀವ್ರವಾಗಿ ಮಿತಿಗೊಳಿಸುವುದು. ಈ ಯೋಚನೆಯ ಹಿಂದೆ ಇರುವುದು ವಿ.ಡಿ.ಸಾವರ್ಕರ್ ಪ್ರತಿಪಾದಿಸಿದ ಎರಡು–ರಾಷ್ಟ್ರಗಳ ಸಿದ್ಧಾಂತ.

ಸಿ.ಎ.ಬಿ. ಮತ್ತು ಎನ್.ಆರ್.ಸಿ.ಯ ಎರಡು ಕಡೆಗಳಿಂದ ಸುತ್ತುವರೆಯುವ ತಂತ್ರವನ್ನು ಬಿಜೆಪಿ–ಆರೆಸ್ಸೆಸ್‌ನ ಸಂಕುಚಿತ ರಾಜಕಾರಣಕ್ಕೆ ಹೊಂದುವಂತೆ ಕೋಮು ಆತಂಕಗಳನ್ನು ಹೆಚ್ಚಿಸಲು ಮತ್ತು ಒಂದು ಹೊಸ ವಿಭಜನಕಾರೀ ಅಜೆಂಡಾವನ್ನು ಸೃಷ್ಟಿಸಲು ಉಪಯೋಗಿಸಲಾಗುತ್ತದೆ.

ಈ ಪೌರತ್ವ ತಿದ್ದುಪಡಿ ಮಸೂದೆಗೆ ಸುಪ್ರಿಂ ಕೋರ್ಟಿನಲ್ಲಿ ಸವಾಲು ಹಾಕಬೇಕು. ಹಾಗೆ ಮಾಡುತ್ತಲೇ, ಸಿ.ಎ.ಬಿ.–ಎನ್.ಆರ್.ಸಿ.ಗೆ ಸಂಬಂಧಪಟ್ಟಂತೆ ಬಿಜೆಪಿಯ ದುಷ್ಟತಂತ್ರಗಳನ್ನು ಬಯಲಿಗೆಳೆಯಲು ವ್ಯಾಪಕವಾದ ಪ್ರಚಾರಾಂದೋಲನವನ್ನು ನಡೆಸಬೇಕು.

ಸಿಪಿಐ(ಎಂ)ನಿಂದ 3 ತಿದ್ದುಪಡಿಗಳ ಸೂಚನೆ

ಸಿಪಿಐ(ಎಂ)ನ ರಾಜ್ಯಸಭಾ ಸದಸ್ಯ ಎಳಮರಂ ಕರೀಮ್ ಈ ಮಸೂದೆಗೆ ಮೂರು ತಿದ್ದುಪಡಿಗಳನ್ನು ಸೂಚಿಸಿದರು.

ಪರಿಚ್ಛೇದ 2 ಹಾಗೂ 6ರಲ್ಲಿ ಬರುವ "ಅಫಘಾನಿಸ್ತಾನ, ಬಾಂಗ್ಲಾದೇಶ್ ಮತ್ತು ಪಾಕಿಸ್ತಾನದಿಂದ ಬಂದಿರುವ ಹಿಂದು, ಸಿಖ್, ಬೌದ್ಧ, ಜೈನ, ಪಾರಸೀ ಅಥವ ಕ್ರೈಸ್ತ ಸಮುದಾಯಕ್ಕೆ ಸೇರಿದ" ಎಂಬ ವಾಕ್ಯವನ್ನು ತೆಗೆದು "ನೆರೆದೇಶಗಳಿಂದ ಬಂದ" ಎಂದು ಸೇರಿಸಬೇಕು ಎಂಬ ಎರಡು ತಿದ್ದುಪಡಿಗಳು, ಹಾಗೂ ಮೂರನೆಯದ್ದು, ಪರಿಚ್ಛೇದ 3ರಲ್ಲಿ "ಈ ವಿಭಾಗದಲ್ಲಿನ ಯಾವುದೂ ಅಸ್ಸಾಂ ಮತ್ತು ಇತರ ಈಶಾನ್ಯ ರಾಜ್ಯಗಳಿಗೆ ಅನ್ವಯಿಸುವುದಿಲ್ಲ" ಎಂದು ಸೇರಿಸಬೇಕು ಎಂಬುದು ಸಿಪಿಐ(ಎಂ) ಪರವಾಗಿ ಅವರು ಸೂಚಿಸಿದ ತಿದ್ದುಪಡಿಗಳು.

ದೇಶವನ್ನು ಸಂಕಟಮಯ ಹಾದಿಗೆ ತಳ್ಳುವ ಸಿಎಬಿ–ಎನ್‌ಆರ್‌ಸಿ ಬೇಡವೇ ಬೇಡ

ಎರಡು ಸಾವಿರಕ್ಕೂ ಹೆಚ್ಚು ವಿಜ್ಞಾನಿಗಳು, ಸಂಶೋಧಕರು, ಲೇಖಕರು, ಕಲಾವಿದರು, ಪ್ರತಿಷ್ಠಿತ ನಾಗರಿಕರ ಆಗ್ರಹ

ದೇಶದಲ್ಲಿ ಮತ್ತು ವಿದೇಶಗಳಲ್ಲಿ ಸಂಶೋಧನೆಗಳಲ್ಲಿ ತೊಡಗಿರುವ ಸುಮಾರು 1500 ವಿಜ್ಞಾನಿಗಳು ಮತ್ತು ಸಂಶೋಧಕರು 700ಕ್ಕೂ ಹೆಚ್ಚು ಲೇಖಕರು, ಕಲಾವಿದರು, ನಾಗರಿಕ ಹಕ್ಕುಗಳ ಕಾರ್ಯಕರ್ತರು, ನಿವೃತ್ತ ನ್ಯಾಯಾಧೀಶರುಗಳು ಮತ್ತಿತರ ಪ್ರತಿಷ್ಠಿತ ನಾಗರಿಕರು ಸಿಎಬಿ ಮತ್ತು ದೇಶವ್ಯಾಪಿ ಎನ್‌ಆರ್‌ಸಿಯ ಪ್ರಯತ್ನಗಳನ್ನು ಬಲವಾಗಿ ಖಂಡಿಸಿದ್ದಾರೆ.

ಈ ಮಸೂದೆಯ ಘೋಷಿತ ಉದ್ದೇಶ ನೆರೆದೇಶಗಳಲ್ಲಿ ಕಿರುಕುಳಕ್ಕೆ ಒಳಗಾಗಿರುವ ಅಲ್ಪಸಂಖ್ಯಾತರಿಗೆ ಆಶ್ರಯ ನೀಡುವುದು. ಇದು ಒಂದು ಶ್ಲಾಘನೀಯ ಗುರಿಯೇ. ಆದರೆ ಭಾರತೀಯ ಪೌರತ್ವವನ್ನು ನಿರ್ಧರಿಸಲು ಧರ್ಮವನ್ನು ಒಂದು ಕಾನೂನಾತ್ಮಕ ಮಾನದಂಡವಾಗಿ ಬಳಸಲು ಮುಂದಾಗಿರುವುದು ಅತ್ಯಂತ ಆತಂಕಕಾರಿ ಹಾಗೂ ದೇಶಕ್ಕೆ ಹಾನಿಕಾರಕ ಎಂದು ಸುಮಾರು 1500 ಭಾರತೀಯ ವಿಜ್ಞಾನಿಗಳು ಮತ್ತು ಸಂಶೋಧಕರು ಸಹಿ ಹಾಕಿದ ಮನವಿ ಪತ್ರ ಹೇಳಿದೆ. ಈ ಮಸೂದೆ ಸಂವಿಧಾನದ ವಿಧಿಗಳನ್ನು ಉಲ್ಲಂಘಿಸುತ್ತಿದೆಯೋ ಎಂಬುದನ್ನು ಕಾನೂನು ಪಂಡಿತರೇ ಹೇಳಬೇಕು, **ಆದರೆ ಇದು ಸಂವಿಧಾನದ ಆಶಯವನ್ನು ಉಲ್ಲಂಘಿಸುತ್ತಿರುವದಂತೂ ಖಂಡಿತ ಎಂದು ತಮಗನಿಸುವುದಾಗಿ ಈ ವಿಜ್ಞಾನಿಗಳು ಹೇಳಿದ್ದಾರೆ. ಆದ್ದರಿಂದ ಈ ಮಸೂದೆಯ ಬದಲು ನಿರಾಶ್ರಿತರು ಹಾಗೂ ಕಿರುಕುಳಕ್ಕೆ ಒಳಗಾಗಿರುವ**

ಪುಟ 12 ಕ್ಕೆ

ಕೋಮುವಾದದ 'ಸಹಜೀಕರಣ'–ಇನ್ನೇನೂ ಅಡಗಿಕೊಂಡಿರಬೇಕಿಲ್ಲ!



ವ್ಯಂಗ್ಯ ಚಿತ್ರ: ಮಂಜುಲ್, ಫಸ್ಟ್‌ಪೋಸ್ಟ್

ಕೃಷಿ ಪ್ರಾಂತ ಕೂಲಿಕಾರರ ಮತ್ತು ಗ್ರಾಮೀಣ ಕೆಲಸಗಾರರ 7ನೇ ಕರ್ನಾಟಕ ರಾಜ್ಯ ಸಮ್ಮೇಳನವು ಕಲಬುರ್ಗಿ ನಗರದಲ್ಲಿ ಡಿಸೆಂಬರ್ 13ರಿಂದ 15ರ ವರೆಗೆ ನಡೆಯುತ್ತಿದೆ. ಸಂಘದ 6ನೇ ಸಮ್ಮೇಳನದ ನಂತರದ ಅವಧಿಯಲ್ಲಿ ನಡೆಸಲಾದ ಮುಖ್ಯ ಚಟುವಟಿಕೆಗಳ ಮತ್ತು ಹೋರಾಟಗಳ ಸಂಕ್ಷಿಪ್ತ ವರದಿ ಇಲ್ಲಿದೆ. ಇದು 7ನೇ ಸಮ್ಮೇಳನದ ವರದಿಯಿಂದ ಆಯ್ದ ಭಾಗ.

ಕೃಷಿ ಕೂಲಿಕಾರರ ಪ್ರಮುಖ ಹೋರಾಟಗಳು

1. ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಜಾರಿಗಾಗಿ :

ಕಳೆದ 3 ವರ್ಷಗಳ ಅವಧಿಯಲ್ಲಿ ಸಂಘದ ಗ್ರಾಮ ಘಟಕಗಳು ಮತ್ತು ವಿವಿಧ ಹಂತದ ಸಮಿತಿಗಳು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಸಮರ್ಪಕ ಅನುಷ್ಠಾನಕ್ಕಾಗಿ ಗಮನಾರ್ಹ ಕೆಲಸವನ್ನು ಮಾಡಿವೆ. ವರ್ಷಕ್ಕೊಮ್ಮೆಯಾದರೂ ಒಂದಲ್ಲ ಒಂದು ಜಿಲ್ಲೆಯಲ್ಲಿ ರಾಜ್ಯಮಟ್ಟದ ಉದ್ಯೋಗ ಖಾತ್ರಿ ಕೆಲಸಗಾರರ ಸಮಾವೇಶಗಳನ್ನು ಏರ್ಪಡಿಸಿ ಕೆಲಸಗಾರರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. 2017 ರಲ್ಲಿ ಅಂತಹ ಒಂದು ಸಮಾವೇಶವನ್ನು ಮಂಡ್ಯದಲ್ಲಿ ಯಶಸ್ವಿಯಾಗಿ ನಡೆಸಲಾಗಿದೆ. ಬರ ಪೀಡಿತ ಪ್ರದೇಶಗಳಲ್ಲಿ ಕನಿಷ್ಟ ವರ್ಷಕ್ಕೆ 150 ದಿನಗಳ ಕೆಲಸ ಒದಗಿಸಲು ಒತ್ತಾಯಿಸಿ ಸಮಾವೇಶ ನಿರ್ಣಯವನ್ನು ಅಂಗೀಕರಿಸಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ 200 ಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದಾರೆ. ಬಾಕಿ ಕೂಲಿ ಹಣ ಸಂದಾಯ ಮಾಡಲು ಒತ್ತಾಯಿಸಿ ಪಂಚಾಯತ್ ಮಟ್ಟದಲ್ಲಿ ಪ್ರತಿಭಟನೆ ನಡೆಸಲು ನೀಡಲಾದ ಕರೆ ರಾಜ್ಯದ ಹಲವೆಡೆ ಜಾರಿಯಾಗಿದ್ದು ಸುಮಾರು 4000 ಕೆಲಸಗಾರರಿಗೆ ಬಾಕಿ ಕೂಲಿ ಹಣವನ್ನು ಪಡೆಯಲು ಸಾಧ್ಯವಾಗಿದೆ. ಅಂತಹ ಇನ್ನೊಂದು ಸಮಾವೇಶವನ್ನು 2019 ಫೆಬ್ರವರಿ 28 ರಂದು ಬೆಂಗಳೂರಿನಲ್ಲಿ ನಡೆಸಲಾಗಿದೆ. ಬೇಡಿಕೆಗಳ ಪಟ್ಟಿಯೊಂದನ್ನು ಚರ್ಚಿಸಿ ಅಂಗೀಕರಿಸಲಾಗಿದೆ. ತಾಲೂಕ ಮಟ್ಟದಲ್ಲಿ ಹೋರಾಟಗಳನ್ನು ನಡೆಸಿದ ಪರಿಣಾಮವಾಗಿ ಸುಮಾರು 20,000 ಕೂಲಿಕಾರರಿಗೆ ಕೆಲಸ ಸಿಕ್ಕಿದೆ. ಜಿಲ್ಲಾ ಮಟ್ಟದ ಸಮಾವೇಶಗಳನ್ನು ಸಹ ನಡೆಸಲಾಗಿವೆ. ಹಿರಿಯ ಅಧಿಕಾರಿಗಳನ್ನು ಆಹ್ವಾನಿಸಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಗಿದೆ. ಇತ್ತೀಚೆಗೆ 2019 ನವೆಂಬರ್ 4 ರಂದು ನವದೆಹಲಿಯಲ್ಲಿ ಏರ್ಪಡಿಸಲಾಗಿದ್ದ ರಾಷ್ಟ್ರ ಮಟ್ಟದ ಸಮಾವೇಶದಲ್ಲಿ ಕರ್ನಾಟಕದಿಂದ 6 ಜನ ಪ್ರತಿನಿಧಿಗಳು ಭಾಗವಹಿಸಿ ಸ್ಫೂರ್ತಿ ಪಡೆದಿದ್ದಾರೆ.

ಉದ್ಯೋಗ ಖಾತ್ರಿ ಸಮರ್ಪಕ ಜಾರಿಗಾರಿ ಮಂಡ್ಯ, ಕೊಪ್ಪಳ, ಕಲಬುರಗಿ, ಯಾದಗಿರಿ, ರಾಯಚೂರು, ಮೊದಲಾದ ಜಿಲ್ಲೆಗಳಲ್ಲಿ ನಿರಂತರ ಹೋರಾಟಗಳು ನಡೆದಿವೆ. ಇದರಿಂದ ಸಂಘದ ಪ್ರಭಾವ ವಿಸ್ತಾರಗೊಂಡಿದೆ.

2. ಬರ ಮತ್ತು ನೆರೆ ಹಾವಳಿಯಲ್ಲಿ ಮಧ್ಯ ಪ್ರವೇಶ:

ಕರ್ನಾಟಕ ನಿರಂತರವಾಗಿ ಕಳೆದ ಕೆಲವು ವರ್ಷಗಳಿಂದ ಬರಗಾಲಕ್ಕೆ ತುತ್ತಾಗುತ್ತಾ ಬರುತ್ತಿದೆ. ಕೃಷಿ ಕೂಲಿಕಾರರಿಗೆ ಕೆಲಸ ಸಿಗದಂತಾಗಿ ಗುಳೆ ಹೋಗುವುದು ವ್ಯಾಪಕವಾಗಿದೆ. ಬರಪೀಡಿತ ಪ್ರದೇಶಗಳಿಗೆ ಅಗತ್ಯ ಬರಪರಿಹಾರ ಕ್ರಮಗಳನ್ನು ಜಾರಿಗೊಳಿಸಲು ಸರ್ಕಾರವನ್ನು ಒತ್ತಾಯಿಸಲು ನಮ್ಮ ಸಂಘ ಸಕ್ರೀಯವಾಗಿ ಕೆಲಸ ಮಾಡುತ್ತಾ ಬಂದಿದೆ. ಉದ್ಯೋಗ ಖಾತ್ರಿ ಕಾಯ್ದೆಯನ್ನು ಸಮರ್ಪಕವಾಗಿ ಜಾರಿಮಾಡಲು, ಕೂಲಿ ದರಗಳನ್ನು ಹೆಚ್ಚಿಸಲು, 100 ದಿನಗಳ ಬದಲಾಗಿ 150 ದಿನಗಳ ಕೆಲಸ ನೀಡಲು, ಕೆಲಸದ ಪ್ರಮಾಣವನ್ನು ತಗ್ಗಿಸಲು ಹೋರಾಟಗಳನ್ನು ಮಾಡುತ್ತಾ ಬಂದಿದೆ. ಕಳೆದ ವರ್ಷ ಬರಪೀಡಿತ ಪ್ರದೇಶಗಳ ಪ್ರತಿಯೊಂದು ಕೂಲಿಕಾರ ಕುಟುಂಬಕ್ಕೆ ತಿಂಗಳಿಗೆ ರೂ. 3000 ದಂತೆ ತಕ್ಷಣದ ಪರಿಹಾರ ನೀಡಬೇಕೆಂದು ಒತ್ತಾಯಿಸಲಾಗಿದೆ. ಈ ಬೇಡಿಕೆಯನ್ನು ಈಡೇರಿಸಿಕೊಳ್ಳಲು ಸಾಧ್ಯವಾಗದಿದ್ದರೂ ಅದು ಗ್ರಾಮೀಣ ಜನತೆಯ ಗಮನವನ್ನು ಸೆಳೆದಿದೆ.

ಈ ಸಲ ಕರ್ನಾಟಕ ರಾಜ್ಯ ಭೀಕರವಾದ ಪ್ರವಾಹಕ್ಕೆ ತುತ್ತಾಯಿತು. ನೂರಾರು ಜನ ಪ್ರಾಣ ಕಳೆದುಕೊಂಡರು. ಸಾವಿರಾರು ಮನೆಗಳು ಮತ್ತು ಅಲ್ಲಿ ಇದ್ದುದೆಲ್ಲವೂ ನೀರಿನಲ್ಲಿ ಕೊಚ್ಚಿಕೊಂಡು ಹೋಯಿತು. ನಮ್ಮ ಕಾರ್ಯಕರ್ತರು ಪ್ರತಿಭಟನೆಗಳಲ್ಲಿ ಭಾಗವಹಿಸಿ ತುರ್ತು ಪರಿಹಾರ ಒದಗಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಒತ್ತಾಯಿಸಿದರು. ನಿರ್ಗತಿಕರಾದ ಸಂತ್ರಸ್ತರಿಗಾಗಿ ನೆರವು ಸಂಗ್ರಹಿಸುವುದರಲ್ಲಿ ಕೈಜೋಡಿಸಿದರು.

ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಮಾಡಿದ ಒಟ್ಟು ಜನಸಂಖ್ಯೆ				
ಕ್ರ.ಸಂ.	ವರ್ಷ	ಉದ್ಯೋಗ ನೀಡಿರುವ ಜನರ ಸಂಖ್ಯೆ (ಲಕ್ಷಗಳಲ್ಲಿ)	ಸೃಜಿಸಲಾದ ಮಾನವ ದಿನಗಳು (ಲಕ್ಷಗಳಲ್ಲಿ)	100 ದಿನ ಪೂರೈಸಿದ ಕುಟುಂಬಗಳು (ಲಕ್ಷಗಳಲ್ಲಿ)
1	2011–2012	–	699.19	0.45
2	2012–2013	40.61	627.00	0.71
3	2013–14	42.33	718.86	1.18
4	2014–15	29.90	430.12	0.41
5	2015–16	30.35	599.73	1.33
6	2016–17	44.17	914.06	1.96
7	2017–18	38.91	856.99	0.30
8	2018–19	39.35	1045.12	2.11
9	2019, 18–11–2019 ರ ವರೆಗೆ	35.05	784.99	0.14



3. ಬಜೆಟ್ ಪೂರ್ವ ರ್‍ಯಾಲಿಗಳು :

ಕಳೆದ ಕೆಲವು ವರ್ಷಗಳಿಂದ ನಮ್ಮ ಸಂಘ ರಾಜ್ಯದ ಬಜೆಟ್ ಪ್ರಕಟವಾಗುವ ಮೊದಲು ರಾಜ್ಯ ಕೇಂದ್ರದಲ್ಲಿ ಪ್ರದರ್ಶನ ನಡೆಸಿ ಬಜೆಟ್‌ನಲ್ಲಿ ಕೂಲಿಕಾರರ ಬೇಡಿಕೆಗಳಿಗೆ ಅಗತ್ಯ ಅನುದಾನವನ್ನು ಘೋಷಣೆ ಮಾಡುವಂತೆ ಒತ್ತಾಯಿಸುತ್ತಾ ಬಂದಿದೆ. ಆದರೆ ಸರ್ಕಾರಗಳು ಕೂಲಿಕಾರರನ್ನು ಕಡೆಗಣಿಸುತ್ತಲೇ ಬಂದಿವೆ. ಕೃಷಿ ಕೂಲಿಕಾರರಿಗಾಗಿ ಕೇರಳ ಮಾದರಿಯಲ್ಲಿ ಒಂದು ಸಮಗ್ರ ಕಲ್ಯಾಣ ಕಾಯ್ದೆಯನ್ನು ಜಾರಿಗೆ ತರಬೇಕೆಂಬುದು ನಮ್ಮ ಒಂದು ಪ್ರಮುಖ ಬೇಡಿಕೆ. 2017 ರಲ್ಲಿ ಫೆಬ್ರವರಿ ತಿಂಗಳಲ್ಲಿ ಬೆಂಗಳೂರಿನಲ್ಲಿ ಒಂದು ರ್‍ಯಾಲಿ ನಡೆಸಿ, ಪ್ರತಿಭಟನೆ ನಡೆಸಲಾಯಿತು. ಸುಮಾರು 4000 ಕೂಲಿಕಾರರು ಭಾಗವಹಿಸಿದ್ದರು. 2018 ರಲ್ಲಿ, ಬೆಂಗಳೂರಿನಲ್ಲಿ ರ್‍ಯಾಲಿ ನಡೆಸುವ ಬದಲು ಜಿಲ್ಲಾ ಕೇಂದ್ರಗಳಲ್ಲಿ ಮತಪ್ರದರ್ಶನಗಳನ್ನು ಹಮ್ಮಿಕೊಳ್ಳಲಾಗಿತ್ತು. 9 ಜಿಲ್ಲಾ ಕೇಂದ್ರಗಳಲ್ಲಿ ಈ ಕರೆ ಜಾರಿಗೊಳಿಸಲಾಯಿತು. ಸುಮಾರು 5000 ಕೂಲಿಕಾರರು ಭಾಗವಹಿಸಿದ್ದರು. 2019 ರಲ್ಲಿ ಫೆಬ್ರುವರಿ 27 ರಂದು ಮತ್ತೆ ರಾಜ್ಯ ರಾಜಧಾನಿಯಲ್ಲಿ ಕೂಲಿಕಾರರ ರ್‍ಯಾಲಿ ನಡೆಸಿ, ಧರಣಿ ಮಾಡಿ ಸರ್ಕಾರಕ್ಕೆ ಮನವಿ ನೀಡಲಾಯಿತು. ವರ್ಷಕ್ಕೊಮ್ಮೆ ನಡೆಸಲಾಗುತ್ತಿರುವ ಈ ರ್‍ಯಾಲಿಗಳಲ್ಲಿ ಅಖಿಲ ಭಾರತ ಅಧ್ಯಕ್ಷರಾಗಲಿ, ಪ್ರಧಾನ ಕಾರ್ಯದರ್ಶಿಯವರಾಗಲಿ ತಪ್ಪದೆ ಭಾಗವಹಿಸುತ್ತಾ ಬಂದಿರುತ್ತಾರೆ.



4. ಮನೆ ನಿವೇಶನಗಳಿಗಾಗಿ :

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮನೆ ನಿವೇಶನಗಳಿಗಾಗಿ, ಅನಧೀಕೃತ ಮನೆಗಳ ಸಕ್ರಮಕ್ಕಾಗಿ ನಿರಂತರ ಹೋರಾಟ ನಡೆಯುತ್ತಾ ಬಂದಿದೆ. ಉಡುಪಿ ಜಿಲ್ಲಾ ಸಮಿತಿಯು ಈ ದಿಕ್ಕಿನಲ್ಲಿ ಒಂದು ಮಾದರಿ ಹೋರಾಟವನ್ನೇ ನಡೆಸುತ್ತಾ ಬಂದಿದೆ. ಕಳೆದ ಐದಾರು ವರ್ಷಗಳಿಂದ ಉಡುಪಿಯಲ್ಲಿ ನಡೆಸಲಾದ ಮನೆ ನಿವೇಶನಗಳಿಗಾಗಿನ ಬಿಟ್ಟು ಬಿಡದ ಹೋರಾಟವು ಹೋರಾಟಗಾರರಲ್ಲಿ ವಿಶ್ವಾಸ ಮೂಡಿಸಿದೆ. ಕುಂದಾಪುರ ಮತ್ತು ಬೈಂದೂರು ತಾಲೂಕುಗಳಲ್ಲಿ ಚಳುವಳಿ ಯೋಜನಾ ಬದ್ಧವಾಗಿ ನಡೆಯುತ್ತಿದೆ. ತಹಶಿಲ್ದಾರರ ಕಛೇರಿ ಎದುರು ಕುಂದಾಪುರ ಪುರಸಭಾ **ಪುಟ 10 ಕ್ಕೆ**







ಅಂಗನವಾಡಿಯಲ್ಲಿ ಎಲ್.ಕೆ.ಜಿ.–ಯು.ಕೆ.ಜಿ. ಆರಂಭಕ್ಕೆ ಒತ್ತಾಯ

ಪಾದಯಾತ್ರೆಗೆ ತಡೆ, ಮಾತುಕತೆಗೆ ಆಹ್ವಾನ

ಡಿಸೆಂಬರ್ 10 ರಿಂದ 12 ರವರೆಗೆ ಅಂಗನವಾಡಿ ನೌಕರರು ತುಮಕೂರಿನಿಂದ ಬೆಂಗಳೂರು ವರೆಗೆ ಪಾದಯಾತ್ರೆ ಯೋಜಿಸಿದ್ದರು. ಸರಕಾರ ಉದ್ದೇಶಿಸಿದ್ದ ಪ್ರಾಥಮಿಕ–ಪೂರ್ವ ಶಿಕ್ಷಣವನ್ನು (ಎಲ್.ಕೆ.ಜಿ–ಯು.ಕೆ.ಜಿ) ಅಂಗನವಾಡಿಯಲ್ಲೇ ಆರಂಭಿಸಬೇಕು. ಐಸಿಡಿಎಸ್ ಮತ್ತು ಅಂಗನವಾಡಿ ಕೇಂದ್ರ ವ್ಯವಸ್ಥೆಯನ್ನು ಬಲಪಡಿಸಬೇಕು, ಎಂಬಿತ್ಯಾದಿ ಹಕ್ಕೊತ್ತಾಯಗಳಿಗೆ ಆಗ್ರಹಿಸಿ ಈ ಪಾದಯಾತ್ರೆ. ಈಗಾಗಲೇ ಹಲವು ಹಂತಗಳಲ್ಲಿ ಮನವಿ ಸಲ್ಲಿಸಿ ಈ ಹಕ್ಕೊತ್ತಾಯಗಳಿಗೆ ಆಗ್ರಹಿಸಿದ್ದರೂ, ರಾಜ್ಯದ ಆರು ಪ್ರದೇಶಗಳಲ್ಲಿ ಪ್ರಾದೇಶಿಕ ಜಾಥಾಗಳನ್ನು ಸಂಘಟಿಸಿದ್ದರೂ ಸರಕಾರದಿಂದ ಯಾವುದೇ ಸ್ಪಂದನೆ ಇರಲಿಲ್ಲ. ತಮ್ಮನ್ನು ಮಾರಿಕೊಂಡು ತಮ್ಮ ಪಕ್ಷ ಮತ್ತು ಮತದಾರರಿಗೆ ದ್ರೋಹ ಬಗೆದ ‘ಅನರ್ಹ’ ಶಾಸಕರನ್ನು ಉಪಚುನಾವಣೆಗಳಲ್ಲಿ ‘ಅರ್ಹ’ರಾಗಿಸಿ ಸಕ್ರಮಗೊಳಿಸುವ ಘನಕಾರ್ಯದಲ್ಲಿ ಯೆಡಿಯೂರಪ್ಪನವರ ನೇತೃತ್ವದ ಬಿಜೆಪಿ ಸರಕಾರವು ಮಗ್ನವಾಗಿತ್ತು. ಜನತೆ ಯಾವುದೇ ಸಮಸ್ಯೆಯನ್ನು ಪರಿಹರಿಸುವುದು ದೂರವುಳಿಯಿತು, ಕೇಳಿಸಿಕೊಳ್ಳುವುದಕ್ಕೂ ಸಿದ್ಧವಿರಲಿಲ್ಲ.

ಡಿಸೆಂಬರ್ 9 ರಂದು ಮೊದಲೇ ಘೋಷಿಸಿದಂತೆ ಪಾದಯಾತ್ರೆಗೆ ಕರ್ನಾಟಕದ ವಿವಿಧ ಭಾಗಗಳಿಂದ ತುಮಕೂರಿಗೆ ಸಾವಿರಾರು ಅಂಗನವಾಡಿ ನೌಕರರು ಆಗಮಿಸಲಾರಂಭಿಸಿದ್ದರು. ಆ ವರೆಗೆ ನಿಷ್ಕ್ರಿಯವಾಗಿದ್ದ ಸರಕಾರಿ ಯಂತ್ರ ಒಮ್ಮೆಗೆ ಕಾರ್ಯಪ್ರವೃತ್ತವಾಯಿತು. ಸಮಸ್ಯೆಯನ್ನು ಬಗೆಹರಿಸುವುದಕ್ಕಲ್ಲ, ಅಂಗನವಾಡಿ ನೌಕರರು ತುಮಕೂರಿಗೆ ಬರುವುದನ್ನು ಮತ್ತು ಪಾದಯಾತ್ರೆಯನ್ನು ತಡೆಯಲು.

ಈ ಪಾದಯಾತ್ರೆಯಲ್ಲಿ ಭಾಗವಹಿಸಲು ಕೋಲಾರದಿಂದ ಹೊರಟಿದ್ದ ಅಂಗನವಾಡಿ ಕಾರ್ಯಕರ್ತರನ್ನು ಬಸ್ ಹತ್ತದಂತೆ ಪೊಲೀಸರು ತಡೆದರು. ಅನುಮತಿ ಪಡೆದಿದ್ದ ಬಸ್ ಗಳನ್ನು ರದ್ದು ಪಡಿಸಿದರು. ಅಷ್ಟೇ ಅಲ್ಲದ ಅಂಗನವಾಡಿ ನೌಕರರ ಸಂಘಟನೆಯ ರಾಜ್ಯ ಕಾರ್ಯದರ್ಶಿಯಾಗಿರುವ ನಾಗರತ್ನಮ್ಮ ಮತ್ತಿತರ ನಾಯಕರನ್ನು ಕೋಲಾರದಲ್ಲಿ ಪೊಲೀಸರು ಗೃಹಬಂಧನಕ್ಕೊಳಪಡಿಸಿದರು. ಇದೇ ರೀತಿ ಹಲವು ಜಿಲ್ಲೆಗಳಲ್ಲಿ ತುಮಕೂರಿಗೆ ಬರುತ್ತಿದ್ದ ಬಸ್ ಗಳನ್ನು ತಡೆಯುವುದು, ಬುಕ್ ಮಾಡಲಾಗಿದ್ದ ಬಸ್ಸುಗಳನ್ನು ರದ್ದು ಪಡಿಸುವುದು, ಡ್ರೈವರ್ ಬರದಂತೆ ತಡೆಯುವುದು, ಕಾರ್ಯಕರ್ತರನ್ನು ಪ್ರಯಾಣಿಸದಂತೆ ತಡೆಯುವುದು, ಅಪಪ್ರಚಾರ ಮಾಡುವುದು – ಮುಂತಾದ ಅ–ಪ್ರಜಾಸತ್ತಾತ್ಮಕ ಕ್ರಮಗಳನ್ನು ಆಡಳಿತ ಮತ್ತು ಪೋಲಿಸ್ ಕೈಗೊಂಡಿತು. ಡಿಸೆಂಬರ್ 10ರಂದು ತುಮಕೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ ಸೆಕ್ಶನ್ 144 ಜಾರಿಗೊಳಿಸಲಾಯಿತು. ಅಂಗನವಾಡಿ ನೌಕರರ ಸಂಘದ ಅಧ್ಯಕ್ಷ ಎಸ್.ವರಲಕ್ಷ್ಮಿ ಸೇರಿದಂತೆ ಹಲವು ನಾಯಕರು ಹಿಂದೆ ಪಾದಯಾತ್ರೆ ಪ್ರತಿಭಟನಾ ಸಭೆಗಳಲ್ಲಿ ಕಾನೂನು ಉಲ್ಲಘಿಸಿದ್ದು ಅವರ ಮೇಲೆ ಕೇಸುಗಳು ದಾಖಲಾಗಿರುವುದರಿಂದ ಬೆಂಗಳೂರಿಗೆ ಪಾದಯಾತ್ರೆಯನ್ನು ನಿರಾಕರಿಸಲಾಯಿತು, ಎಂದು ತಿಳಿಸಲಾಯಿತು. ನೂರಾರು ಪೋಲೀಸರು ಅಂಗನವಾಡಿ ನೌಕರರು ಸೇರಿದ್ದ ಗಾಜಿನ ಮನೆ ಮತ್ತು ಇತರ ಮೈದಾನಗಳನ್ನು ಸುತ್ತುವರೆದಿದ್ದರು. ನೌಕರರನ್ನು ಅದರ ಒಳಗಿನಿಂದ ಹೊರಗೆ ಹೋಗದಂತೆ ತಡೆಯಲು ಸಂಚು ಹೂಡಿದ್ದರು.

ಈ ನಡುವೆ, ಡಿಸೆಂಬರ್ 10ರ ಬೆಳಿಗ್ಗೆ ಸಾವಿರಾರು ಅಂಗನವಾಡಿ ನೌಕರರು ಬೃಹತ್ ಮೆರವಣಿಗೆ ನಡೆಸಿದರು. ಸಾರ್ವಜನಿಕ ಸಭೆಯನ್ನು ನಡೆಸಲಾಯಿತು. ಸಭೆಯನ್ನುದ್ದೇಶಿಸಿ, ಅಂಗನವಾಡಿ ನಾಯಕರುಗಳಾದ ಎ.ಆರ್, ಸಿಂಧು, ಎಸ್.ವರಲಕ್ಷ್ಮಿ, ಸುನಂದ, ಹಾಗೂ ಸಿಐಟಿಯು ನಾಯಕರುಗಳಾದ ಮೀನಾಕ್ಷಿಸುಂದರಂ, ಕೆ.ಎನ್.ಉಮೇಶ್, ಮಾತನಾಡಿದರು. ಗ್ರಾಮ ಸೇವಾ ಸಂಘದ ನಾಯಕರಾದ ಮತ್ತು ಪ್ರಸಿದ್ಧ ರಂಗಕರ್ಮಿ ಪ್ರಸನ್ನ ಅವರು ಸಹ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಸಭೆಯ ನಂತರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅಂಗನವಾಡಿ ಮತ್ತು ಸಿ ಐಟಿಯು ನಾಯಕರು ಮಾತನಾಡಿದರು. ಹಿಂದೆನೇ ಅನುಮತಿ ಕೋರಿದ್ದ ಪಾದಯಾತ್ರೆಯನ್ನು ತಡೆಯಲು ಪೊಲೀಸರು ಹಾಗೂ ರಾಜ್ಯ ಸರಕಾರದ ಕೈಗೊಂಡ ಕ್ರಮಗಳನ್ನು ವಿವರಿಸಿ ಈ ನಡೆ ಅಮಾನುಷವಾದದ್ದು. ಇದು ಹೋರಾಟವನ್ನು, ಹಾಗೂ ಪ್ರಜಾಸತ್ತಾತ್ಮಕ ಹಕ್ಕುಗಳ ದಮನದ ಕೆಲಸವಾಗಿದೆ ಎಂದು ಕರ್ನಾಟಕ ಅಂಗನವಾಡಿ ನೌಕರರ ಸಂಘದ ರಾಜ್ಯಾಧ್ಯಕ್ಷೆ ಎಸ್. ವರಲಕ್ಷ್ಮಿ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು. ಹೋರಾಟ ಮುಂದುವರೆಯುತ್ತದೆ. ಯಾವುದೇ ಒತ್ತಡಕ್ಕೂ ಮಣಿಯುವುದಿಲ್ಲ. ಸರಕಾರ ವ್ಯರ್ಥ ಪ್ರಯತ್ನ ಮಾಡುವ ಬದಲು ಬೇಡಿಕೆ ಈಡೇರಿಸಲು ಮುಂದಾಗಲಿ ಎಂದು ಆಗ್ರಹಿಸಿದರು. ಪತ್ರಿಕಾಗೋಷ್ಠಿಯಲ್ಲಿ ಅಂಗನವಾಡಿ ನಾಯಕರುಗಳಾದ ಎ.ಆರ್, ಸಿಂಧು, ರಾಜ್ಯ ಕಾರ್ಯದರ್ಶಿ ಸುನಂದ, ಖಜಾಂಚಿ ಕಮಲಾ ಹಾಗೂ ಸಿಐಟಿಯು ರಾಜ್ಯ ಮುಖಂಡ ಸಯ್ಯದ್ ಮುಜೀಬ್ ಇದ್ದರು.

ಪತ್ರಿಕಾಗೋಷ್ಟಿಯ ನಂತರ ಜಿಲ್ಲಾಡಳಿತ ಮತ್ತು ಪೋಲಿಸ್ ಪಾದಯಾತ್ರೆಗೆ ಯಾವುದೇ ಸಂದರ್ಭದಲ್ಲಿ ಅನುಮತಿ ಕೊಡುವುದಿಲ್ಲ ಎಂದು ನಾಯಕರಿಗೆ ತಿಳಿಸಿದರು. ಅಷ್ಟು ಹೊತ್ತಿಗೆ ತುಮಕೂರಿಗೆ ಸುಮಾರು 30 ಸಾವಿರ ಅಂಗನವಾಡಿ ನೌಕರರು ಬಂದು ಸೇರಿದ್ದರು. ಇನ್ನೂ ಸಾವಿರಾರು ನೌಕರರು ಬಂದು ಸೇರಿಕೊಳ್ಳುತ್ತಿದ್ದರು. ಪಾದಯಾತ್ರೆಗೆ ಅನುಮತಿ ನೀಡದೆ ಅದನ್ನು ತಡೆದರೆ ಅಲ್ಲೇ ಧರಣಿ ಹೂಡುವುದಾಗಿ ನಾಯಕರು ಮತ್ತು ನೌಕರರು ದೃಢವಾಗಿ ತಿಳಿಸಿದರು. ಪರಿಸ್ಥಿತಿಯ ಗಂಭಿರತೆಯನ್ನರಿತ ಹಿರಿಯ ಜಿಲ್ಲಾಡಳಿತದ ಮತ್ತು ಪೋಲಿಸ್ ಅಧಿಕಾರಿಗಳು, ಅಂಗನವಾಡಿಯ ನಾಯಕರ ತಂಡವೊಂದನ್ನು ಮುಖ್ಯಮಂತ್ರಿಯವರ ಭೇಟಿಗೆ ಒಯ್ಯುವುದಾಗಿ

ಪುಟ 15 ಕ್ಕೆ









ಕೃಷಿ ಕೂಲಿಕಾರರ ಪ್ರಮುಖ ಹೋರಾಟಗಳು.......

ಪುಟ 8 ರಿಂದ

ಕಾರ್ಯಾಲಯದ ಎದುರು ಹಲವು ಬಾರಿ ದಿನಗಟ್ಟಲೆ ಸಾಮೂಹಿಕ ಧರಣಿ ನಡೆಸಲಾಗಿದೆ. ಪಂಚಾಯತ್ ಆಫೀಸುಗಳ ಎದುರು ಸಹ ಅನೇಕ ಬಾರಿ ಹೋರಾಟಗಳನ್ನು ಮಾಡಲಾಗಿದೆ. ಎರಡೂ ವಿಧಾನ ಸಭಾ ಕ್ಷೇತ್ರಗಳ ಶಸಕರುಗಳ ಮನೆಗಳ ಎದುರು ಸಹ ಅರ್ಜಿದಾರ ಮಹಿಳೆಯರು ನಡೆಸಿದ ಹೋರಾಟ ಸಾರ್ವಜನಿಕರ ಗಮನ ಸೆಳೆದಿದೆ. ಇವೆಲ್ಲದರ ಪರಿಣಾಮವಾಗಿ ಈ ತಾಲೂಕುಗಳ ಗ್ರಾಮ ಪಂಚಾಯತಿಯಲ್ಲಿ ಮನೆ/ನಿವೇಶನ ಇಲ್ಲದವರ ಹೆಸರುಗಳು ದಾಖಲಾಗಿವೆ. ಕೆಲವು ಗ್ರಾಮಗಳಲ್ಲಿ ಲಭ್ಯ ಇರುವ ಕಂದಾಯ ಭೂಮಿಯನ್ನು ಗುರುತಿಸಿ ಕಾಯ್ದಿಡಲಾಗಿದೆ. ಇನ್ನು ಉಳಿದವರಿಗಾಗಿ ಖಾಸಗಿ ಜಮೀನನ್ನು ಖರೀದಿ ಮಾಡುವ ಪ್ರಸ್ತಾವವನ್ನು ಜಿಲ್ಲಾಡಳಿತ ಸರ್ಕಾರಕ್ಕೆ ಕಳುಹಿಸಿದೆ. ಇತ್ತೀಚೆಗೆ, ನವೆಂಬರ್ 18-20 ವರೆಗೆ 3 ದಿನಗಳ ಕಾಲ ಉಡುಪಿ ಜಿಲ್ಲಾಧಿಕಾರಿಗಳ ಕಛೇರಿ ಎದುರು ಸುಮಾರು 1000 ಅರ್ಜಿದಾರರ ದಿಟ್ಟ ಹೋರಾಟ ಜಿಲ್ಲಾಡಳಿತದ ಮೇಲೆ ಬಾರೀ ಪರಿಣಾಮ ಬೀರಿದೆ. ಈ ಹೋರಾಟದಲ್ಲಿ ಸಂಘದ ಅಖಿಲ ಭಾರತ ಅಧ್ಯಕ್ಷರು ಭಾಗವಹಿಸಿ ಮಾರ್ಗದರ್ಶನ ನೀಡಿದ್ದಾರೆ.

ನಮ್ಮ ಕಲಬುರಗಿ ಜಿಲ್ಲಾ ಸಮಿತಿಯು ಜಿಲ್ಲೆಯಲ್ಲಿ ವ್ಯಾಪಕ ಪ್ರಚಾರ ನಡೆಸಿ ಸ್ವಂತ ಮನೆ ಇಲ್ಲದ ಬಡವರ ಗಮನ ಸೆಳೆದು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲು ಕಾರ್ಯಕ್ರಮ ರೂಪಿಸಿದಾಗ ಸುಮಾರು 5000 ಮನೆ ನಿವೇಶನ ರಹಿತರು ಜಿಲ್ಲಾಡಳಿತಕ್ಕೆ ವ್ಯಕ್ತಿಗತವಾದ ಮನವಿಗಳನ್ನು ಸಲ್ಲಿಸಿದ್ದಾರೆ. ನಂತರ ಇನ್ನೊಂದು ಸುತ್ತಿನ ಹೋರಾಟವನ್ನು ತಾಲೂಕು ಮಟ್ಟದಲ್ಲಿ ನಡೆಸಲಾಗಿದೆ. ಈ ಚಳುವಳಿಯನ್ನು ವ್ಯವಸ್ಥಿತವಾಗಿ ಮುಂದುವರೆಸಬೇಕಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ಪಟ್ಟಣದಲ್ಲಿ ಸಂಘಟಿತರಾಗಿರುವ ವಸತಿ ರಹಿತ ಕೂಲಿಕಾರರು ನಡೆಸುತ್ತಾ ಬಂದಿರುವ ಹೋರಾಟದ ಪರಿಣಾಮವಾಗಿ ಪಟ್ಟಣದ ಹೊರವಲಯದಲ್ಲಿ 15 ಎಕರೆ ಸರ್ಕಾರಿ ಭೂಮಿಯನ್ನು ಗುರುತಿಸಿಕೊಳ್ಳಲು ಸಾಧ್ಯವಾಗಿದೆ. ಅಲ್ಲೊಂದು ಬಹುಮಹಡಿ ಕಟ್ಟಡವನ್ನು ನಿರ್ಮಾಣ ಮಾಡಿ ಬಡವರಿಗೆ ನೀಡುವ ಪ್ರಸ್ತಾವವನ್ನು ಸರ್ಕಾರಕ್ಕೆ ಕಳುಹಿಸಲಾಗಿದ್ದು ಹೋರಾಟವನ್ನು ಮುಂದುವರೆಸಬೇಕಾಗಿದೆ.

ಮಂಡ್ಯ ಜಿಲ್ಲೆಯ ಬಹುತೇಕ ತಾಲೂಕುಗಳಲ್ಲಿ ನಿವೇಶನ ರಹಿತರ ಪ್ರಶ್ನೆಯನ್ನು ಎತ್ತಿಕೊಂಡು ಅನೇಕ ಹೋರಾಟಗಳು ನಡೆದಿವೆ. ಇತ್ತೀಚೆಗೆ ಮದ್ದೂರು ತಾಲ್ಲೂಕ್ ಕರಡಕೆರೆ ಗ್ರಾಮದಲ್ಲಿ ಅನೇಕ ವರ್ಷಗಳಿಂದ ಮನೆಗಳನ್ನು ನಿರ್ಮಾಣ ಮಾಡಿ ವಾಸವಿದ್ದ ಬಡ ಕೂಲಿಕಾರ ಕುಟುಂಬಗಳನ್ನು ಆ ಮನೆಗಳಿಂದ ತೆರವುಗೊಳಿಸಿದಾಗ ನಮ್ಮ ಸಂಘ ಮಧ್ಯಪ್ರವೇಶ ಮಾಡಿ, ಅವರಿಗೆ ತಾತ್ಕಾಲಿಕ ವಸತಿ ಕಲ್ಪಿಸುವುದರಲ್ಲಿ ಯಶಸ್ವಿಯಾಯಿತಲ್ಲದೆ ಪರ್ಯಾಯ ನಿವೇಶನಗಳನ್ನು ಗುರುತಿಸಿ ಒದಗಿಸಲು ಸಾಧ್ಯವಾಯಿತು.

5. ಬಗರ್ ಹುಕ್ಕುಂ ಸಾಗುವಳಿ ಸಕ್ರಮಕ್ಕಾಗಿ :

ಪ್ರಾಂತ ಕೃಷಿ ಕೂಲಿಕಾರರ ಸಂಘವು ಮೊದಲಿಂದಲೂ ಸರ್ಕಾರಿ ಭೂಮಿ ಸಾಗುವಳಿದಾರರ ಪ್ರಶ್ನೆಯನ್ನು ಎತ್ತಿಕೊಂಡು ಹೋರಾಟ ಮಾಡುತ್ತಾ ಬಂದಿದೆ. ಅವರು ಅನೇಕ ವರ್ಷಗಳಿಂದ ಸಾಗುವಳಿ ಮಾಡುತ್ತಾ ಬಂದಿರುವ ಭೂಮಿಯಿಂದ ಅವರನ್ನು ಒಕ್ಕಲೆಬ್ಬಿಸುವ ಪ್ರಯತ್ನವನ್ನು ಸಂಘ ತಡೆಯುತ್ತಾ ಬಂದಿದೆ. ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಗದಗ, ಉತ್ತರ ಕನ್ನಡ, ಚಿಕ್ಕಬಳ್ಳಾಪುರ, ಮಂಡ್ಯ ಮೊದಲಾದ ಜಿಲ್ಲೆಗಳಲ್ಲಿ ಭೂಮಿಯ ಪ್ರಶ್ನೆಯಲ್ಲಿ ಸಂಘದ ಮಧ್ಯಪ್ರವೇಶ ಚಾಲ್ತಿಯಲ್ಲಿದೆ. ಅದನ್ನು ಇನ್ನಷ್ಟು ಪರಿಣಾಮಕಾರಿಯಾಗಿಸಬೇಕಾಗಿದೆ.

ಇತ್ತೀಚೆಗೆ, ಕೊಪ್ಪಳ ಜಿಲ್ಲೆ, ಗಂಗಾವತಿ ತಾಲೂಕಿನ ಸಿಂಗನಾಳ ಗ್ರಾಮದ 8 ಮಂದಿ ದೇವದಾಸಿಯರು ಮತ್ತು 30 ಮಂದಿ ದಲಿತ, ಹಿಂದುಳಿದ ಸಮುದಾಯಗಳಿಗೆ ಸೇರಿದ ಕುಟುಂಬಗಳು ಸಾಗುವಳಿ ಮಾಡುತ್ತಾ ಬಂದಿದ್ದ ನೀರಾವರಿ ಭೂಮಿಯ ಭೂ ನ್ಯಾಯ ಮಂಡಳಿ ತಿರಸ್ಕರಿಸಿದ ಪ್ರಕರಣವನ್ನು ಎತ್ತಿಕೊಂಡು ಸಂಘವು ನಡೆಸಿದ 45 ದಿನಗಳ ಅಹೋರಾತ್ರಿ ಧರಣಿ ಒಂದು ಹಂತದ ಯಶಸ್ಸನ್ನು ಪಡೆದಿದೆ. ಈ ಬಡ ಕುಟುಂಬಗಳಿಗೆ ಅನ್ಯಾಯವಾಗಿದೆ ಎಂಬುದನ್ನು ಮನವರಿಕೆ ಮಾಡಿಕೊಂಡ ಜಿಲ್ಲಾಡಳಿತವು 8 ಮಂದಿ ದೇವದಾಸಿಯರ ಭೂಮಿಯನ್ನು ಅಳತೆಮಾಡಿ, ಇಟ್ಟಿದೆ. ಹಾಗೆಯೇ ಎಲ್ಲಾ ಫಲಾನುಭವಿಗಳಿಗೆ ಮರಳಿ ಫಾರ್ಮ್ ನಂ. 57 ರಲ್ಲಿ ಅರ್ಜಿಸಲ್ಲಿಸಲು ಅವಕಾಶ ಮಾಡಿಕೊಟ್ಟಿದೆ. ಹೋರಾಟವನ್ನು ಮುಂದುವರೆಸಿ ಯಶಸ್ವಿಗೊಳಿಸುವುದು ಆಗಬೇಕಾಗಿದೆ.



6. ದಲಿತರ ಹಕ್ಕುಗಳಿಗಾಗಿ

ನಮ್ಮ ಸಂಘದ ಬಹುಸಂಖ್ಯಾತ ಸದಸ್ಯರು ದಲಿತ ಸಮುದಾಯಗಳಿಗೆ ಸೇರಿದವರಾಗಿದ್ದಾರೆ. ಅವರ ಆರ್ಥಿಕ ಶೋಷಣೆ ಹಾಗೂ ಸಾಮಾಜಿಕ ಅವಮಾನದ ವಿರುದ್ಧ ಹೋರಾಟ ಮಾಡುವುದು ನಮ್ಮ ಸಂಘದ ಆದ್ಯತೆಯಾಗಿದೆ. ಅನಿಷ್ಠ ಜಾತಿ ಪದ್ಧತಿಯನ್ನು ನಾಶಮಾಡುವುದು ನಮ್ಮ ಗುರಿಯಾಗಬೇಕು. ಅವರಿಗೆ ಸವರ್ಣೀಯರಿಂದ ಅನ್ಯಾಯವಾದಾಗ ಸಂಘವು ಅವರಿಗೆ ಅಲ್ಲ ರೀತಿಯ ಬೆಂಬಲ ನೀಡಬೇಕು. ಗಂಗಾವತಿ ತಾಲೂಕಿನ ಮರಕುಂಬಿ ಗ್ರಾಮದ ದಲಿತರಿಗೆ ಪೂರ್ಣ ಪ್ರಮಾಣದ ನ್ಯಾಯ ಇನ್ನೂ ದೊರಕಿಲ್ಲ. ಜಾತಿ ತಾರತಮ್ಯದ ಪರಿಸ್ಥಿತಿ ಬದಲಾಗಿಲ್ಲ. ಸ್ವಂತ ನಿವೇಶನ ಇಲ್ಲದ ಮರಕುಂಬಿ ದಲಿತ ಕುಟುಂಬಗಳಿಗೆ ನಿವೇಶನಗಳನ್ನು ಒದಗಿಸುವ ಪ್ರಶ್ನೆ ಬಾಕಿ ಉಳಿದಿದೆ. ಸಂಘವು ಈ ಹೋರಾಟವನ್ನು ಮುಂದುವರೆಸಿ ಅವರಿಗೆ ನಿವೇಶನಗಳನ್ನು ಒದಗಿಸುವಲ್ಲಿ ಯಶಸ್ವಿಯಾಗಬೇಕು.

ಸಂಘದ ಅಖಿಲ ಭಾರತ ಕರೆಯ ಮೇರೆಗೆ 17-01-2017 ರಂದು 'ದಲಿತರ ಹಕ್ಕುಗಳ ದಿನ' ವನ್ನು ಆಚರಿಸಲಾಗಿದೆ. ಒಂದು ವರ್ಷದ ಹಿಂದೆ, ಆ ದಿನದಂದು ಹೈದ್ರಾಬಾದ್ ವಿಶ್ವವಿದ್ಯಾಲಯದ ದಲಿತ ಪ್ರತಿಭಾನ್ವಿತ ವಿದ್ಯಾರ್ಥಿ ರೋಹಿತ್ ವೇಮುಲ ಜಾತಿ ದೌರ್ಜನ್ಯಕ್ಕೆ ಒಳಗಾಗಿ, ತೀವ್ರವಾಗಿ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಅಂದು ನಮ್ಮ ಸಂಘದ ಘಟಕಗಳಿಗೆ ಮಾದರಿ ಮನವಿ ಪತ್ರವನ್ನು ಒದಗಿಸಲಾಗಿತ್ತು. ಮಂಡ್ಯ ಜಿಲ್ಲಾ ಸಮಿತಿ ಪ್ರತ್ಯೇಕ ಕರಪತ್ರಗಳನ್ನು ಮುದ್ರಿಸಿ ವಿತರಣೆ ಮಾಡಿತ್ತು. ಅಂದು ಮಳವಳ್ಳಿಯಲ್ಲಿ 300 ಮಂದಿ, ಮದ್ದೂರ್‌ನಲ್ಲಿ 150, ಮಂಡ್ಯದಲ್ಲಿ 35, ಗಂಗಾವತಿಯಲ್ಲಿ 50, ಲಿಂಗಸುಗೂರು 25, ಹುಮ್ನಾಬಾದ್ 50, ರೋಣ್ 60, ಪಾವಗಡ 35 ಮಂದಿ ಕೂಲಿಕಾರರು ಪಾಲ್ಗೊಂಡಿದ್ದರು. ರಾಯಚೂರು, ಕೊಪ್ಪಳ, ಮುಂಡಗೋಡ, ಸವದತ್ತಿ ಮತ್ತು ಸಿರುಗುಪ್ಪದಲ್ಲಿ ನಿಯೋಗಗಳು ಮನವಿಯನ್ನು ಸಲ್ಲಿಸಿದ್ದಾರೆ.

7. ಮಹಿಳಾ ಕೃಷಿ ಕೂಲಿಕಾರರ ಉಪಸಮಿತಿ :

2011 ರಲ್ಲೇ ನಾವು ಕರ್ನಾಟಕದಲ್ಲಿ ಮಹಿಳಾ ಕೃಷಿ ಕೂಲಿಕಾರರ ಉಪಸಮಿತಿಯನ್ನು ರಚನೆ ಮಾಡಿದ್ದೇವೆ. ಹಿಂದಿನ ರಾಜ್ಯ ಸಮ್ಮೇಳನದ ನಂತರದ ಅವಧಿಯಲ್ಲಿ 2017 ರಲ್ಲಿ ನಾವು 3ನೇ ಕೃಷಿ ಕೂಲಿಕಾರ ಮಹಿಳೆಯರ ಸಮಾವೇಶವನ್ನು ಮಂಡ್ಯದಲ್ಲಿ ನಡೆಸಿದ್ದೇವೆ. ಸಮಾವೇಶವು ಒಂದು ಬೃಹತ್ ರ್‍ಯಾಲಿಯೊಂದಿಗೆ ಆರಂಭವಾಯಿತು. 3000 ಕ್ಕೂ ಹೆಚ್ಚು ಕೂಲಿಕಾರರು ಭಾಗವಹಿಸಿದ್ದರು. 10 ಜಿಲ್ಲೆಗಳಿಂದ 150 ಮಹಿಳಾ ಪ್ರತಿನಿಧಿಗಳು ಆಗಮಿಸಿ ಪ್ರತಿನಿಧಿಗಳ ಅಧಿವೇಶನದಲ್ಲಿ ಭಾಗವಹಿಸಿದ್ದರು. ಒಂದು ಕೆಲಸದ ವರದಿಯನ್ನು ಮುಂದಿಟ್ಟು ಚರ್ಚಿಸಲಾಯಿತು. ಬೇಡಿಕೆ ಪಟ್ಟಿಯನ್ನು ಪರಿಷ್ಕರಿಸಿ ಅಂಗೀಕರಿಸಲಾಯಿತು. ಮಾರ್ಚ್ 31 ಕೃಷಿ ಕೂಲಿಕಾರ ಮಹಿಳೆಯರ ಬೇಡಿಕೆಗಳ ದಿನವನ್ನಾಗಿ ಆಚರಿಸಲು ಕರೆನೀಡಲಾಯಿತು. ಮಹಿಳಾ ಉಪಸಮಿತಿಯನ್ನು ಪುನರ್ ರಚಿಸಲಾಯಿತು. ಸಮಾವೇಶದ ಕರೆ 11 ಕೇಂದ್ರಗಳಲ್ಲಿ ಜಾರಿಯಾಯಿತು. ಸುಮಾರು 3000 ಮಹಿಳಾ ಕೃಷಿ ಕೂಲಿಕಾರರು ಭಾಗವಹಿಸಿದ್ದರು.

ಪ್ರತಿ ವರ್ಷ ಮಾರ್ಚ್ 8 ರಂದು ಮಹಿಳಾ ಕೃಷಿ ಕೂಲಿಕಾರರು ಅಂತರಾಷ್ಟ್ರೀಯ ಮಹಿಳಾ ದಿನವನ್ನು ಜಂಟಿಯಾಗಿ ಅಥವ ಸ್ವತಂತ್ರವಾಗಿ ಆಚರಿಸಲಾಗುತ್ತದೆ. ಉಪಸಮಿತಿ ಸ್ವತಂತ್ರವಾಗಿ ಅಥವ ಜಂಟಿಯಾಗಿ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಾಗಿದೆ. ಮಹಿಳೆಯರ ಮೇಲೆ ಇಂದು ಹೆಚ್ಚುತ್ತಿರುವ ಅತ್ಯಾಚಾರಗಳ ಹಿನ್ನೆಲೆಯಲ್ಲಿ ನಮ್ಮ ಸಮಿತಿ ಅಂತಹ ಪ್ರಕರಣಗಳಲ್ಲಿ ಮಧ್ಯಪ್ರವೇಶ ಮಾಡಬೇಕಾಗಿದೆ.

8. ಹೊರಗುತ್ತಿಗೆ ನೌಕರರ ಸಂಘಟನೆ :

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳು ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿದುಡಿಯುತ್ತಿರುವ 'ಡಿ' ವರ್ಗದ ಹೊರಗುತ್ತಿಗೆ ನೌಕರರನ್ನು ನಮ್ಮ ಕೃಷಿ ಕೂಲಿಕಾರರ ಸಂಘದ ಅಡಿಯಲ್ಲಿ ಸಂಘಟಿಸಿ ಅವರ ಕಾನೂನುಬದ್ಧ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಾ ಬರಲಾಗಿತ್ತು. ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಿರುವ ಅವರನ್ನು ಸರ್ಕಾರ ಕಾಯಂ ಗೊಳಿಸುವುದನ್ನು ಬಿಟ್ಟು ನೇರ ನೇಮಕಾತಿ ಮೂಲಕ ಹೊಸದಾಗಿ 10ನೇ ತರಗತಿ ಪಾಸ್ ಆದವರ ಅರ್ಜಿಕರೆದು, ಸಂದರ್ಶನಕ್ಕೆ ಒಳಪಡಿಸಿ ಸುಮಾರು 5000 ನೌಕರರನ್ನು ನೇರವಾಗಿ ನೇಮಕ ಮಾಡಿತು. ಇದರಿಂದ ಸರಿ ಸುಮಾರು ಅಷ್ಟೇ ಸಂಖ್ಯೆಯ ಹೊರಗುತ್ತಿಗೆ ನೌಕರರು ಕೆಲಸ ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಯಿತು. ನಮ್ಮ ಹೋರಾಟದ ಪರಿಣಾಮವಾಗಿ ಸಮಾಜ ಕಲ್ಯಾಣ ಇಲಾಖೆಯವರು ಯಾರನ್ನೂ ಕೆಲಸದಿಂದ ತೆಗೆದು ಹಾಕದೆ ಇಲಾಖೆಯಲ್ಲಿ ಉಳಿಸಿಕೊಂಡಿತು. ಆದರೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯವರು ಸುಮಾರು 3000 ಹೊರಗುತ್ತಿಗೆ ನೌಕರರನ್ನು ಕೆಲಸದಿಂದ ಬಿಡುಗಡೆ ಗೊಳಿಸಿದರು. ನೌಕರರನ್ನು ಅನಿರ್ದಿಷ್ಟ ಹೋರಾಟಗಳಿಗೆ ಒಳಪಡಿಸಲಾಯಿತು. ಕುಮಾರಸ್ವಾಮಿ ನೇತೃತ್ವದ ಮೈತ್ರಿ ಸರ್ಕಾರ ಬಿಸಿಎಂ ಇಲಾಖೆಯ ನೌಕರರನ್ನು 6 ತಿಂಗಳಂತೆ ಎರಡು ಬಾರಿ ಕೆಲಸದಲ್ಲಿ ಮುಂದುವರೆಸಿತು. ಆದರೆ ಅವರಿಗೆ ವೇತನ ನೀಡಿರಲಿಲ್ಲ. ಈಗ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರ ನೌಕರರ ಬಾಕಿ ವೇತನ ಸಂದಾಯ ಮಾಡಲು ಒಪ್ಪಿಗೆ ನೀಡಿದೆ. ಆದರೆ ನಿವೃತ್ತಿವರೆಗೆ ಕೆಲಸದಲ್ಲಿ ಮುಂದುವರೆಸಬೇಕೆಂಬ ನೌಕರರ ಬೇಡಿಕೆಯನ್ನು ಮಾನ್ಯ ಮಾಡಲು ಸರ್ಕಾರ ಮುಂದಾಗುತ್ತಿಲ್ಲ. ಈಗ ಕೆಲಸ ಕಳೆದುಕೊಳ್ಳುವ ಭೀತಿಯನ್ನು ಎದುರಿಸುತ್ತಿರುವ ನೌಕರರು ಇನ್ನೊಂದು ಸುತ್ತಿನ ಹೋರಾಟಕ್ಕೆ ಸಿದ್ಧರಾಗುತ್ತಿದ್ದಾರೆ. ಬಲಿಷ್ಠವಾದ ಸಂಘಟನೆಯ ಕೊರತೆ ಇದೆ. ಸಂಘಟನೆಯ ಪರಿಜ್ಞಾನವಿಲ್ಲ. ನಮ್ಮ ಕೂಲಿಕಾರ ಸಂಘದ ಜಿಲ್ಲಾ ಮಟ್ಟದ ನಾಯಕರು ಅವರೊಂದಿಗೆ ಸಂಪರ್ಕ ಇಟ್ಟುಕೊಂಡು ಅವರನ್ನು ಸಂಘಟಿಸಲು ಗಮನ ನೀಡಿದರೆ ಶೋಷಣೆಗೆ ಒಳಪಟ್ಟಿರುವ, ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿರುವ ನೌಕರರನ್ನು ನಿರಂತರ ಸಜ್ಜುಗೊಳಿಸಲು ಸಾಧ್ಯವಾಗಲಿದೆ. ಕಲಬುರಗಿ, ಬಳ್ಳಾರಿ, ಚಿಕ್ಕಬಳ್ಳಾಪುರ ಮೊದಲಾದ ಕೆಲವೇ ಜಿಲ್ಲೆಗಳಲ್ಲಿ ಅವರಿಗೆ ಕೃಷಿ ಕೂಲಿಕಾರರ ಸಂಘ, ಸಿಐಟಿಯು ಮೊದಲಾದ ಸಹೋದರ ಸಂಘಟನೆಗಳಿಂದ ನೆರವು, ಮಾರ್ಗದರ್ಶನ ದೊರೆಯುತ್ತಿದೆ. ಹಾವೇರಿಯಲ್ಲಿ ಎಸ್‌ಎಫ್‌ಐ ಅವರೊಂದಿಗೆ ನಿಂತಿದೆ. ●

ಶತಮಾನೋತ್ಸವ ಲೇಖನ ಮಾಲೆ-6

100

1920-2020

ದಾದಾ ಅಮೀರ್ ಹೈದರ್ ಖಾನ್ ಒಬ್ಬ ಕೆಚ್ಚೆದೆಯ ಕ್ರಾಂತಿಕಾರಿ



ಬದುಕಿಗಾಗಿ ವಿವಿಧ ಬಗೆಯ ಉದ್ಯೋಗ ಮಾಡುವಾಗ ಮತ್ತು ಜಗತ್ತಿನ ಸುತ್ತ ಪ್ರಯಾಣ ಮಾಡಬೇಕಾದಾಗ ಬದುಕು ಅವರತ್ತ ಎಸೆದ ಸವಾಲುಗಳನ್ನು ಎದುರಿಸಲು ಬಹಳ ಬೇಗ ಕಲಿತರ ಅಮೀರ್ ಹೈದರ್ ಖಾನ್ ಹಡಗಿನಲ್ಲಿ ಕೂಲಿಗಾರನಾಗಿ, ನಂತರ ಬಾಯ್ಲರ್ ಇಂಜಿನಿಯರಾಗಿ, ಏರೋಪ್ಲೇನ್ ಪೈಲಟ್ಟಾಗಿ ಮತ್ತು ಆಟೋ ಕೆಲಸಗಾರನಾಗಿ ದುಡಿಯುತ್ತಲೇ ಜಗತ್ತೆಲ್ಲಾ ಸುತ್ತಿದವರು, ಅದರಿಂದಾಗಿ ಕ್ರಾಂತಿಕಾರಿಗಳ ಸಂಪರ್ಕ ಗಳಿಸಿ ರಾಜಕೀಯ ಕಾರ್ಯಕರ್ತನಾಗಿ, ಕ್ರಾಂತಿಕಾರಿಯಾಗಿ, ಭಾರತೀಯ ಉಪಖಂಡದಲ್ಲಿ ಕಮ್ಯುನಿಸ್ಟ್ ಆಂದೋಲನದ ಒಬ್ಬ ಪ್ರವರ್ತಕರಾಗಿ ಹೊರಹೊಮ್ಮಿದರು. ಉತ್ತಮ ನಾಳೆಗಾಗಿ ಜಗತ್ತು ಬದಲಾಗಲೇ ಬೇಕು ಎಂಬ ಮಾರ್ಕ್ಸಿಸ್ಟ್ ಸೂಕ್ತಿಗೆ ತಕ್ಕಂತೆ ಅವರ ಬದುಕು ಅರ್ಥವತ್ತಾಗಿತ್ತು, ಸ್ಫೂರ್ತಿದಾಯಕವಾಗಿತ್ತು.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

ಭಾರತ ಉಪಖಂಡದ ಸರ್ವಸಾಮರ್ಥ್ಯವುಳ್ಳ, ದಂತಕತೆಯಾದ ಕಾರ್ಮಿಕ ಕ್ರಾಂತಿಕಾರಿಗಳಲ್ಲಿ ದಾದಾ ಅಮೀರ್ ಹೈದರ್ ಖಾನ್ ಅವರು ಒಬ್ಬರಾಗಿದ್ದರು. ನಮ್ಮ ದೇಶವನ್ನು ವಿದೇಶಿ ಪ್ರಾಬಲ್ಯದಿಂದ ವಿಮೋಚನೆಗೊಳಿಸಲು ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ಅವರು ಸೆಣಸಿದ್ದರು. ಅವರು ಕಾರ್ಮಿಕರು ಮತ್ತು ರೈತರನ್ನು ಅವರ ಹಕ್ಕುಗಳಿಗಾಗಿ ಮತ್ತು ವರ್ಗರಹಿತ ಸಮಾಜವೊಂದನ್ನು ಕಟ್ಟುವ ಸಲುವಾಗಿ ಅಣಿನೆರಸಿದರು ಮತ್ತು ಸಂಘಟಿಸಿದರು. ಅವರು ತಮ್ಮ ಇಡೀ ಜೀವಮಾನವನ್ನು ಕಮ್ಯುನಿಸ್ಟ್ ಚಳುವಳಿ ಕಟ್ಟಲು ಮೀಸಲಾಗಿಟ್ಟಿದ್ದರು. ಶ್ರಮಜೀವಿಗಳ ಕ್ರಾಂತಿಗಾಗಿನ ಅವರ ಬದ್ಧತೆ, 75 ವರ್ಷಗಳಿಗೂ ಹೆಚ್ಚು ಕಾಲ ಎಂತಹ ದಾಳಿ, ದಬ್ಬಾಳಿಕೆ, ಜೈಲುವಾಸ ಮತ್ತು ಹೇಳತೀರದ ಕಷ್ಟಗಳ ನಡುವೆಯೂ ಜನಗಳ ಹಿತಾಸಕ್ತಿಗಾಗಿ ದುಡಿಯುವ ಅವರ ದೃಢ ಸಂಕಲ್ಪ ಮತ್ತು ಸ್ಥೈರ್ಯಕ್ಕೆ ಸಾಟಿಯಿಲ್ಲ. ಅಂತರ್ರಾಷ್ಟ್ರೀಯ ಕ್ರಾಂತಿಕಾರಿ ಸಮಾಜವಾದೀ ಆಲೋಚನೆಗಳ ಬಗ್ಗೆ ಮತ್ತು ಚರಿತ್ರೆಯ ದಿಕ್ಕನ್ನೇ ಬದಲಿಸಲು ಹೋರಾಡುವ ಬಗ್ಗೆ ಅವರಿಗಿದ್ದ ಬದ್ಧತೆ ಆದರ್ಶಪ್ರಾಯವಾದುದು. ಅವರ ಬದುಕಿನ ಸರಳ ಕಥನವನ್ನು ಅವಲೋಕಿಸಿದರೆ ಸಾಕು ಅದು ಇಪತ್ತನೇ ಶತಮಾನದ ಮೊದಲಾರ್ಧದ ಅಂದಿನ ಜಾಗತಿಕ ಇತಿಹಾಸವನ್ನು ಓದಿದಂತಾಗುತ್ತದೆ.

ವಸಾಹತುಶಾಹಿ-ವಿರೋಧಿ ಹೋರಾಟಗಳು ಸಮಾಜದ ಎಲ್ಲಾ ವಿಭಾಗಗಳಿಂದ ಅನೇಕ ಧೀರ ಕಮ್ಯುನಿಸ್ಟ್ ಸ್ವಾತಂತ್ರ್ಯ ಚಳುವಳಿಗಾರರರನ್ನು ಹುಟ್ಟುಹಾಕಿತು. ಕಮ್ಯುನಿಸ್ಟ್ ಚಳುವಳಿಯ ಈ ಪ್ರವರ್ತಕ ಹೋರಾಟಗಾರರಲ್ಲಿ ಅನೇಕರು ಮುಸ್ಲಿಂ ಸಮುದಾಯದಿಂದ ಬಂದರು. ಅಂತಹ ಕಟ್ಟಾಳುಗಳಲ್ಲಿ ಅಮೀರ್ ಹೈದರ್ ಖಾನ್ ಒಬ್ಬರು.

ದಾದಾ ಅಮೀರ್ ಹೈದರ್ ಖಾನ್ ಅವರು 1900 ರಲ್ಲಿ ಈಗ ಪಾಕಿಸ್ತಾನದಲ್ಲಿರುವ ಉತ್ತರ ಪಂಜಾಬ್ ಪ್ರಾಂತ್ಯದ ಗುಜ್ಜರ್ ಖಾನ್ ಪ್ರದೇಶದ ಕಲಿಯಾನ್ ಸಿಯಾಲಿಯನ್ ಎಂಬ ಕುಗ್ರಾಮದ ಸಣ್ಣ ರೈತ ಕುಟುಂಬದಲ್ಲಿ ಜನಿಸಿದರು. ಪಂಜಾಬ್‌ನ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಅತ್ಯಂತ ಹಿಂದುಳಿದ ಈ ಪ್ರದೇಶವು ಆ ಅವಧಿಯಲ್ಲಿ ಒಂದು ನವ ರಾಷ್ಟ್ರೀಯ ಜಾಗೃತಿಯ ಕೇಂದ್ರವಾಗಿ ಹೊರಹೊಮ್ಮಿತು ಮತ್ತು ಅನೇಕ ದೇಶಪ್ರೇಮಿಗಳನ್ನು ಮತ್ತು ಕ್ರಾಂತಿಕಾರಿಗಳನ್ನು ಸೃಷ್ಟಿಸಿತು. ಈ ಪ್ರದೇಶದಿಂದಲೇ ದೊಡ್ಡ ಸಂಖ್ಯೆಯ ಯುವಜನರು ಆಝಾದ್ ಹಿಂದ್ ಫೌಜನ್ನು(ಐ.ಎನ್.ಎ) ಸೇರಿದ್ದರು. ಈ ಮೂಲೆಯಲ್ಲಿರುವ ಪ್ರದೇಶದಿಂದ ಬಂದಿರುವ ಅಮೀರ್ ಹೈದರ್ ಖಾನ್ ಭಾರತೀಯ ಕಮ್ಯುನಿಸ್ಟ್ ಚಳುವಳಿಯ ಪ್ರವರ್ತಕರಲ್ಲಿ ಒಬ್ಬರಾಗಿದ್ದರು ಎಂಬುದು ಅಚ್ಚರಿಯ ವಿಷಯವೇನಲ್ಲ.

ದಾದಾ ಅವರು ಬಾಲ್ಯದಿಂದಲೇ ಕಡು ಕಷ್ಟದಲ್ಲಿ ಬೆಳೆದವರು. ಅವರು ತಮ್ಮ ಐದು ಅಥವಾ ಆರನೇ ವಯಸ್ಸಿನಲ್ಲಿಯೇ ತಮ್ಮ ತಂದೆಯನ್ನು ಕಳೆದುಕೊಂಡರು. ಅವರ ಹಳ್ಳಿಯಲ್ಲಿ ಶಾಲೆ ಇಲದ ಕಾರಣ ಅವರಿಗೆ ಸರಿಯಾದ ಶಿಕ್ಷಣ ಸಿಗಲಿಲ್ಲ ಮತ್ತು ಅವರ ಮಲತಂದೆ ನೆರವು ನೀಡಲು ಇಷ್ಟಪಡಲಿಲ್ಲ. ಅವರ ಕುಟುಂಬದಲ್ಲಿದ್ದ ಅನಾದರಣೆಯ ವಾತಾವರಣದಿಂದಾಗಿ, ತಮ್ಮ ಹದಿನಾಲ್ಕನೇ ವಯಸ್ಸಿನಲ್ಲೇ ಬಹಳ ಮುಂಚೆಯೇ ಅನಿವಾರ್ಯವಾಗಿ ದೊಡ್ಡ ವಿಶಾಲ ಜಗತ್ತಿಗೆ ಅವರು ಕಾಲಿಡಬೇಕಾಯಿತು. ಬದುಕಿಗಾಗಿ ವಿವಿಧ ಬಗೆಯ ಉದ್ಯೋಗ ಮಾಡುವಾಗ ಮತ್ತು ಜಗತ್ತಿನ ಸುತ್ತ ಪ್ರಯಾಣ ಮಾಡಬೇಕಾದಾಗ ಬದುಕು ಅವರತ್ತ ಎಸೆದ ಸವಾಲುಗಳನ್ನು ಎದುರಿಸಲು ಬಹಳ ಬೇಗ ಕಲಿತರು.

1914 ರಲ್ಲಿ ಬೊಂಬಾಯಿಗೆ ಹೋದರು ಮತ್ತು ಲಂಡನ್ನಿಗೆ ಹೊರಟಿದ್ದ ಹಡಗಿನಲ್ಲಿ ಕೂಲಿಗಾರನಾಗಿ ಸೇರಿಕೊಂಡರು. ಅವರ ಬಂಡಾಯ ಪ್ರವೃತ್ತಿಯಿಂದಾಗಿ ತಮ್ಮ ಸಹ-ಕೂಲಿಕಾರರು ಮಾಲೀಕನಿಂದ ಅನುಭವಿಸುತ್ತಿದ್ದ ಅನ್ಯಾಯಗಳ ವಿರುದ್ಧ ದನಿ ಎತ್ತಿದರು ಮತ್ತು ಅವರ ಸಮಸ್ಯೆಗಳಿಗೆ ಪರಿಹಾರ ಕೊಡಿಸುವಲ್ಲಿಯೂ ಯಶಸ್ವಿಯಾದರು. 1918 ರಲ್ಲಿ ಅಮೆರಿಕಾದ ವ್ಯಾಪಾರಿ ನೌಕೆಯಲ್ಲಿ ಕೆಲಸಕ್ಕೆ ಸೇರಿಕೊಂಡರು. ಈ ಕಾರ್ಯಭಾರಗಳು ದಾದಾ ಅವರನ್ನು ಯೂರೋಪ್, ಅಮೆರಿಕಾ ಮತ್ತು ದೂರಪ್ರಾಚ್ಯ (ಮಲೇಶಿಯಾ, ಇಂಡೋನೇಶಿಯಾ, ಮುಂತಾದ) ದೇಶಗಳಿಗೆ ಕೊಂಡೊಯ್ಯಿತು ಮತ್ತು ಜಗತ್ತಿನಾದ್ಯಂತ ಪ್ರಯಾಣ ಮಾಡುವ ಅವಕಾಶ ಒದಗಿಸಿತು; ಅಂತರ್ರಾಷ್ಟ್ರೀಯ ವಿದ್ಯಮಾನಗಳನ್ನು ಕಲಿಸಿತು, ವಸಾಹತುಗಳಲ್ಲಿನ ಪರಿಸ್ಥಿತಿ ಹಾಗೂ ಕಾರ್ಮಿಕ ವರ್ಗಗಳ ದುರವಸ್ಥೆಯನ್ನು ತಿಳಿಯಲು ಸಹಾಯ ಮಾಡಿತು. ಈ ಸಮಯದಲ್ಲಿ, ಅವರನ್ನು ಐರಿಷ್ ರಾಷ್ಟ್ರವಾದಿ ಜೋಸೆಫ್ ಮುಲ್ಕಾನ್ ಭೇಟಿಯಾದರು ಮತ್ತು ಬ್ರಿಟಿಷ್ ವಿರೋಧಿ ರಾಜಕೀಯ ಚಿಂತನೆಗಳನ್ನು ಪರಿಚಯಿಸಿದರು. 1920 ರಲ್ಲಿ ಅವರು ಭಾರತೀಯ ರಾಷ್ಟ್ರೀಯವಾದಿಗಳು ಭೇಟಿಯಾದರು ಮತ್ತು ನ್ಯೂಯಾರ್ಕ್ ನಗರದಲ್ಲಿ ಗದರ್ ಪಕ್ಷದ ಸದಸ್ಯರ ಭೇಟಿಯೂ ಆಯಿತು; ನಿಷೇಧಿಸಲ್ಪಟ್ಟಿದ್ದ ಗದರ್ ಪಕ್ಷದ ಸಾಹಿತ್ಯವನ್ನು, ತನ್ನ ಜೀವವನ್ನೇ ಪಣಕ್ಕಿಟ್ಟು ಜಗತ್ತಿನೆಲ್ಲೆಡೆಯ ಭಾರತೀಯರಿಗೆ ಹಂಚಲು ಆರಂಭಿಸಿದರು.

1922 ರಲ್ಲಿ, ಯುದ್ಧಾನಂತರ ಕಾರ್ಮಿಕ ವರ್ಗದ ಹೋರಾಟಗಳು ಹೆಚ್ಚಾದ ಕಾರಣ ತಲೆದೋರಿದ ಮುಷ್ಕರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಕ್ಕಾಗಿ ನೌಕೆಯ ಕೆಲಸದಿಂದ ಅವರನ್ನು ಹೊರಹಾಕಲಾಯಿತು. ತದನಂತರ, ಬಾಯ್ಲರ್ ಇಂಜಿನಿಯರಾಗಿ, ಏರೋಪ್ಲೇನ್ ಪೈಲಟ್ಟಾಗಿ ಮತ್ತು ಆಟೋ ಕೆಲಸಗಾರನಾಗಿ ದುಡಿದರು. ಆಗ ಅಮೆರಿಕಾದ ಎಲ್ಲ ಕಡೆಗಳಲ್ಲೂ ಪ್ರಯಾಣ ಮಾಡಲು ಸಾಧ್ಯವಾಯಿತು. ಈ ಅವಧಿಯಲ್ಲಿ, ಅವರು ರಾಜಕೀಯ ಕಾರ್ಯಕರ್ತನಾಗಿ ಹೊರಹೊಮ್ಮಿದರು ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಲೀಗ್ ಮತ್ತು ಅಮೆರಿಕಾದ ಕಾರ್ಮಿಕರ ಪಕ್ಷದ ಜತೆ ಕೆಲಸ ಮಾಡಿದರು.

1926 ರಲ್ಲಿ, ಸೋವಿಯತ್ ಯೂನಿಯನ್ನಿನ 'ಪೂರ್ವದ ಶ್ರಮಿಕರ ವಿಶ್ವವಿದ್ಯಾನಿಲಯ' (ಯೂನಿವರ್ಸಿಟಿ ಆಫ್ ದಿ ಟಾಯ್ಲರ್ಸ್ ಆಫ್ ದಿ ಈಸ್ಟ್)ದಲ್ಲಿ ವಿದ್ಯಾಭ್ಯಾಸ ಮಾಡಲು ಅವರನ್ನು ಕಳಿಸಲಾಯಿತು. ಕೈಗಾರಿಕಾ ಕಾರ್ಮಿಕರನ್ನು ಹೊಂದಿದ್ದ ಎಲ್ಲಾ ವಸಾಹತು ದೇಶಗಳಿಗೂ ಸಹಾಯ ಮಾಡಲು ಮತ್ತು ಕಮ್ಯುನಿಸ್ಟ್ ಪಕ್ಷಗಳನ್ನು ಕಟ್ಟಲು ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯವು ಪ್ರಯತ್ನಿಸುತ್ತಿತ್ತು. ಈ ಉದ್ದೇಶದೊಂದಿಗೆ, ಕೆಲವು ಕ್ರಾಂತಿಕಾರಿ ಕಾರ್ಯಕರ್ತರನ್ನು ತರಬೇತಿಗೊಳಿಸಿ ತಮ್ಮ ತಮ್ಮ ದೇಶಗಳಲ್ಲಿ ಪಕ್ಷದ ಸಂಘಟಕರಾಗಿ ಮತ್ತು ರಾಜಕೀಯ ಕಾರ್ಯಕರ್ತರಾಗಲು ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯವು ಸಹಾಯ ಮಾಡುವ ಪ್ರಯತ್ನ ನಡೆಸಿತ್ತು. ಭಾರತೀಯ ಮೂಲದ ಕೆಲವು ಕಮ್ಯುನಿಸ್ಟರನ್ನು ಕಳಿಸಲು ಸಹಾಯಕ್ಕಾಗಿ ಅಮೆರಿಕನ್ ಕಮ್ಯುನಿಸ್ಟ್ ಪಕ್ಷವನ್ನು ಎಂ.ಎನ್.ರಾಯ್ ಕೇಳಿಕೊಂಡಿದ್ದರು; ಅವರು ಗದರ್ ಪಕ್ಷವನ್ನು ಸಂಪರ್ಕಿಸಿದರು; ಗದರ್ ಪಕ್ಷವು ಆಯ್ಕೆ ಮಾಡಿದ ಐವರು ವಿದ್ಯಾರ್ಥಿಗಳಲ್ಲಿ ದಾದಾ ಒಬ್ಬರಾಗಿದ್ದರು; ಸಕೊರೋವ್ ಎಂಬ ಗುಪ್ತನಾಮದಡಿಯಲ್ಲಿ ದಾದಾ ಅವರು ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದವನ್ನು ಅಭ್ಯಾಸ ಮಾಡಿದರು; ರಹಸ್ಯ ಕಾಪಾಡುವ ದೃಷ್ಟಿಯಿಂದ ವಸಾಹತು ದೇಶಗಳ ವಿದ್ಯಾರ್ಥಿಗಳಿಗೆ ಕಾಲ್ಪನಿಕ ಹೆಸರುಗಳನ್ನು ನೀಡುವುದು ಆಗ ರೂಢಿಯಲ್ಲಿತ್ತು.

1928ರಲ್ಲಿ, ಮಾಸ್ಕೋದಲ್ಲಿ ವಿಶ್ವವಿದ್ಯಾನಿಲಯದ ಪದವಿ ಪೂರ್ಣಗೊಳಿಸಿದ ಮೇಲೆ, ದಾದಾ ಭಾರತಕ್ಕೆ ಬಂದರು ಮತ್ತು ಬ್ರಿಟಿಷರ ವಿರುದ್ಧದ ಸ್ವಾತಂತ್ರ ಚಳುವಳಿಯಲ್ಲಿ ನೇರವಾಗಿ ಧುಮುಕಿದರು. ಬೊಂಬಾಯಿಯಲ್ಲಿದ್ದ ಎಸ್.ವಿ.ಘಾಟೆ, ಎಸ್.ಎ.ಡಾಂಗೆ, ಪಿ.ಸಿ.ಜೋಷಿ, ಬಿ.ಟಿ.ರಣದೀವೆ, ಬ್ರಾಡ್ಲಿ ಮತ್ತಿತರ ಹಿರಿಯ ಕಮ್ಯುನಿಸ್ಟ್ ಮುಖಂಡರ ಸಂಪರ್ಕ ಬೆಳೆಸಿದರು. ಜನರಲ್ ಮೋಟಾರ್ಸ್(ಜಿಎಮ್)ನಲ್ಲಿ ಕಾರ್ಮಿಕನಾಗಿ ಕೆಲಸಕ್ಕೆ ಸೇರಿದರು; ಬಹುಬೇಗ ಜಿಎಮ್‌ನ ಮತ್ತು ಪಕ್ಕದಲ್ಲೇ ಇದ್ದ ಜವಳಿ ಕಾರ್ಖಾನೆಯ ಕಾರ್ಮಿಕರನ್ನು ಸಂಘಟಿಸಲು ಆರಂಭಿಸಿದರು. ಬೆಳೆಯುತ್ತಿದ್ದ ಕಮ್ಯುನಿಸ್ಟ್ ಚಟುವಟಿಕೆಗಳಿಂದ ಎಚ್ಚರಗೊಂಡ ಅಧಿಕಾರಶಾಹಿಯು ಅಮೀರ್ ಹೈದರ್ ಖಾನ್ ಅವರನ್ನೂ ಒಳಗೊಂಡಂತೆ ಪ್ರಮುಖ ಕಮ್ಯುನಿಸ್ಟ್ ಮುಖಂಡರ ವಿರುದ್ಧ 1929 ರಲ್ಲಿ ಸುಳ್ಳು ಕತೆಗಳನ್ನು ಸೃಷ್ಟಿಸಿ ಮೀರಟ್ ಪಿತೂರಿ ಮೊಕದ್ದಮೆಯನ್ನು ಹೂಡಿದರು.


ಬಂಧನವನ್ನು ತಪ್ಪಿಸಿಕೊಂಡ ಅಮೀರ್ ಹೈದರ್ ಖಾನ್ ಖೋಟಾ ಪಾಸ್‌ಪೋರ್ಟ್ ಆಧಾರದಲ್ಲಿ ಸಮುದ್ರದ ಮೂಲಕ ಮಾಸ್ಕೋಗೆ ಹೋದರು; ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ(ಇಂಟರ್‌ನ್ಯಾಷನಲ್ ಟ್ರೇಡ್ ಯೂನಿಯನ್ – ಪ್ರೊಫಿಂಟರ್ನ್) ಅಧಿವೇಶನದಲ್ಲಿ ಅಧ್ಯಕ್ಷೀಯ ಮಂಡಳಿಯ ಸದಸ್ಯನಾಗಿ ಭಾಗವಹಿಸಿದರು ಮತ್ತು 1930 ರಲ್ಲಿ ಸಿ.ಪಿ.ಎಸ್.ಯು(ಕಮ್ಯುನಿಸ್ಟ್ ಪಾರ್ಟಿ ಆಫ್ ಸೋವಿಯತ್ ಯೂನಿಯನ್)ವಿನ 16 ನೇ ಮಹಾಧಿವೇಶನದಲ್ಲಿಯೂ ಭಾಗವಹಿಸಿದರು.

1931 ರಲ್ಲಿ ಬೊಂಬಾಯಿಗೆ ಹಿಂತಿರುಗಿದ ನಂತರ, ಭಾರತ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಅವರ ಬಂಧನವನ್ನು ತಪ್ಪಿಸಲು ಅವರನ್ನು ಮದ್ರಾಸಿಗೆ ಕಳಿಸಿತು; ಏಕೆಂದರೆ ಮೀರಟ್ ಪಿತೂರಿ ಮೊಕದ್ದಮೆಯಲ್ಲಿ ಪೋಲಿಸರು ಅವರನ್ನು ಇನ್ನೂ ಹುಡುಕುತ್ತಿದ್ದರು. ದಕ್ಷಿಣ ಭಾರತದ ಎಲ್ಲಾ ಕಡೆಗಳಲ್ಲಿಯೂ ಅವರು ಶಂಕರ್ ಎಂಬ ಗುಪ್ತನಾಮದಡಿ ರಾಜಕೀಯ ಕೆಲಸಗಳನ್ನು ಮುಂದುವರಿಸಿದರು. ಕಾರ್ಮಿಕರು ಮತ್ತು ರೈತರ ನಡುವೆ ತಮ್ಮ ಚಟುವಟಿಕೆಗಳನ್ನು ಆರಂಭಿಸಿದರು. ಮದ್ರಾಸಿನಲ್ಲಿ, 1932 ರಲ್ಲಿ, ಯಂಗ್ ವರ್ಕರ್ಸ್ ಲೀಗ್ ಎಂಬ ಕಾರ್ಮಿಕರ ಸಂಘವನ್ನು ಪ್ರಾರಂಭಿಸಿದರು. ತಂಜಾವೂರಿನ ಮುಖಜ ಭೂಮಿಯಲ್ಲಿ ರೈತರನ್ನು ಅಣಿನೆರಸಲು ನಿರ್ದಿಷ್ಟ ಘೋಷಣೆಯನ್ನು ರೂಪಿಸಲು ಕಿಸಾನ್ ಸಭಾಕ್ಕೆ ನೆರವು ನೀಡಿದರು. ಆ ಸಮಯದಲ್ಲಿ, ಅನೇಕ ಭರವಸೆ ಮೂಡಿಸಿದ್ದ ಯುವಜನರನ್ನು ಸಂಪರ್ಕ ಮಾಡಿದರು ಮತ್ತು ಅವರನ್ನು ಕಮ್ಯುನಿಸ್ಟ್ ಚಳುವಳಿಯತ್ತ ಆಕರ್ಷಿಸಿದರು. ಅವರಲ್ಲಿ, ಮದ್ರಾಸಿನ ಲೊಯೋಲಾ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ಓದುತ್ತಿದ್ದ ವಿದ್ಯಾರ್ಥಿ ಮಚ್ಚಲಪಳ್ಳಿ ಸಂದರಯ್ಯ ಒಬ್ಬರು. ಆದರೆ, ಸರ್ಕಾರವು ಬಹುಬೇಗ ಕಾರ್ಯಾಚರಣೆ ನಡೆಸಿ ಮೇ 1932 ರಲ್ಲಿ, ಭಗತ್ ಸಿಂಗ್ ಮತ್ತು ಅವನ ಸಹಚರರನ್ನು ಹೊಗಳಿ ಕರಪತ್ರ ಹೊರತಂದಿದ್ದಕ್ಕಾಗಿ ದಾದಾ ಅವರನ್ನು ಬಂಧಿಸಿತು.

ಅವರ ಬಿಡುಗಡೆಯಾದ ಒಂದೇ ವರ್ಷದಲ್ಲಿ 1939 ರಲ್ಲಿ ಬೊಂಬಾಯಿಯಲ್ಲಿ ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ಅಡಿಯಲ್ಲಿ ಅವರನ್ನು ಮತ್ತೆ ಬಂಧಿಸಿಲಾಯಿತು ಮತ್ತು ಎರಡು ವರ್ಷಗಳ ಶಿಕ್ಷೆ ನೀಡಲಾಯಿತು. ಜೈಲಿನಲ್ಲಿ, ಅವರು ತಮ್ಮ ಬದುಕು ಮತ್ತು ಶ್ರಮದ ಕುರಿತ ಕತೆಯನ್ನು ಬರೆದರು; ನಂತರದಲ್ಲಿ ಅದನ್ನು ***ಚೈನ್ಸ್ ಟು ಲೂಸ್: ಲೈಫ್ ಅಂಡ್ ಸ್ಟ್ರಗಲ್ಸ್ ಆಫ್ ಎ ರೆವಲ್ಯೂಷನರಿ – ಮೆಮೊಯ್ರ್ಸ್ ಆಫ್ ದಾದಾ ಮೀರ್ ಹೈದರ್ ಖಾನ್ (ಕಳಚಬೇಕಾದ ಸಂಕೋಲೆಗಳು: ಒಬ್ಬ ಕ್ರಾಂತಿಕಾರಿಯ ಬದುಕು ಮತ್ತು ಹೋರಾಟ– ದಾದಾ ಮೀತ್ ಹೈದರ್‌ಖಾನ್ ನೆನಪುಗಳು)*** ಎಂಬ ಶೀರ್ಷಿಕೆಯಡಿ ಪ್ರಕಟಿಸಲಾಯಿತು.

'ಜನತಾ ಯುದ್ಧ' ಪ್ರಬಂಧದ ನಂತರ, 1942 ರಲ್ಲಿ ಬಿಡುಗಡೆಯಾದ ಕಮ್ಯುನಿಸ್ಟರಲ್ಲಿ ಅವರು ಕೊನೆಯವರು. ಒಂದು ಅವಧಿಗೆ ಕಾರ್ಮಿಕ ಸಂಘಟನೆ ಮತ್ತು ಕಿಸಾನ್ ಸಭಾದಲ್ಲಿ ಕೆಲಸ ನಿರ್ವಹಿಸಿದ

ಪುಟ 12 ಕ್ಕೆ



ಅಮೀರ್ ಹೈದರ್ ಖಾನ್ 1988ರಲ್ಲಿ ಭಾರತಕ್ಕೆ ಭೇಟಿ ನೀಡಿದಾಗ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು

ಪುಟ 11 ರಿಂದ

ದಾದಾ ಅಮೀರ್ ಹೈದರ್ ಖಾನ್ : ಒಬ್ಬ ಕೆಚ್ಚೆದೆಯ ಕ್ರಾಂತಿಕಾರಿ

ನಂತರ, ಅಮೀರ್ ಹೈದರ್ ಖಾನ್ ಅವರನ್ನು 1945 ರಲ್ಲಿ ಅವರ ಸ್ವಂತ ಊರಿಗೆ ಅಲ್ಲಿ ಕ್ರಾಂತಿಕಾರಿ ಚಳುವಳಿಯನ್ನು ಕಟ್ಟಿ ಬೆಳಸಲು ಕಳಿಸಲಾಯಿತು. ಅಲ್ಲಿ ಅವರು ರಾವಲ್ಪಿಂಡಿ ಜಿಲ್ಲಾ ಸಮಿತಿಯ ಸದಸ್ಯರಾದರು. ಪಾಕಿಸ್ತಾನದಾದ್ಯಂತ ಅವಿತುಕೊಳ್ಳುವ ತಾಣಗಳ ಜಾಲವನ್ನು ಸಂಘಟಿಸಿದರು ಮತ್ತು ದೇಶ ವಿಭಜನೆಯ ದೊಂಬಿಗಳ ಸಮಯದಲ್ಲಿ ಹಿಂದೂ ಕುಟುಂಬಗಳನ್ನು ಸುರಕ್ಷಿತವಾಗಿ ಸ್ವದೇಶಕ್ಕೆ ಹಿಂದೆ ಕಳಿಸುವಲ್ಲಿ ಅವರು ನೆರವು ನೀಡಿದರು.

ಪಾಕಿಸ್ತಾನದ ಸ್ಥಾಪನೆಯ ನಂತರ, ಪಾಕಿಸ್ತಾನ ಕಮ್ಯುನಿಸ್ಟ್ ಪಕ್ಷದ ಕೆಲಸಗಳಲ್ಲಿ ಅವರು ಸಕ್ರಿಯ ಪಾತ್ರ ವಹಿಸಿದರು. ಇಸ್ಲಾಮಿಕ್ ಪ್ರಭುತ್ವದ ದಬ್ಬಾಳಿಕೆಯನ್ನು ಧೈರ್ಯವಾಗಿ ಎದುರಿಸುತ್ತಾ, ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿಹಿಡಿಯುವಲ್ಲಿ ಅವರು ದೃಢವಾಗಿ ನಿಂತರು. ಆಳುವವರು ನಿರಂತರವಾಗಿ ಅವರನ್ನು ಬೆನ್ನಟ್ಟುತ್ತಿದ್ದರು ಮತ್ತು ಅನೇಕ ಬಾರಿ ಬಂಧಿಸಿದರು. 1949 ರಲ್ಲಿ ಅವರನ್ನು ಕಮ್ಯುನಲ್ ಕಾಯಿದೆಯಡಿ ಬಂಧಿಸಿ 15 ತಿಂಗಳ ನಂತರ ಬಿಡುಗಡೆ ಮಾಡಿದರು. ರಾವಲ್ಪಿಂಡಿ ಪಿತೂರಿ ಮೊಕದ್ದಮೆಯ ಆರೋಪಿಗಳ ಪರವಾಗಿ ವಕಾಲತ್ತು ಸಂಘಟಿಸಿದ ಅಪರಾಧಕ್ಕಾಗಿ ಮತ್ತೆ ಬಂಧನಕ್ಕೊಳಗಾದರು. ಬೃಹತ್ ಸಾರ್ವಜನಿಕ ಪ್ರತಿಭಟನೆ ಮತ್ತು ಪತ್ರಿಕೆಗಳ ಪ್ರಚಾರದ ನಂತರ ಅವರನ್ನು ಬಿಡುಗಡೆ ಮಾಡಲಾಯಿತು. ಮತ್ತೆ 1958 ರಲ್ಲಿ ಜನರಲ್ ಅಯೂಬ್ ಖಾನ್ ಮಾರ್ಷಲ್ ಕಾನೂನು ಜಾರಿ ಮಾಡಿದಾಗ ದಾದಾ ಅವರನ್ನು ಬಂಧಿಸಿ ರಾವಲ್ಪಿಂಡಿ ಜೈಲಿನಲ್ಲಿ ಇನ್ನಿತರ ಸಂಗಾತಿಗಳೊಂದಿಗೆ ಸ್ಥಾನಬದ್ಧಗೊಳಿಸಲಾಯಿತು. ದಾದಾ ತಮ್ಮ ಬದುಕಿನ ಸಂಜೆಯ ವರ್ಷಗಳನ್ನು – 1970 ರಿಂದ 1980 ರವರೆಗೆ – ರಾವಲ್ಪಿಂಡಿಯಲ್ಲಿ ಕಳೆದರು. ಸ್ವಾತಂತ್ರ್ಯದ ನಂತರ 1988 ರಲ್ಲಿ ಮೊದಲ ಬಾರಿಗೆ ಭಾರತಕ್ಕೆ ಭೇಟಿ ನೀಡಿ ತಮ್ಮ ಕಮ್ಯುನಿಸ್ಟ್ ಸಂಗಾತಿಗಳನ್ನು ಕೊನೆಯ ಬಾರಿಗೆ ಕಂಡರು. 1989ರ ಡಿಸೆಂಬರ್ 27 ರಂದು ದಾದಾ ಕೊನೆಯುಸಿರೆಳೆದರು.

ಅವರು ತಮ್ಮ ಬದುಕಿನುದ್ದಕ್ಕೂ ಅವರು ತಮ್ಮನ್ನು ತಾವು ಕರೆದುಕೊಳ್ಳುತ್ತಿದ್ದಂತೆ ಫಕೀರನಂತೆ, 'ದಿಕ್ಕಿಲ್ಲದ ಅಲೆಮಾರಿ'ಯಂತೆ ಜೀವಿಸಿದರು. ಯಾವುದೇ ಬೆಲೆಬಾಳುವ ವಸ್ತುಗಳನ್ನೂ ಅವರು ಹೊಂದಿರಲಿಲ್ಲ. ತಮ್ಮ ಪೂರ್ವಿಕರ ಊರಿನಲ್ಲಿ ತಮ್ಮ ಪಾಲಿಗೆ ಬಂದಿದ್ದ ಪಿತಾರ್ಜಿತ ಆಸ್ತಿಯನ್ನು ದಾನ ಮಾಡಿದ್ದರು ಮತ್ತು ಅಲ್ಲಿ ಒಂದು ಬಾಲಕ ಮತ್ತು ಬಾಲಕಿಯರ ಶಾಲೆ ತೆರೆದು ಜತೆಯಲ್ಲೇ ಒಂದು ವಿಜ್ಞಾನದ ಪ್ರಯೋಗ ಶಾಲೆಯನ್ನೂ ಕಟ್ಟಿಸಿದ್ದರು. ಅವರೊಬ್ಬ ಮಹಾನ್ ಶ್ರಮಿಕರ ಅಂತರ್ರಾಷ್ಟ್ರೀವಾದಿಯಾಗಿದ್ದರು. ಬ್ರಿಟಿಷ್ ಸಾಮ್ರಾಜ್ಯವಾದಿಗಳ ವಿರುದ್ಧ ಹೋರಾಟದಲ್ಲಿ ಅವರು ತೋರಿದ ಕೌಶಲ್ಯ ಮತ್ತು ದೃಢತೆ ಹೇಗಿತ್ತೆಂದರೆ ಅವರನ್ನು ಒಬ್ಬ "ಅತ್ಯಂತ ಅಪಾಯಕಾರಿ ವ್ಯಕ್ತಿ" ಎಂಬ ಹಣೆ ಪಟ್ಟಿಯನ್ನು ಬ್ರಿಟಿಷ್ ಅಧಿಕಾರಿಗಳು ತೊಡಿಸಿದ್ದರು. ಅನೇಕ ಬಾರಿ ಬ್ರಿಟಿಷ್ ಬೇಹುಗಾರರಿಗೆ ಚಳ್ಳೆ ಹಣ್ಣು ತಿನ್ನಿಸಿ ತಪ್ಪಿಸಿಕೊಂಡು ವಿದೇಶಕ್ಕೆ ತೆರಳಿ ಅಲ್ಲಿ ತಮ್ಮ ಹಿಂದಿನ ಅನುಭವಗಳನ್ನು ಮತ್ತು ನಾವಿಕನಾಗಿದ್ದಾಗಿನ ಸಂಪರ್ಕಗಳನ್ನು ಬಳಸಿ ಕಾಮಿಂಟರ್ನ್‌ನ ಕೆಲಸ ಕಾರ್ಯಗಳನ್ನು ಸಂಯೋಜಿಸುತ್ತಿದ್ದರು.

ಉತ್ತಮ ನಾಳೆಗಾಗಿ ಜಗತ್ತು ಬದಲಾಗಲೇ ಬೇಕು ಎಂಬ ಮಾರ್ಕ್ಸಿಸ್ಟ್ ಸೂಕ್ತಿಗೆ ತಕ್ಕಂತೆ ಅವರ ಬದುಕು ಅರ್ಥವತ್ತಾಗಿತ್ತು. ಕಾರ್ಮಿಕ ವರ್ಗದ ನಿಜವಾದ ವಿಮೋಚನೆಯಾಗುವುದು ಸಮಾಜವು ಸಮಾಜವಾದಿ ಬದಲಾವಣೆಯತ್ತ ಸಾಗಿದಾಗ ಮಾತ್ರ. ಆ ನಂಬಿಕೆಯನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದೇ ಪ್ರತಿಯೊಬ್ಬನ ಬದುಕಿನ ಪ್ರಾಥಮಿಕ ಮೌಲ್ಯವಾಗಬೇಕು. ಈ ಮಹಾನ್ ಕ್ರಾಂತಿಕಾರಿಯ ಪರಂಪರೆಯು ರ್‍ಯಾಡಿಕಲ್ ಮತ್ತು ಪ್ರಗತಿಪರ ಜನರ ಇಂದಿನ ಮತ್ತು ಭವಿಷ್ಯದ ತಲೆಮಾರುಗಳಿಗೆ ಸ್ಫೂರ್ತಿ ನೀಡುತ್ತದೆ.

ದೇಶವನ್ನು ಸಂಕಟಮಯ ಹಾದಿಗೆ ತಳ್ಳುವ ಸಿಎಬಿ–ಎನ್‌ಆರ್‌ಸಿ ಬೇಡವೇ ಬೇಡ

ಎರಡು ಸಾವಿರಕ್ಕೂ ಹೆಚ್ಚು ವಿಜ್ಞಾನಿಗಳು, ಸಂಶೋಧಕರು, ಲೇಖಕರು, ಕಲಾವಿದರು, ಪ್ರತಿಷ್ಠಿತ ನಾಗರಿಕರ ಆಗ್ರಹ

ಪುಟ 7 ರಿಂದ

ಅಲ್ಪಸಂಖ್ಯಾತರ ಪ್ರಶ್ನೆಯನ್ನು ನಿಭಾಯಿಸಲು ಒಂದು ತಾರತಮ್ಯವಿಲ್ಲದ ಶಾಸನವನ್ನು ತರಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಈ ಮನವಿಗೆ ಸಹಿ ಹಾಕಿರುವವರಲ್ಲಿ ಮುಂಬೈಯ ಟಾಟಾ ಮೂಲಭೂತ ಸಂಶೋಧನೆಯ ಸಂಸ್ಥೆ(ಟಿಐಎಫ್‌ಆರ್), ಬೆಂಗಳೂರಿನ ಅಂತರ್ರಾಷ್ಟ್ರೀಯ ಸೈದ್ಧಾಂತಿಕ ವಿಜ್ಞಾನಗಳ ಕೇಂದ್ರ ಹಾಗೂ ಇಟೆಲಿಯ ಅಂತರ್ರಾಷ್ಟ್ರೀಯ ಸೈದ್ಧಾಂತಿಕ ಭೌತಶಾಸ್ತ್ರ ಕೇಂದ್ರದ ನಿರ್ದೇಶಕರುಗಳೂ ಸೇರಿದ್ದಾರೆ.


ಡಿಸೆಂಬರ್ 10ರಂದು ಇನ್ನೊಂದು ಸಮಗ್ರವಾದ ಪ್ರತಿಭಟನಾ ಹೇಳಿಕೆ ಪ್ರಕಟವಾಗಿದೆ. 720ಕ್ಕೂ ಹೆಚ್ಚು ಲೇಖಕರು, ಕಲಾವಿದರು, ನಾಗರಿಕ ಹಕ್ಕುಗಳ ಕಾರ್ಯಕರ್ತರು ಮತ್ತು ಪ್ರತಿಷ್ಠಿತ ನಾಗರಿಕರು ಇದಕ್ಕೆ ಸಹಿ ಹಾಕಿದ್ದಾರೆ. **ಪೌರತ್ವದ ಹಕ್ಕು ಎಂಬುದು ಹಕ್ಕುಗಳನ್ನು ಪಡೆಯುವ ಹಕ್ಕು ಎಂದು ನಿರೂಪಿಸಲ್ಪಟ್ಟಿದೆ ಎಂದೇ ಈ ಹೇಳಿಕೆ ಆರಂಭವಾಗುತ್ತದೆ.** ಭಾರತದ ಪೌರತ್ವ ಸಮಾನತೆ ಮತ್ತು ನಿಷ್ಪಕ್ಷಪಾತತೆಯ ಮೇಲೆ ನಿಂತಿದೆ ಎಂದು ನೆನಪಿಸಿರುವ ಈ ಹೇಳಿಕೆ ಸಿಎಬಿ ಮತ್ತು ಎನ್‌ಆರ್‌ಸಿ ದಾರಿತಪ್ಪಿರುವ ಮತ್ತು ಅದಕ್ಕಿಂತಲೂ ಅಸಂವಿಧಾನಿಕವಾದ ಧೋರಣಾ ನಿರ್ಣಯಗಳು ಎಂದು ಹೇಳಿದೆ. ಸ್ವತಂತ್ರ ಭಾರತದಲ್ಲಿ ಮೊತ್ತ ಮೊದಲ ಬಾರಿಗೆ ಕಾನೂನಿನ ಮೂಲಕ ಒಂದು ನಿರ್ದಿಷ್ಟ ನಂಬಿಕೆಯವರಿಗೆ ವಿಶೇಷಾಧಿಕಾರಗಳನ್ನು ಕೊಡುವ ಮತ್ತು ಮತ್ತೊಂದು ಭಿನ್ನ ನಂಬಿಕೆಯವರನ್ನು ಎರಡನೇ ದರ್ಜೆಗೆ ಇಳಿಸುವ ಪ್ರಯತ್ನಗಳು ನಡೆಯುತ್ತಿವೆ.

ಇದಲ್ಲದೆ, ದೇಶವ್ಯಾಪಿ ಎನ್‌ಆರ್‌ಸಿ ದೇಶಾದ್ಯಂತ ಜನಸಾಮಾನ್ಯರಲ್ಲಿ ವಿಭಜನೆ ಮತ್ತು ಸಂಕಟಗಳನ್ನು ಹರಿಯಬಿಡುತ್ತದೆ. ಜನಗಳ ಆಹಾರ ಭದ್ರತೆ, ಉದ್ಯೋಗ ಇತ್ಯಾದಿ ಅಗತ್ಯಗಳ ಪ್ರಶ್ನೆಗಳನ್ನು, ಜಾತಿ, ಧರ್ಮ, ಲಿಂಗ ಆಧಾರಿತ ತಾರತಮ್ಯಗಳ ನಿರ್ಮೂಲನೆಯನ್ನು ಕೈಗೆತ್ತಿಕೊಳ್ಳುವ ಬದಲು ಅಸ್ಸಾಂನಲ್ಲಿ ಇದೇ ಎನ್‌ಆರ್‌ಸಿಯಿಂದ 19ಲಕ್ಷ ವ್ಯಕ್ತಿಗಳ ತಲೆಯ ಮೇಲೆ ಪೌರತ್ವಹೀನತೆಯ ತೂಗುಗತ್ತಿ ನೇತಾಡುವಂತೆ ಮಾಡಿರುವಂತೆ ಇಡೀ ದೇಶದ ಜನತೆ ಈ ಸಂಕಟಮಯ ದಾರಿಯಲ್ಲಿ ಸಾಗುವಂತೆ ಮಾಡಬೇಕೇ ಎಂದು ಈ ಹೇಳಿಕೆ ಖಾರವಾಗಿ ಪ್ರಶ್ನಿಸಿದೆ.

ನಿವೃತ್ತ ಸುಪ್ರಿಂ ಕೋರ್ಟ್ ನ್ಯಾಯಾಧೀಶ ಪಿ ಬಿ ಸಾವಂತ್, ಮುಂಬೈ ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರುಗಳಾದ ಹೊಸಬೆಟ್ ಸುರೇಶ್ ಹಾಗೂ ಬಿ ಜಿ ಕೊಲ್ಸೆ ಪಾಟೀಲ್, ಸ್ವಾಮಿ ಅಗ್ನಿವೇಶ್, ಹರ್ಷ ಮಂದರ್, ಕವಿ ಜಾವೇದ್ ಅಖ್ತರ್, ಮಲ್ಲಿಕಾ ಸಾರಾಬಾಯ್, ಚಲನಚಿತ್ರ ರಂಗದ ಅಪರ್ಣಾ ಸೆನ್, ನಸೀರುದ್ದೀನ್ ಷಾ, ಸಯಿದ್ ಮಿರ್ಜಾ ಮುಂತಾದವರು, ನಿವೃತ್ತ ನೌಕಾಸೇನಾಧಿಕಾರಿ ಅಡ್ಮಿರಲ್ ರಾಮದಾಸ್, ಚಿಂತಕ–ಪ್ರಾಧ್ಯಾಪಕರುಗಳಾದ ಪ್ರಭಾತ್ ಪಟ್ನಾಯಕ್, ಉತ್ಸಾ ಪಟ್ನಾಯಕ್, ಗೀತಾ ಕಪೂರ್, ನಾಗರಿಕ ಹಕ್ಕುಗಳ ಹೋರಾಟಗಾರರಾದ ತೀಸ್ತಾ ಸೆಟಲ್‌ವಾಡ್, ಜಾವೇದ್ ಆನಂದ್ ಮುಂತಾದವರು ಈ ಹೇಳಿಕೆಗೆ ಸಹಿ ಹಾಕಿದ್ದಾರೆ.



2014ರಿಂದ ಓಟ–ತಲುಪಿದ್ದು 1978ರ ಪಾಕಿಸ್ತಾನದ ಹತ್ತಿರ– ಕಂಗ್ರಾಟ್ಸ್
ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಸಿಫಿ.ಕಾಂ



ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಜನವರಿ 8–ವಿದ್ಯಾರ್ಥಿಗಳಿಂದಲೂ ಸಾರ್ವಜನಿಕ ಶಿಕ್ಷಣ ಉಳಿಸಲು ದೇಶವ್ಯಾಪಿ ಮುಷ್ಕರ

ಜವಹರಲಾಲ್ ನೆಹರೂ ವಿಶ್ವವಿದ್ಯಾಲಯ ವಿದ್ಯಾರ್ಥಿ ಸಂಘ (ಜೆಎನ್‌ಯುಎಸ್‌ಯು) ಆರಂಭಿಸಿದ ಹಾಸ್ಟೆಲ್ ಶುಲ್ಕ ಏರಿಕೆಯ ವಿರುದ್ಧದ ಹೋರಾಟ ಈಗ ಸಾರ್ವಜನಿಕ ಶಿಕ್ಷಣವನ್ನು ಉಳಿಸುವ ದೇಶವ್ಯಾಪಿ ವಿದ್ಯಾರ್ಥಿ ಚಳುವಳಿಯಾಗಿ ಬೆಳೆಯುತ್ತಿದೆ. ಡಿಸೆಂಬರ್ 10ರಂದು ನಡೆದ ವಿದ್ಯಾರ್ಥಿ ಮುಖಂಡರುಗಳ ಸಭೆ ಸಾರ್ವಜನಿಕ ಶಿಕ್ಷಣವನ್ನು ಅಸ್ಥಿರಗೊಳಿಸುವ ಉದ್ದೇಶದಿಂದ ಮೋದಿ ಸರಕಾರ ಉದ್ದೇಶಪೂರ್ವಕವಾಗಿಯೇ ತರುತ್ತಿರುವ ಧೋರಣೆಗಳ ವಿರುದ್ಧ ಹೋರಾಟವನ್ನು ಮುಂದುವರೆಸಲು ನಿರ್ಧರಿಸಿವೆ. ಜೆಎನ್‌ಯುನಲ್ಲಿ ಜೊತೆಗೂಡಿ ಹೋರಾಡುತ್ತಿರುವ ಎಸ್‌ಎಫ್‌ಐ ಮತ್ತು ಎಐಎಸ್‌ಎ ಜತೆಗೆ ಎನ್‌ಎಸ್‌ಯುಐ ಕೂಡ ಈ ಹೋರಾಟದಲ್ಲಿ ಸೇರಿಕೊಳ್ಳಲು ನಿರ್ಧರಿಸಿದೆ.

ಈ ಜಂಟಿ ವೇದಿಕೆ "ಘನತೆಪೂರ್ಣ ಮತ್ತು ಕೈಗೆಟಕುವ ಶಿಕ್ಷಣ"ಕ್ಕಾಗಿ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಿದೆ. ಇದರ ಮೊದಲ ಹೆಜ್ಜೆಯಾಗಿ ಜನವರಿ 8 ರಂದು ದೇಶಾದ್ಯಂತ ವಿದ್ಯಾರ್ಥಿಗಳು ಮುಷ್ಕರ ನಡೆಸುತ್ತಾರೆ. ಇತರ ವಿದ್ಯಾರ್ಥಿ ಸಂಘಟನೆಗಳೂ ಜೊತೆಗೂಡುವ ಸಾಧ್ಯತೆಗಳಿವೆ.

ಈಗಾಗಲೇ ಕಾರ್ಮಿಕರು ದೇಶಾದ್ಯಂತ ಸಾರ್ವತ್ರಿಕ ಮುಷ್ಕರಕ್ಕೆ ಭರದ ಸಿದ್ಧತೆ ನಡೆಸುತ್ತಿದ್ದಾರೆ. ರೈತ ಸಂಘಟನೆಗಳೂ ಅಂದು ಗ್ರಾಮಾಂತರ ಬಂದ್‌ಗೆ ಕರೆ ನೀಡಿವೆ. ಈಗ ವಿದ್ಯಾರ್ಥಿಗಳೂ ಈ ಹೋರಾಟದಲ್ಲಿ ಸೇರಿಕೊಂಡಿದ್ದಾರೆ.


ಇತ್ತೀಚಿನ ತಿಂಗಳುಗಳಲ್ಲಿ ದೇಶದ ಹಲವು ಕ್ಯಾಂಪಸ್‌ಗಳಲ್ಲಿ ಬಡ, ವಂಚಿತ ವಿಭಾಗಗಳನ್ನು ಶಿಕ್ಷಣದಿಂದ ಹೊರದಬ್ಬಲು ಶುಲ್ಕ ಏರಿಕೆಯಿಂದ ಹಿಡಿದು ಸಾಮಾಜಿಕ ನ್ಯಾಯದ ನಿರಾಕರಣೆಯ ವರೆಗಿನ ದಾಳಿಗಳು ನಡೆಯಲಾರಂಭಿಸಿವೆ. ಸಂಶೋಧನಾ ವಿದ್ಯಾರ್ಥಿಗಳಿಗೆ ಫೆಲೋಶಿಪ್‌ಗಳು, ಸ್ಕಾಲರ್‌ಶಿಪ್‌ಗಳನ್ನು ಕಡಿತ ಮಾಡಲಾಗುತ್ತಿದೆ, ಅದೇ ವೇಳೆಯಲ್ಲಿ ಕ್ಯಾಂಪಸ್‌ಗಳಲ್ಲಿ ಐಡೆಂಟಿಟಿ ಆಧಾರಿತ ತಾರತಮ್ಯಗಳು ಹೆಚ್ಚುತ್ತಿವೆ. ಅಭಿವ್ಯಕ್ತಿಯ ಮೇಲೆ ಅಡೆ–ತಡೆಗಳೂ ಹೆಚ್ಚುತ್ತಿವೆ. ಶಿಕ್ಷಣದ ಖಾಸಗೀಕರಣದ ರಭಸ ಹೆಚ್ಚುತ್ತಿದೆ. ಇದರ ವಿರುದ್ಧ ವಿದ್ಯಾರ್ಥಿಗಳು ಬೀದಿಗಿಳಿದು ಹೋರಾಟ ನಡೆಸುವ ಅಗತ್ಯವಿದೆ ಎಂದು ಜೆಎನ್‌ಯುಎಸ್‌ಯು ಪ್ರಧಾನ ಕಾರ್ಯದರ್ಶಿ ಆಯಿಷೇ ಘೋಷ್ ಹೇಳಿದರು.

ಈ ಜಂಟಿ ವಿದ್ಯಾರ್ಥಿ ವೇದಿಕೆ ಕರಡು ರಾಷ್ಟ್ರೀಯ ಶಿಕ್ಷಣ ಧೋರಣೆಯ ವಿರುದ್ಧವೂ ಹೋರಾಟ ನಡೆಸಲು ನಿರ್ಧರಿಸಿದೆ.



ನವ ಉದಾರ ವಿತ್ತೀಯ ಆಳ್ವಿಕೆಯ ವಿಕೃತಿ–1

ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರ ನಿಲ್ಲಿಸಿರುವ ಮೋದಿ ಸರಕಾರ



ದೇಶದ ಅದೃಷ್ಟಹೀನ ಅಲ್ಪ ಸಂಖ್ಯಾತರ ಮೇಲೆ ಆರ್ಭಟಿಸುವ, ಜಬರ್ದಸ್ತು ಮಾಡುವ, ಆಡಂಬರದ ಗಂಡಸುತನ ತೋರಿಸುವ ಮೋದಿ ಸರ್ಕಾರವು ಹಣಕಾಸು ಬಂಡವಾಳದ ವಿರುದ್ಧ ನಿಲ್ಲುವ ಎದೆಗಾರಿಕೆ ಹೊಂದಿಲ್ಲ. ಬದಲಿಗೆ ರಾಜ್ಯಗಳನ್ನು ಆರ್ಥಿಕವಾಗಿ ಹಿಂಡಲು ಮುಂದಾಗುತ್ತದೆ, ರಾಜ್ಯಗಳಿಗೆ ಜಿಎಸ್‌ಟಿ ನಷ್ಟ ಪರಿಹಾರದ ಹಣ ಕೊಡುವುದನ್ನು ನಿಲ್ಲಿಸುತ್ತದೆ, ಬಡವರ ಕಲ್ಯಾಣ ಕಾರ್ಯಕ್ರಮಗಳ ವೆಚ್ಚದ ಕಡಿತವನ್ನು ಮಾಡುತ್ತದೆ. ಅದು, ಹಣಕಾಸು ಬಂಡವಾಳವು ಅರ್ಥವ್ಯವಸ್ಥೆಗೆ ಆಘಾತ ತಲುಪಿಸುವಂತಹ ಆಜ್ಞೆಗಳನ್ನು ಕೊಂಡೊಯ್ಯುವ ಕೊಳವೆಯ ಪಾತ್ರ ವಹಿಸಿದೆ. ಇಲ್ಲಿ ನವ ಉದಾರ ಆಳ್ವಿಕೆಯ ವಿಕೃತಿಯ ಪ್ರಭಾವ ಸ್ಪಷ್ಟವಾಗಿ ಕಾಣುತ್ತದೆ.


ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ಒಂದು ಅರ್ಥವ್ಯವಸ್ಥೆಯಲ್ಲಿ ವರಮಾನಗಳ ವೃದ್ಧಿ ನಿಧಾನಗೊಳ್ಳುತ್ತಿರುವಾಗ, ಸರ್ಕಾರದ ತೆರಿಗೆ ಆದಾಯದ ಬೆಳವಣಿಗೆಯೂ ನಿಧಾನಗೊಳ್ಳುತ್ತದೆ. ಆದಾಗ್ಯೂ, ಸರ್ಕಾರಕ್ಕೆ ಕೆಲವು ನಿರ್ದಿಷ್ಟ ವೆಚ್ಚಗಳನ್ನು ಕೈಗೊಳ್ಳಲೇಬೇಕಾದ ಅನಿವಾರ್ಯತೆ ಇರುತ್ತದೆ. ಅಂತಹ ಅನಿವಾರ್ಯ ವೆಚ್ಚಗಳನ್ನು ಹೊಂದಿಸಿಕೊಳ್ಳುವ ಸಲುವಾಗಿ, ಸರ್ಕಾರವು ಅಧಿಕ ತೆರಿಗೆಗಳನ್ನು ಹೇರಬೇಕಾಗುತ್ತದೆ; ಇಲ್ಲವೇ ಸಾಲಮಾಡಬೇಕಾಗುತ್ತದೆ (ಅಂದರೆ, ವಿತ್ತೀಯ ಕೊರತೆಯ ಗಾತ್ರ ದೊಡ್ಡದಾಗುತ್ತದೆ). ಮಹಾ ಯದ್ಧಾನಂತರದ ಕಾಲದಲ್ಲಿ ಎಲ್ಲ ಬಂಡವಾಳಶಾಹಿ ದೇಶಗಳೂ (ಆಗ, ಈ ದೇಶಗಳು ತಮ್ಮ ಅರ್ಥವ್ಯವಸ್ಥೆಯ ಮೇಲೆ ನಿಯಂತ್ರಣ ಹೊಂದಿದ್ದವು) ತಮ್ಮ ಅರ್ಥವ್ಯವಸ್ಥೆಯು ಮಂದಗತಿಗೆ ಇಳಿದಾಗ ತಮ್ಮ ವಿತ್ತೀಯ ಕೊರತೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದವು, ಅಂದರೆ ಸಾಲ ಮಾಡುತ್ತಿದ್ದವು. ಸಾಲ ಮಾಡಿದ ಹಣವನ್ನು ಸರ್ಕಾರಗಳು ಧಾರಾಳವಾಗಿ ಖರ್ಚು ಮಾಡುತ್ತಿದ್ದ ಕಾರಣದಿಂದಾಗಿ, ಬೇಡಿಕೆ ಕುದುರುತ್ತಿತ್ತು ಮತ್ತು ಅರ್ಥವ್ಯವಸ್ಥೆಯು ಚೇತರಿಸಿಕೊಳ್ಳುತ್ತಿತ್ತು. ಇಂತಹ ವಿದ್ಯಮಾನವನ್ನು ಒಂದು "ಸ್ವಯಂ ಸ್ಥಿರಕಾರಿ" (automatic stabiliser) ಎಂಬುದಾಗಿ ಅರ್ಥಶಾಸ್ತ್ರದ ಪಠ್ಯ ಪುಸ್ತಕಗಳು ತಿಳಿಸುತ್ತವೆ.

ಸರ್ಕಾರಗಳು ಸಂದರ್ಭಾನುಸಾರವಾಗಿ ಸಾಲ ಮಾಡಿ ಅದನ್ನು ಖರ್ಚು ಮಾಡುತ್ತಿದ್ದ ಸಂಗತಿಯು, ತಮ್ಮ ಸಾಮಾಜಿಕ ಮತ್ತು ಆರ್ಥಿಕ ನೀತಿಗಳ ಮೇಲೆ ಎಲ್ಲ ದೇಶಗಳೂ ನಿಯಂತ್ರಣ ಹೊಂದಿದ್ದ ಕಾಲದಲ್ಲಿ ಸಂಗತವಾಗಿತ್ತು. ಆದರೆ, ನವ ಉದಾರವಾದದ ಆಳ್ವಿಕೆಯಲ್ಲಿ ಈ ಸಂಗತಿಯು ಅಸಂಗತವಾಗಿದೆ. ನವ ಉದಾರವಾದದ ಆಳ್ವಿಕೆಯಲ್ಲಿ, ಅರ್ಥವ್ಯವಸ್ಥೆಯ ಮಂದಗತಿಯಿಂದಾಗಿ ತೆರಿಗೆ ಸಂಗ್ರಹ ಇಳಿದಾಗ, ಸರ್ಕಾರವು ಬಂಡವಾಳಗಾರರ ಮೇಲೆ ಅಧಿಕ ತೆರಿಗೆ ವಿಧಿಸಲೂ ಆಗದ ಅಥವಾ ಹೆಚ್ಚು ಸಾಲ ಮಾಡಲೂ ಆಗದ ಪರಿಸ್ಥಿತಿಯಲ್ಲಿದೆ. ಏಕೆಂದರೆ, ಈ ಎರಡೂ ಕ್ರಮಗಳನ್ನು ಅಂತಾರಾಷ್ಟ್ರೀಯ ಹಣ ಕಾಸು ಬಂಡವಾಳವು ವಿರೋಧಿಸುತ್ತದೆ. ಅದರ ಈ ನಿಲುವಿಗೆ ಸರ್ಕಾರ ಒಪ್ಪಿಕೊಳ್ಳದಿದ್ದರೆ ಬಂಡವಾಳವು ದೇಶದಿಂದ ಪಲಾಯನ ಮಾಡಿ ಒಂದು ಆರ್ಥಿಕ ಬಿಕ್ಕಟ್ಟು ಉಂಟಾಗುತ್ತದೆ. ಒಂದು ವೇಳೆ, ದುಡಿಯುವ ಜನತೆಯ ಮೇಲೆ ಅಧಿಕ ತೆರಿಗೆಗಳ ಭಾರ ಹೊರಿಸಿದರೆ, ಆಗಲೂ, ಒಟ್ಟಾರೆ ಬೇಡಿಕೆ ವೃದ್ಧಿಸುವುದಿಲ್ಲ. ಹಾಗಾಗಿ, ಅರ್ಥವ್ಯವಸ್ಥೆಯ ಮಂದಗತಿ ನಿಲ್ಲದು.

ಒಂದು ವಾಸ್ತವಾಂಶವಾಗಿ ಹೇಳುವುದಾದರೆ, ಅಮೇರಿಕಾ ದೇಶವನ್ನು ಹೊರತುಪಡಿಸಿದರೆ, ಎಲ್ಲಾ ದೇಶಗಳೂ ತಮ್ಮ ವಿತ್ತೀಯ ಕೊರತೆಯು ತಮ್ಮ ದೇಶದ ಜಿಡಿಪಿಯ 3% ಮೀರದಂತೆ ಕಾನೂನು ಮಾಡಿಕೊಂಡಿವೆ. ಭಾರತದಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ವಿತ್ತೀಯ ಕೊರತೆಯು ತಮ್ಮ ತಮ್ಮ ಜಿಡಿಪಿಯ 3% ಮೀರದಂತೆ ಕಾನೂನು ಮಾಡಿಕೊಂಡಿವೆ. ಅರ್ಥವ್ಯವಸ್ಥೆಯು ಮಂದಗತಿಗೆ ಇಳಿದಾಗ ತೆರಿಗೆ ಸಂಗ್ರಹವೂ ಇಳಿಯಲೇಬೇಕಾಗುತ್ತದೆ. ಹಾಗಾಗಿ ಸರ್ಕಾರವು ಸಾರ್ವಜನಿಕರಿಗಾಗಿ ಕೈಗೊಳ್ಳುವ ಖರ್ಚುಗಳೂ ಇಳಿಯುತ್ತವೆ.

ಆದ್ದರಿಂದ, ಒಂದು ನವ ಉದಾರ ಆಳ್ವಿಕೆಯಲ್ಲಿ, ಸರ್ಕಾರವು ಕೈಗೊಳ್ಳುವ ಖರ್ಚು ವೆಚ್ಚಗಳು, ಬೇಡಿಕೆ ಕುದುರಿಸುವ ಮತ್ತು ಅರ್ಥವ್ಯವಸ್ಥೆ ಚೇತರಿಸಿಕೊಳ್ಳುವ 'ಸ್ವಯಂ ಸ್ಥಿರಕಾರಿ' ಪರಿಣಾಮವನ್ನು ನವ ಉದಾರ ಆಳ್ವಿಕೆ ಬರುವ ಮೊದಲಿನ ರೀತಿಯಲ್ಲಿ ಬೀರುವುದಿಲ್ಲ. ಮೇಲಾಗಿ, ಅರ್ಥವ್ಯವಸ್ಥೆಯು ಮಂದಗತಿಗೆ ಇಳಿದಾಗ ತೆರಿಗೆ ಸಂಗ್ರಹವೂ ಇಳಿಯುತ್ತದೆ ಮತ್ತು ಸರ್ಕಾರವು ಸಾರ್ವಜನಿಕರಿಗಾಗಿ ಕೈಗೊಳ್ಳುವ ಖರ್ಚುಗಳೂ ಇಳಿಯುತ್ತವೆ. ಅದರ ಪರಿಣಾಮವಾಗಿ ಅರ್ಥವ್ಯವಸ್ಥೆಯು ಇನ್ನೂ ಹೆಚ್ಚಿನ ಮಂದಗತಿಗೆ ಇಳಿಯುತ್ತದೆ. ಸರ್ಕಾರದ ಕಡಿಮೆ ಖರ್ಚುಗಳು ಆವರ್ತಗಳಲ್ಲಿ ಉಂಟಾಗುವ ಬಿಕ್ಕಟ್ಟಿಗೆ ಇಂಬು ಕೊಡುತ್ತವೆ ಎಂದು ಹೇಳುವುದುಂಟು. ಬಿಕ್ಕಟ್ಟು ಯಾವಾಗಲೂ ಆವರ್ತನಗೊಳ್ಳುತ್ತದೆ ಎಂದು ಸೂಚಿಸುವ ಕಾರಣದಿಂದ ಈ ಹೇಳಿಕೆಯು ನಮ್ಮನ್ನು ತಪ್ಪುದಾರಿಗೆ ಎಳೆಯುತ್ತದೆ.



ಅನಿವಾರ್ಯ ವೆಚ್ಚಗಳನ್ನು ಹೊಂದಿಸಿಕೊಳ್ಳುವ ಸಲುವಾಗಿ ಸರ್ಕಾರಗಳು ಹೆಚ್ಚಿನ ಮಟ್ಟದ ಸಾಲ ಮಾಡುವ ಕ್ರಮವನ್ನು ವಿತ್ತೀಯ ಹೊಣೆಗಾರಿಕೆಯ ಹೆಸರಿನಲ್ಲಿ ಕೈಬಿಡಲಾಗಿದೆ ಮತ್ತು ಎಲ್ಲ ಸರ್ಕಾರಗಳು ವಿತ್ತೀಯ ಶಿಸ್ತು ಪಾಲಿಸುವಂತೆ ಆಜ್ಞಾಪಿಸಲಾಗಿದೆ. ಹಿಂದೆ, ಸರ್ಕಾರಗಳು ಸಂದರ್ಭಕ್ಕನುಸಾರವಾಗಿ ಹೆಚ್ಚಿನ ಮಟ್ಟದ ಸಾಲ ಮಾಡುತ್ತಿದ್ದ ಕ್ರಮವು ಅರ್ಥವ್ಯವಸ್ಥೆಯು ಮಂದಗತಿಗೆ ಇಳಿಯದಂತೆ ರಕ್ಷಿಸುವ ಒಂದು ತಡೆ ಗೋಡೆಯಂತೆ ಕೆಲಸ ಮಾಡುತ್ತಿತ್ತು. ಅಂತಹ ಕ್ರಮವನ್ನು ವಿರೋಧಿಸುವ ನವ ಉದಾರ ಆಳ್ವಿಕೆಯ ಹಠಮಾರಿತನದ ನಿಲುವು ಅರ್ಥವ್ಯವಸ್ಥೆಯು ಮಂದಗತಿಯನ್ನು ಅಧಿಕಗೊಳಿಸುತ್ತದೆ. ಈ ಅಂಶವೇ ನವ ಉದಾರ ವಿತ್ತೀಯ ಆಳ್ವಿಕೆಯ ವಿಕೃತಿಯ ತಿರುಳು.

ಈ ಹಿನ್ನೆಲೆಯಲ್ಲಿ, ತಾನು ಸಿಲುಕಿರುವ ಇಕ್ಕಟ್ಟಿನಿಂದ ನುಣಿಚಿಕೊಳ್ಳಲು ಸರ್ಕಾರವು ಎಲ್ಲ ರೀತಿಯ ಕುಯುಕ್ತಿಗಳನ್ನೂ ಬಳಸುತ್ತಿದೆ. ಭಾರತದಲ್ಲಿ ಈಗ ಎರಡು ಇಂತಹ ಕುಯುಕ್ತಿಯ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಒಂದು, ಕೇಂದ್ರ ಸರ್ಕಾರವು ತಾನು ಹೊರಬೇಕಾಗಿರುವ ವಿತ್ತೀಯ ಭಾರವನ್ನು, ಬಲವಂತವಾಗಿ ಮತ್ತು ಸಾಂವಿಧಾನಿಕ ಹೊಣೆಗಾರಿಕೆಯನ್ನು ಉಲ್ಲಂಘಿಸಿ, ರಾಜ್ಯ ಸರ್ಕಾರಗಳ ಹೆಗಲಿಗೆ ಹೊರಿಸುತ್ತಿದೆ. ಇಂತಹ ಇನ್ನೊಂದು ಪ್ರಯತ್ನವೆಂದರೆ, ಸಾರ್ವಜನಿಕ ವಲಯವನ್ನು ಖಾಸಗಿಯವರಿಗೆ ಮಾರಲು ಸರ್ಕಾರ ಹುಚ್ಚು ಅವಸರದಲ್ಲಿದೆ. ಹೇಗಾದರೂ ಸರಿ ಒಂದಿಷ್ಟು ಹಣ ಕೈಗೆ ಸಿಕ್ಕಿದರೆ ಸಾಕು ಎನ್ನುವ ಅದರ ಮಂದದೃಷ್ಟಿಯ ಮನೋಭಾವ ಖಂಡನೀಯ. ಈ ಎರಡೂ ಪ್ರಯತ್ನಗಳನ್ನು ಒಂದೊಂದಾಗಿ ಪರಿಶೀಲಿಸೋಣ.

ಕೇಂದ್ರ ಸರ್ಕಾರವು ತಾನು ಹೊರಬೇಕಾಗಿರುವ ರಕ್ಷಣಾ ವೆಚ್ಚದ ಭಾರವನ್ನು, ಬಲವಂತವಾಗಿ ಮತ್ತು ಸಾಂವಿಧಾನಿಕ ಹೊಣೆಗಾರಿಕೆಯನ್ನು ಉಲ್ಲಂಘಿಸಿ, ಹೇಗೆ ರಾಜ್ಯ ಸರ್ಕಾರಗಳ ಹೆಗಲಿಗೆ ಹೊರಿಸಲು ಪ್ರಯತ್ನಿಸುತ್ತಿದೆ ಎಂಬ ಅಂಶವನ್ನು ಈಗಾಗಲೇ ಚರ್ಚಿಸಲಾಗಿದೆ (ಜನಶಕ್ತಿ– ಸಂಚಿಕೆ 37, ಸೆಪ್ಟೆಂಬರ್ 9–15, 2019). ದೇಶದ ರಕ್ಷಣೆ ಸಂಬಂಧಿತ ಖರ್ಚು ವೆಚ್ಚಗಳನ್ನು ಮತ್ತು ರಕ್ಷಣೆಗೆ ಸಂಬಂಧಿಸಿದ ಎಲ್ಲ ತೀರ್ಮಾನಗಳನ್ನು ತೆಗೆದುಕೊಳ್ಳುವ ಜವಾಬ್ದಾರಿಯನ್ನು ಪ್ರತ್ಯೇಕವಾಗಿ ಮತ್ತು ಏಕಮಾತ್ರವಾಗಿ ಕೇಂದ್ರ ಸರ್ಕಾರಕ್ಕೆ ವಹಿಸಲಾಗಿದೆ. ಇದನ್ನು ಸಂವಿಧಾನದ ಏಳನೆಯ ಷೆಡ್ಯೂಲಿನಲ್ಲಿ ನಿರ್ದಿಷ್ಟವಾಗಿ ನಮೂದಿಸಲಾಗಿದೆ. ಈ ಸಂವಿಧಾನಿಕ ಏರ್ಪಾಟಿನಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಆದಾಗ್ಯೂ, ತನ್ನ ಸಾಂವಿಧಾನಿಕ ಹೊಣೆಗಾರಿಕೆಯನ್ನು ಉಲ್ಲಂಘಿಸಿ, ಕೇಂದ್ರ ಸರ್ಕಾರವು ತನ್ನ ಪಾಲಿಗೆ ವಹಿಸಿರುವ ರಕ್ಷಣಾ ಖರ್ಚು ವೆಚ್ಚಗಳನ್ನು, ಕೇಂದ್ರ ಮತ್ತು ರಾಜ್ಯಗಳ ನಡುವೆ ಹಂಚಿಕೆಯಾಗುವ ಹಣದಿಂದ ಮುರಿದುಕೊಳ್ಳಲು ಆದೇಶಿಸುವಂತೆ ಹದಿನೈದನೆಯ ಹಣ ಕಾಸು ಆಯೋಗವನ್ನು ಕೋರಿದೆ. ಅಂದರೆ, ಕೇಂದ್ರ ಸರ್ಕಾರವೇ ಹೊರಬೇಕಾದ ರಕ್ಷಣಾ ವೆಚ್ಚದ ಹೊರೆಯನ್ನು ಬಲವಂತವಾಗಿ ರಾಜ್ಯ ಸರ್ಕಾರಗಳಿಗೆ ವರ್ಗಾಯಿಸಲಾಗುತ್ತಿದೆ.

ಇಲ್ಲಿಯವರೆಗೆ, ಈ ವಿಷಯವು, ರಾಜ್ಯಗಳಿಗೆ ಒಡ್ಡಿದ ಒಂದು ಬೆದರಿಕೆಯಾಗಿ ಉಳಿದಿದೆ. ಆದರೆ, ಇನ್ನೊಂದು ವಿಷಯದಲ್ಲಿ–ಜಿಎಸ್‌ಟಿಯ ನಷ್ಟ ತುಂಬಿಕೊಡುವ ವಿಷಯದಲ್ಲಿ – ಕೇಂದ್ರ ಸರ್ಕಾರವು ಈಗಾಗಲೇ ರಾಜ್ಯಗಳನ್ನು ಹಿಂಡಿ ಹಿಪ್ಪೆ ಮಾಡಿದೆ. ಜಿಎಸ್‌ಟಿ ಜಾರಿ ಮಾಡುವ ಸಂದರ್ಭದಲ್ಲಿ, ರಾಜ್ಯಗಳು ಜಿಎಸ್‌ಟಿ ಪದ್ಧತಿಯನ್ನು ಒಪ್ಪಿಕೊಳ್ಳುವಂತೆ ಅವುಗಳ ಮನ ಒಲಿಸುವ ಸಲುವಾಗಿ, ಜಿಎಸ್‌ಟಿಯ ಜಾರಿಯಿಂದ ರಾಜ್ಯಗಳಿಗೆ ಉಂಟಾಗುವ ತೆರಿಗೆ ಆದಾಯದ ನಷ್ಟವನ್ನು ಐದು ವರ್ಷಗಳ ಅವಧಿಯವರೆಗೆ ತುಂಬಿಕೊಡುತ್ತೇವೆ ಎಂದು ಕೇಂದ್ರ ಸರ್ಕಾರವು ರಾಜ್ಯಗಳಿಗೆ ಭರವಸೆ ಕೊಟ್ಟಿತ್ತು. ಈ ಉದ್ದೇಶಕ್ಕಾಗಿ ಒಂದು ಪರಿಹಾರ ನಿಧಿಯನ್ನೂ ಸ್ಥಾಪಿಸಲಾಗಿತ್ತು ಮತ್ತು ಕೆಲವು ನಿರ್ದಿಷ್ಟ ತೆರಿಗೆಗಳಿಂದ ಬರುವ ಹಣವನ್ನು ಈ ನಿಧಿಗೆ ತುಂಬುವ ಏರ್ಪಾಟನ್ನೂ ಮಾಡಲಾಗಿತ್ತು. ತೆರಿಗೆ ಆದಾಯದ ನಷ್ಟವನ್ನು ಲೆಕ್ಕ ಹಾಕುವ ಸಲುವಾಗಿ, ಒಂದು ಮೂಲ ವರ್ಷದ ತೆರಿಗೆ ಆದಾಯದ ಮೇಲೆ ಪ್ರತಿ ವರ್ಷವೂ 14% ತೆರಿಗೆ ಅದಾಯ ಹೆಚ್ಚುವ ಒಂದು ವಾಸ್ತವಿಕ ಅಂದಾಜಿನ ಮೇಲೆ, ರಾಜ್ಯಗಳಿಗೆ ಉಂಟಾಗುವ ತೆರಿಗೆ ಆದಾಯದ ನಷ್ಟವನ್ನು ಲೆಕ್ಕ ಹಾಕುವ ವಿಧಾನವನ್ನೂ ಒಪ್ಪಿಕೊಳ್ಳಲಾಗಿತ್ತು.

ಆದರೆ, ಕೇಂದ್ರ ಸರ್ಕಾರವು ಆಗಸ್ಟ್ ತಿಂಗಳಿನಿಂದೀಚೆಗೆ ರಾಜ್ಯಗಳಿಗೆ ಜಿಎಸ್‌ಟಿ ನಷ್ಟ ಪರಿಹಾರದ ಹಣ ಕೊಡುವುದನ್ನು ನಿಲ್ಲಿಸಿದೆ. ನಷ್ಟ ಪರಿಹಾರ ನಿಧಿಯಲ್ಲಿ ಸಾಕಷ್ಟು ಹಣವಿಲ್ಲ ಎಂದು ಹೇಳುತ್ತಿದೆ. ಆದರೆ, ರಾಜ್ಯಗಳಿಗೆ ತೆರಿಗೆ ಆದಾಯ ನಷ್ಟ ತುಂಬಿಕೊಡುವುದಾಗಿ ಕೇಂದ್ರ ಕೊಟ್ಟ ಭರವಸೆಗೂ ಮತ್ತು ನಿಧಿಯಲ್ಲಿ ಎಷ್ಟು ಹಣ ಇದೆ ಎಂಬುದಕ್ಕೂ ಸಂಬಂಧವಿಲ್ಲ; ನಷ್ಟ ತುಂಬಿಕೊಡುವ ಅಂಶವನ್ನು ಸಂವಿಧಾನ ತಿದ್ದುಪಡಿಯಲ್ಲಿ ನಮೂದಿಸಲಾಗಿತ್ತು; ನಷ್ಟ ಪರಿಹಾರ ನಿಧಿಯಲ್ಲಿ ಸಾಕಷ್ಟು ಹಣವಿಲ್ಲದಿದ್ದರೆ ಕೇಂದ್ರ ಸರ್ಕಾರವು ತನ್ನ ಪಾಲಿನ ಜಿಎಸ್‌ಟಿ ಆದಾಯದಿಂದಲೇ ಕೊಡಲಿ ಎಂದು ರಾಜ್ಯಗಳು ಹೇಳುತ್ತಿರುವುದು ಸರಿಯಾಗಿಯೇ ಇದೆ.

ಜಿಎಸ್‌ಟಿ ಜಾರಿಯಿಂದಾಗಿ ಪ್ರಸಕ್ತ ಹಣ ಕಾಸು ವರ್ಷದ ಹೆಚ್ಚಿನ ತಿಂಗಳುಗಳಲ್ಲಿ ಮಾಸಿಕ ತೆರಿಗೆ ಸಂಗ್ರಹವು ಒಂದು ಲಕ್ಷ ಕೋಟಿ ರೂ. ದಾಟುತ್ತಿಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯವೇ. ಜಿಎಸ್‌ಟಿಯಲ್ಲಿರುವ ನ್ಯೂನತೆಗಳ ಕಾರಣದಿಂದಾಗಿ ಮತ್ತು ಮಂದಗತಿಗೆ ಇಳಿದಿರುವ ಅರ್ಥವ್ಯವಸ್ಥೆಯ ಕಾರಣದಿಂದಾಗಿ ತೆರಿಗೆ ಸಂಗ್ರಹದಲ್ಲಿ ಕೊರತೆಯುಂಟಾಗುತ್ತಿದೆ. ಹಬ್ಬಗಳ ಕಾರಣದಿಂದಾಗಿ ವಹಿವಾಟು ಹೆಚ್ಚಿಗೆ ಇದ್ದ ನವೆಂಬರ್ ತಿಂಗಳಿನಲ್ಲಿ ಮಾತ್ರ ಒಂದು ಲಕ್ಷ ಕೋಟಿಗಿಂತಲೂ ಜಾಸ್ತಿ ತೆರಿಗೆ ಸಂಗ್ರಹವಾಗಿತ್ತು.

ಆದಾಯದ ಕೊರತೆಯನ್ನು ಎದುರಿಸುತ್ತಿರುವ ಕೇಂದ್ರ ಸರ್ಕಾರವು, ನಷ್ಟ ತುಂಬಿಕೊಡುವ ಸಂವಿಧಾನಿಕ ಭರವಸೆಯನ್ನು ಮುರಿದು, ತಲೆಯ ಮೇಲೆ ಮರಿಗಳನ್ನು ಹೊತ್ತಿದ್ದ ಕೋತಿಯೊಂದು ನೀರಿನ ಮಟ್ಟ ಮೂಗಿನವರೆಗೆ ಏರಿದಾಗ ಆ ಮರಿಗಳನ್ನೇ ನಿಂತ ಕಾಲ ಕೆಳಗೆ ಹಾಕಿಕೊಂಡು ಜೀವ ಉಳಿಸಿಕೊಳ್ಳುವ ಕೋತಿಯ ರೀತಿಯಲ್ಲಿ ರಾಜ್ಯಗಳನ್ನು ತುಳಿಯುತ್ತಿದೆ. ಅದರ ಜೊತೆಯಲ್ಲಿ, ಹಂಚಿಕೆಯಾಗಬೇಕಾದ ಸಂಯೋಜಿತ ಜಿಎಸ್‌ಟಿ(ಐಜಿಎಸ್‌ಟಿ) ಸಂಗ್ರಹದ ಸಿಂಹ ಪಾಲನ್ನು ಕೇಂದ್ರವೇ ಇಟ್ಟುಕೊಳ್ಳುತ್ತಿದೆ.

ಕೇಂದ್ರ ಸರ್ಕಾರದ ಇಂತಹ ಇಬ್ಬಗೆಯ ಹಿಂಡುವಿಕೆಯಿಂದಾಗಿ ರಾಜ್ಯಗಳ ಹಣಕಾಸಿನ ಪರಿಸ್ಥಿತಿ ಕಳವಳಕಾರಿಯಾಗಿದೆ. ಬಡವರ ಅರೋಗ್ಯ ರಕ್ಷಣೆ, ಶಿಕ್ಷಣ ಮುಂತಾದ ಕಲ್ಯಾಣ ಕಾರ್ಯಕ್ರಮಗಳ ವೆಚ್ಚದ ಹೆಚ್ಚಿನ ಭಾಗವನ್ನು ರಾಜ್ಯಗಳು ಭರಿಸುವ ಕಾರಣದಿಂದಾಗಿ, ರಾಜ್ಯಗಳ ಆದಾಯ ಇಳಿದಾಗ ಇಂತಹ ಕಲ್ಯಾಣ ಕಾರ್ಯಕ್ರಮಗಳ ವೆಚ್ಚಗಳ ಇಳಿಕೆಯು ಬಡವರನ್ನು ಇನ್ನೂ ಹೆಚ್ಚಿನ ಬಡತನಕ್ಕೆ ತಳ್ಳುತ್ತದೆ.

ಕೇಂದ್ರ ಸರ್ಕಾರವು ಸಾಲ ಮಾಡುವ ಮೂಲಕ (ಅಂದರೆ, ವಿತ್ತೀಯ ಕೊರತೆಯನ್ನು ಹೆಚ್ಚಿಸಿಕೊಳ್ಳುವ ಮೂಲಕ) ರಾಜ್ಯಗಳಿಗೆ ನಷ್ಟ ತುಂಬಿಕೊಡುವ ಭರವಸೆಯನ್ನು ಈಡೇರಿಸಿದ್ದರೆ, ಈ ರೀತಿಯಲ್ಲಿ ರಾಜ್ಯಗಳ ಹಿಂಡುವಿಕೆಯನ್ನು ತಪ್ಪಿಸಬಹುದಿತ್ತು. (ಬಂಡವಾಳಿಗರ ಮೇಲೆ ತೆರಿಗೆ ಹಾಕುವ ಕೆಚ್ಚೆದೆ ಕೇಂದ್ರ ಸರ್ಕಾರಕ್ಕೆ ಇಲ್ಲವೆಂಬ ಅಂಶವನ್ನು ಇತ್ತೀಚೆಗೆ ಅದು ಬಂಡವಾಳಿಗರಿಗೆ ಕೊಟ್ಟಿರುವ ತೆರಿಗೆ ವಿನಾಯ್ತಿಯ ಕ್ರಮವೇ ಸಾಬೀತು ಮಾಡುತ್ತದೆ). ವಿತ್ತೀಯ ಕೊರತೆಯನ್ನು ಹೆಚ್ಚಿಸಿಕೊಂಡು ಒಟ್ಟಾರೆ ಬೇಡಿಕೆಯನ್ನು ಉತ್ತೇಜಿಸಿ ಉದ್ಯೋಗ ಸೃಷ್ಠಿಸಬಹುದಿತ್ತು, ಅದೂ ಕೂಡ ಹಣದುಬ್ಬರಕ್ಕೆ ಎಡೆ ಇಲ್ಲದಂತೆ. ಇತ್ತೀಚೆಗೆ ಹಣದುಬ್ಬರ ನುಸುಳುತ್ತಿರುವುದು ನಿಜವಾದರೂ, ಅದು ನಿರ್ದಿಷ್ಟ ವಲಯಕ್ಕೆ (ಅದಕ್ಕೆ ಈರುಳ್ಳಿ ಒಂದು ಉದಾಹರಣೆ) ಸಂಬಂಧಿಸುತ್ತದೆ. ಸರಬರಾಜಿಗೆ ಸಂಬಂಧಿಸಿದ ಇಂತಹ ಸಮಸ್ಯೆಗಳನ್ನು ಪಡಿತರ ವ್ಯವಸ್ಥೆಯ ಮೂಲಕ ನಿವಾರಿಸಿಕೊಂಡು, ಹಣದುಬ್ಬರಕ್ಕೆ ಆಸ್ಪದವಿಲ್ಲದ ರೀತಿಯಲ್ಲಿ, ವಿತ್ತೀಯ ಕೊರತೆಯನ್ನು ಹೆಚ್ಚಿಸಿಕೊಳ್ಳಬಹುದಿತ್ತು.

ಆದರೆ, ವಿತ್ತೀಯ ಕೊರತೆಯನ್ನು ಈ ರೀತಿಯಲ್ಲಿ ಹೆಚ್ಚಿಸಿಕೊಳ್ಳುವುದನ್ನು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ಒಪ್ಪುವುದಿಲ್ಲ. ದೇಶದ ಅದೃಷ್ಟಹೀನ ಅಲ್ಪ ಸಂಖ್ಯಾತರ ಮೇಲೆ ಆರ್ಭಟಿಸುವ, ಜಬರ್ದಸ್ತು ಮಾಡುವ, ಆಡಂಬರದ ಗಂಡಸುತನ ತೋರಿಸುವ ಮೋದಿ ಸರ್ಕಾರವು ಹಣಕಾಸು ಬಂಡವಾಳದ ವಿರುದ್ಧ ನಿಲ್ಲುವ ಎದೆಗಾರಿಕೆ ಹೊಂದಿಲ್ಲ. ಹಣಕಾಸು ಬಂಡವಾಳವು ಮುಖ ಸಿಂಡರಿಕೊಳ್ಳುವಂತಹ ಯಾವ ಕ್ರಮವನ್ನೂ ಅದು ಕೈಗೊಳ್ಳುವುದಕ್ಕಿಂತ ರಾಜ್ಯಗಳ ಹಿಂಡುವಿಕೆಯನ್ನು ಇಷ್ಟಪಡುತ್ತದೆ; ಬಡವರ ಕಲ್ಯಾಣ ಕಾರ್ಯಕ್ರಮಗಳ ವೆಚ್ಚದ ಕಡಿತವನ್ನು ಇಷ್ಟಪಡುತ್ತದೆ. ಅದು, ಹಣಕಾಸು ಬಂಡವಾಳವು ಅರ್ಥವ್ಯವಸ್ಥೆಗೆ ಆಘಾತ ತಲುಪಿಸುವಂತಹ ಆಜ್ಞೆಗಳನ್ನು ಕೊಂಡೊಯ್ಯುವ ಕೊಳವೆಯ ಪಾತ್ರ ವಹಿಸಿದೆ ಮತ್ತು ನವ ಉದಾರ ಆಳ್ವಿಕೆಯ ವಿಕೃತಿಯ ಪ್ರಭಾವ ಸ್ಪಷ್ಟವಾಗಿ ಕಾಣುತ್ತದೆ.

ನ್ಯಾಟೋ 70 ನೇ ವಾರ್ಷಿಕೋತ್ಸವ

ನ್ಯಾಟೋದ ಅನೈಕ್ಯತೆಯಲ್ಲ, ಯುದ್ಧಕೋರತನ ಸುದ್ದಿಯಾಗಬೇಕು



ಕಳೆದ ವಾರ ನ್ಯಾಟೋ (ನಾರ್ಥ್ ಅಟ್ಲಾಂಟಿಕ್ ಟ್ರೀಟಿ ಆರ್ಗನೈಸೇಶನ್ – ಉತ್ತರ ಅಟ್ಲಾಂಟಿಕ್ ಒಪ್ಪಂದ ಸಂಘಟನೆ) ಸದಸ್ಯ ರಾಷ್ಟಗಳ ಮುಖ್ಯಸ್ಥರು ತಮ್ಮ ಮಿಲಿಟರಿ ಕೂಟದ 70 ನೇ ವಾರ್ಷಿಕೋತ್ಸವವನ್ನು ಆಚರಿಸುವ ಸಲುವಾಗಿ ಲಂಡನ್ ನಗರ ದಲ್ಲಿ ಡಿಸೆಂಬರ್ 3–4ರಂದು ಸಭೆ ಸೇರಿದ್ದರು. ಸಭೆಯಿಂದ ಹೊರಬಂದ ಮುಖ್ಯ ಸುದ್ದಿಗಳು, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರ ಸುತ್ತಾ–ಸುತ್ತಾಡಿವೆ. ನ್ಯಾಟೋ ಕಾರ್ಯವೈಖರಿ ಕುರಿತಂತೆ, ಸದಸ್ಯ ರಾಷ್ಟಗಳು ಟ್ರಂಪ್ ರ ನಡವಳಿಕೆಯನ್ನು ಪ್ರಶ್ನಿಸಿದ್ದಾರೆ.

ನ್ಯಾಟೋ ಸದಸ್ಯ ರಾಷ್ಟಗಳು, "ಮೈತ್ರಿ ಪಿಗ್ಗಿ ಬ್ಯಾಂಕ್" ಗೆ ತಮ್ಮ ಕೊಡುಗೆಗಳನ್ನು ಹೆಚ್ಚಿಸಬೇಕೆಂಬುದು ಟ್ರಂಪ್ ರ ಪ್ರಸ್ತಾಪವಾಗಿತ್ತು. ನ್ಯಾಟೋ ಕೂಟದ ಬಹುಪಾಲು ಖರ್ಚನ್ನು ಯುಎಸ್ ವಹಿಸುತ್ತದೆ. ಯುರೋಪಿಯನ್ ಸದಸ್ಯ ರಾಷ್ಟಗಳ ಕೊಡುಗೆ ಏನೇನೂ ಇಲ್ಲ ಎಂದು ಟ್ರಂಪ್ ಆರೋಪಿಸಿದರಂತೆ. ಇದನ್ನು ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ ಹಾಗೂ ಪ್ರೆಂಚ್ ನ ಅಧ್ಯಕ್ಷ ಮ್ಯಾಕ್ರನ್ ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಆಗ ಟ್ರಂಪ್ ಕೆನಡಾ ಪ್ರಧಾನಿ ಜಸ್ಟಿನ್ ನನ್ನು, ಇವನೊಬ್ಬ "ಎರಡು ಮುಖ" ದ ವ್ಯಕ್ತಿ ಎಂದಿದ್ದಾರೆ. ಹಾಗೆಯೇ, ಫ್ರೆಂಚ್ ಅಧ್ಯಕ್ಷ ಮ್ಯಾಕ್ರಾನ್ ಸೋವಿಯತ್ ಒಕ್ಕೂಟ ಪತನದ ನಂತರ, ನ್ಯಾಟೋ ಸಮರ್ಥ ನಾಯಕತ್ವವಿಲ್ಲದ 'ಮೆದುಳು ಸತ್ತ' ಸಂಘಟನೆಯಂತಾಗಿದೆ, ಮತ್ತು ಯುಎಸ್ ಏಕಪಕ್ಷೀಯ ನಿರ್ಣಯಗಳನ್ನು ತೆಗೆದುಕೊಳ್ಳುತ್ತದೆ ಎಂದು ಟೀಕಿಸಿದ್ದು, ಇದು ಟ್ರಂಪ್ ರನ್ನು ಕೆಣಕಿದಂತಾಗಿ, ಮ್ಯಾಕ್ರನ್ ನ ಹೇಳಿಕೆಗಳು 'ಅಸಹಜ ಮತ್ತು ಅಸಹ್ಯ ಹುಟ್ಟಿಸುತ್ತವೆ' ಎಂದಿದ್ದಾರೆ.

ಮಾಧ್ಯಮಗಳು, ನ್ಯಾಟೋ ಕೂಟದೊಳಗಿನ ಬಿಕ್ಕಟ್ಟು ಅನೈಕ್ಯತೆಗಳ ವದಂತಿಗಳ ಮೇಲೆ ಒತ್ತು ಕೊಟ್ಟಿವೆ. ಕೆಲವು ಮಾಧ್ಯಮಗಳು ಮುಂದೆ ಹೋಗಿ, ಯುರೋಪ್ ಮತ್ತು ಜಗತ್ತಿನಾದ್ಯಂತ, ಪ್ರಜಾಪ್ರಭುತ್ವ ಮತ್ತು ವಿಶ್ವಶಾಂತಿಯ ದೀರ್ಘಕಾಲದ ಖಾತರಿಯನ್ನು, ಟ್ರಂಪ್ ನ್ಯಾಟೋ ಸಭೆಯಲ್ಲಿ ವ್ಯಕ್ತಪಡಿಸಿದ್ದಾರೆ ಎಂದು ಬಿಂಬಿಸಿವೆ. ನ್ಯಾಟೋದೊಳಗಿನ ಭಿನ್ನಾಭಿಪ್ರಾಯಗಳು ಹಣ ಹೂಡಿಕೆಯ ಮತ್ತು ಕೆಲವು ಕ್ರಮಗಳ ಬಗೆಗೆ ವಿನಹ, ಅದರ ಮೂಲ ಉದ್ದೇಶಗಳ ಬಗೆಗೆ ಅಲ್ಲ. ಫ್ರೆಂಚ್ ಅಧ್ಯಕ್ಷರ "ಏಕಪಕ್ಷಿಯ ಕ್ರಮ"ಗಳ ಬಗ್ಗೆ ಟೀಕೆ ಸಹ ಸಿರಿಯಾದಿಂದ ಟ್ರಂಪ್ ಅಮೆರಿಕದ ಪಡೆಗಳನ್ನು ಹಿಂತೆಗೆದುಕೊಂಡದರ ಬಗ್ಗೆ ಆಗಿತ್ತು. ಸಿರಿಯಾದಲ್ಲಿ 'ಸರಕಾರ ಬದಲಾವಣೆ'ಯ ಉದ್ದೇಶದ ಯುದ್ಧ ಆರಂಭಿಸಿದ್ದಕ್ಕೆ ಅಲ್ಲ ಎಂಬುದನ್ನು ಇಲ್ಲಿ ಗಮನಿಸಬಹುದು.

ನ್ಯಾಟೋ ದ ಮೂಲ ಉದ್ದೇಶ ಯುಎಸ್ ಯುದ್ಧಕೋರ ನೀತಿಗೆ ಬೆಂಬಲ

ನ್ಯಾಟೋ ಕಳೆದ ಏಳು ದಶಕಗಳಿಂದ, ಅಂದರೆ 1949ರಲ್ಲಿ ಅದರ ಸ್ಥಾಪನೆಯಾದಂದಿನಿಂದ, ಯುಎಸ್ ನ ವಿದೇಶಾಂಗ ನೀತಿಯನ್ನು ಅಂದರೆ, ಯುದ್ಧದ ಉನ್ಮಾದ ನೀತಿಗಳನ್ನು ಪ್ರತಿನಿಧಿಸುತ್ತಿರುವ ಸಂಸ್ಥೆಯಾಗಿದೆ. ಇದು ಸಾಮ್ರಾಜ್ಯಶಾಹಿ ಯುಎಸ್ ನ ಅಣತಿಯಂತೆ ಕಾರ್ಯನಿರ್ವಹಿಸುತ್ತಿದೆ. ವಿಶ್ವ ಶಾಂತಿ ಅಥವಾ ಅಭಿವೃದ್ಧಿ ಪಡಿಸುವ ಉದ್ದೇಶವಂತು ನ್ಯಾಟೋ ಗೆ ಇಲ್ಲವೇ ಇಲ್ಲ. ಬದಲಾಗಿ, ಯು. ಎಸ್. ರೂಪಿಸಿದ ಅದರ ದೇಶಿಯ ಮಿಲಿಟರಿ, ಆರ್ಥಿಕ ಮತ್ತು ರಾಜಕೀಯ ನಿಗಮ, ಸಂಸ್ಥೆ ಮತ್ತು ವಿಧಾನಗಳ ಮೂಲಕ ಜಗತ್ತಿನಾದ್ಯಂತ ಯುಎಸ್ ನ ನೀತಿಗಳನ್ನು ತಿರಸ್ಕರಿಸುವ ದೇಶಗಳ ಮೇಲೆ, ಆರ್ಥಿಕ ನಿರ್ಬಂಧಗಳನ್ನು ಹೇರಿ, ಯುದ್ಧದ ಬೆದರಿಕೆ ಒಡ್ಡಿ, ವಿಶ್ವ ಸಂಸ್ಥೆಯ ನೀತಿ ನಿಯಮಗಳನ್ನು ಉಲಂಘಿಸಿ ಯದ್ದ ನಡೆಸುವುದು ಇದರ ಪ್ರಮುಖ ಗುರಿ. ಆ ಮೂಲಕ ಯುಎಸ್ ನ ಪ್ರಾಬಲ್ಯವನ್ನು ಹೆಚ್ಚಿಸುವ ಹಾಗೂ ಜಗತ್ತಿಗೆ ತೋರಿಸುವ ಸಾಧನವಾಗಿಯೇ ನ್ಯಾಟೋ ತನ್ನ ಕಾರ್ಯ ನಿರ್ವಹಣೆ ಮಾಡುತ್ತಾ ಬಂದಿದೆ.

ಯುಎಸ್ ನ ಯುದ್ಧ ಉನ್ಮಾದದ ವಿದೇಶಾಂಗ ನೀತಿಗೆ ಸಂಪೂರ್ಣವಾಗಿ ಬೆಂಬಲಿಸುತ್ತಾ, ನ್ಯಾಟೋ ಇಲ್ಲಿಯವರೆಗೂ ಕೆಲಸ ಮಾಡಿಕೊಂಡು ಬಂದಿದೆ ಎಂಬುದಕ್ಕೆ ಸಾಕಷ್ಟು ಉದಾಹರಣೆಗಳನ್ನು ನೀಡಬಹುದು. ಪ್ರಮುಖವಾಗಿ ಇರಾಕ್, ಸೆರ್ಬಿಯಾ, ಕ್ರೊಯೇಷಿಯಾ, ಲಿಬಿಯಾ, ಸಿರಿಯಾ ಅಥವಾ ಅಫ್ಘಾನಿಸ್ತಾನ ಇವೆಲ್ಲಾ ದೇಶಗಳ ಮೇಲೆ ಯುಎಸ್ ನಡೆಸಿರುವ ಯುದ್ಧಗಳಲ್ಲಿ ನ್ಯಾಟೋ ದ ಪಾತ್ರವನ್ನು ಕಡೆಗಣಿಸುವಂತಿಲ್ಲ. ಪ್ರಸ್ತುತ ಅದು, ಯುಎಸ್ ನಾಯಕತ್ವದಲ್ಲಿ ರಷ್ಯಾದ ಗಡಿಗಳಲ್ಲಿ ನಡೆಯುತ್ತಿರುವ ಯುದ್ದದ ಆಟಗಳಲ್ಲಿ, ತನ್ನ ಲಕ್ಷಾಂತರ ಸೈನಿಕರನ್ನು ಬೀಡು ಬಿಟ್ಟಿದೆ. ಮಾತ್ರವಲ್ಲದೆ, ಶಸ್ತ್ರಾಸ್ತ್ರ ಗಳನ್ನು ನ್ಯಾಟೋ ಪೂರೈಸುತ್ತಿದೆ. ಮಧ್ಯ ಪ್ರಾಚ್ಯದಲ್ಲಿ ಯುಎಸ್ ಮಿಲಿಟರಿ ಕಾರ್ಯಾಚರಣೆಯನ್ನು ಬೆಂಬಲಿಸುವ ಮೂಲಕ ಯುದ್ದದ ವಾತಾವರಣ ಸೃಷ್ಟಿಸುವಲ್ಲಿ ತನ್ನ ಪಾತ್ರವನ್ನು ಚಾಚೂ ತಪ್ಪದೆ ನಿರ್ವಹಣೆ ಮಾಡಿಕೊಂಡು ಬರುತ್ತಿರುವುದು ಜಗಜ್ಜಾಹಿರ ಸಂಗತಿಯಾಗಿದೆ.



ನಾಗರಾಜ ನಂಜುಂಡಯ್ಯ

ಕಳೆದ ಎಪ್ಪತ್ತು ವರ್ಷಗಳಲ್ಲಿ, ಯುಎಸ್ ವಿದೇಶಾಂಗ ನೀತಿಯ ಭಾಗವಾಗಿಯೇ ನ್ಯಾಟೋ ಕಾರ್ಯ ನಿರ್ವಹಿಸುತ್ತಿದೆಯೇ ಹೊರತು, ವಿಶ್ವಶಾಂತಿ ಕಾಪಾಡುವುದು ಅಥವಾ ಪ್ರಜಾಪ್ರಭುತ್ವ ಎತ್ತಿಹಿಡಿಯುವುದು ಇದರ ಉದ್ದೇಶ ವಾಗಿಲ್ಲ. ಬದಲಿಗೆ, ಯುದ್ದದ ಮೂಲಕ ಲಕ್ಷಾಂತರ ನಿರಾಶ್ರಿತರ ಸ್ಥಳಾಂತರಕ್ಕೆ ಮತ್ತು ಬೃಹತ್ ಮಾನವ ಸಂಕಟ ಮತ್ತು ನಂಬಲಾಗದಷ್ಟು ಸಾವುಗಳಿಗೆ ಕಾರಣವಾಗಿದೆ. ಒಟ್ಟಾರೆಯಾಗಿ ಹೇಳಬೇಕೆಂದರೆ, ಬಂಡವಾಳಶಾಹಿ ವ್ಯವಸ್ಥೆಯ ಮಿಲಿಟರಿಯ ರಕ್ಷಕನಾಗಿ, ಹಿಂದಿನ ಪೂರ್ವ ಯುರೋಪಿನ ಸಮಾಜವಾದಿ ದೇಶಗಳ ವಿನಾಶಕ್ಕೆ ಇದು ಅಪಾರವಾದ ಕೊಡುಗೆ ನೀಡಿದೆ. ಇದೊಂದು ಅಂತರಾಷ್ಟ್ರೀಯ ಕಾನೂನು ಬಾಹಿರ ಸಂಸ್ಥೆ ಯಾಗಿದೆ. ಯುಎಸ್ ರೀತಿಯಲ್ಲಿಯೇ, ಇದು ಕೂಡಾ ವಿಶ್ವ ಸಂಸ್ಥೆಯ ಕಾನೂನುಗಳನ್ನು ಉಲಂಘಿಸಿ, ಅನೇಕ ಅಕ್ರಮ ಯುದ್ಧಗಳನ್ನು ನಡೆಸಿದೆ. ಅಲ್ಲದೆ, ತನ್ನ ಸದಸ್ಯ ರಾಷ್ಟವೊಂದರ ಮೇಲೆ ಮಿಲಿಟರಿ ದಾಳಿ ನಡೆದಾಗ, ಅದರ ರಕ್ಷಣೆಗಾಗಿ ಮಾತ್ರ ನ್ಯಾಟೋ ಕೂಟ ಯುದ್ಧಕ್ಕೆ ತೊಡಗಬಹುದು ಎಂಬ ಅದರ ಸಂವಿಧಾನದವನ್ನೂ ಉಲಂಘಿಸುತ್ತಿದೆ. ಆದರೆ, ನ್ಯಾಟೋ ಸದಸ್ಯ ರಾಷ್ಟಗಳ ಮೇಲೆ ಇಲ್ಲಿಯವರೆಗೆ ಯಾವುದೇ ಮಿಲಿಟರಿ ದಾಳಿ ನಡೆದಿಲ್ಲ. ಮೂಲಭೂತ ವಾಗಿ ನ್ಯಾಟೋ ಕೈಗೊಂಡ ಪ್ರತಿಯೊಂದು ಮಿಲಿಟರಿ ದಾಳಿಯಲ್ಲೂ ಅಂತರರಾಷ್ಟ್ರೀಯ ಕಾನೂನಿನ ಉಲಂಘಿಸಲ್ಪಟ್ಟಿದೆ. ನ್ಯಾಟೋ ಸ್ಥಾಪನೆಯಾದಾಗಿನಿಂದ ಯುಎಸ್ ನಡೆಸಿರುವ ಎಲ್ಲಾ ಕಾನೂನು ಬಾಹಿರ ಯುದ್ಧಗಳಲ್ಲಿ ಇದು ಪ್ರಮುಖ ಪಾತ್ರವಹಿಸಿದೆ.

ಇದೀಗ ಲಂಡನ್ನಿನಲ್ಲಿ ನಡೆದ ಸಭೆಯಲ್ಲಿ, ಈ ಸತ್ಯಗಳನ್ನು ಜಗತ್ತಿನ ಜನತೆಯ ಬಳಿಗೆ ಕೊಂಡೊಯ್ಯುವ ಬದಲು ಮಾಧ್ಯಮಗಳು ಟ್ರಂಪ್ ಮತ್ತು ಫ್ರೆಂಚ್ ನ ಅಧ್ಯಕ್ಷ ಮ್ಯಾಕ್ರನ್ ನಡುವಿನ ಬಿನ್ನಾಭಿಪ್ರಾಯಗಳ ಬಗ್ಗೆ ಹೆಚ್ಚು ಸುದ್ದಿ ಮಾಡಿವೆ. ಪ್ರೆಂಚ್ ತನ್ನ " ನ್ಯಾಯಯುತ ಪಾಲ" ನ್ನು "ಮೈತ್ರಿ ಪಿಗ್ಗಿ ಬ್ಯಾಂಕ್ " ಗೆ ಪಾವತಿಸುತ್ತಿತ್ತು. ಆದರೆ, ಪಾವತಿಸಿದ ನಂತರ ಆ ಹಣ ಯಾವ ಖಾತೆಗೆ ಹೋಗುತ್ತದೆ ಎಂಬುದರ ಬಗ್ಗೆ ಎಂದಿಗೂ ತಲೆಕೆಡಿಸಿಕೊಂಡಿಲ್ಲವೆಂದು ಮ್ಯಾಕ್ರನ್ ಹೇಳಿದ್ದು ದೊಡ್ಡ ಸುದ್ದಿಯಾಗಿದೆ.

ಈ ಮದ್ಯೆ ಕಾರ್ಪೊರೇಟ್ ಮಾಧ್ಯಮಗಳು ನ್ಯಾಟೋ ಮಿಲಿಟರಿ ಕೂಟದ ಬಗ್ಗೆ ಮಾತನಾಡುವಾಗ, ಸಾಮಾನ್ಯವಾಗಿ ಸುಳ್ಳು ನಿರೂಪಣೆಗಳನ್ನು ಮುಂದಿಡುತ್ತಾರೆ. ಉದಾಹರಣೆಗೆ, ಸೋವಿಯತ್ ಒಕ್ಕೂಟದ ಅಕ್ರಮಣಶೀಲತೆಗೆ ಪ್ರತಿಕ್ರಿಯೆಯಾಗಿ ನ್ಯಾಟೋ ರಚನೆಯಾಯಿತು ಎಂದು ಹೇಳುತ್ತಾರೆ. ಆದರೆ, 1949 ರಲ್ಲಿ ನ್ಯಾಟೋ ಮೈತ್ರಿ ಸ್ಥಾಪನೆಯಾದಾಗ, ಸೋವಿಯತ್ ಒಕ್ಕೂಟವು, ಹಿಟ್ಲರ್ ಮತ್ತು ನಾಜಿಗಳೊಂದಿಗಿನ ಸಮರದಲ್ಲಿ ತನ್ನ 2.5 ಕೋಟಿ ಜನರನ್ನು ಕಳೆದುಕೊಂಡಿತ್ತು. ಆಗ, ಜರ್ಮನಿಯನ್ನು ಹೊರತು ಪಡಿಸಿ ಜರ್ಮನ್ ಫ್ಯಾಸಿಸಂ ನ ಕೂಟದ ವಿರುದ್ಧ ಹೋರಾಟದಲ್ಲಿ ನ್ಯಾಟೋ ವನ್ನು ಸ್ಥಾಪಿಸಿದ ರಾಷ್ಟಗಳು ಸೋವಿಯತ್ ಒಕ್ಕೂಟ ದೊಂದಿಗೆ ಮೈತ್ರಿ ಮಾಡಿಕೊಂಡು ಬೆಂಬಲ ನೀಡಿದ್ದವು ಎಂಬುದನ್ನು ಮಾಧ್ಯಮಗಳು ಮರೆಮಾಚುತ್ತವೆ. ಸೋವಿಯೆಟ್ ಒಕ್ಕೂಟ ಮತ್ತು ಈ ದೇಶಗಳ ನಡುವೆ ಯಾವುದೇ ವೈರತ್ವ ಇರಲಿಲ್ಲ, ಬದಲಾಗಿ ಮೈತ್ರಿ ಇತ್ತು.

1949 ರ ಹೊತ್ತಿಗೆ ಬದಲಾದ ಸನ್ನಿವೇಶದಲ್ಲಿ, ನ್ಯಾಟೋ ದ ಸಂಸ್ಥಾಪಕ ಸದಸ್ಯ ದೇಶಗಳ ಬಂಡವಾಳ ಶಾಹಿಗಳಿಗೆ, ಆ ಸಂದರ್ಭದಲ್ಲಿ, ಒಂದಾದ ಮೇಲೊಂದರಂತೆ ಯುರೋಪಿನ ದೇಶಗಳಲ್ಲಿ ಎಡ ಪಂಥದ ಬೆಳೆಯುತ್ತಿರುವುದು ಮತ್ತು ರಾಜಕೀಯ ಅಧಿಕಾರವನ್ನು ಎಡ ತೆಕ್ಕೆಗೆ ತೆಗೆದುಕೊಳ್ಳುತ್ತಿದ್ದದ್ದು, ಆತಂಕವನ್ನು ಉಂಟು ಮಾಡಿತ್ತು. ಇದರ ಜೊತೆಗೆ, ಅವು ವಸಾಹತುಗಳಲ್ಲಿ ಜಗತ್ತಿನಾದ್ಯಂತ ತಮ್ಮ ಯಜಮಾನಿಕೆಯನ್ನು ಕಳೆದುಕೊಳ್ಳುತ್ತಿದ್ದವು. ಈ ಹಿನ್ನೆಲೆಯಲ್ಲಿ ಯುಎಸ್ ಮತ್ತು ಯುರೋಪಿಯನ್ ಒಕ್ಕೂಟದ ಬಂಡವಾಳಶಾಹಿಗಳು, ಪಾಶ್ಚಿಮಾತ್ಯ ದೇಶಗಳ ಐಕ್ಯತೆಯನ್ನು ಬೆಳೆಸಲು ನ್ಯಾಟೋ ವನ್ನು ರಚಿಸಿದರು. ಆಗ, ಸಾಧ್ಯವಾದಷ್ಟು ವಿಶ್ವದ ಆರ್ಥಿಕತೆ ಮತ್ತು ರಾಜಕೀಯ ನಿಯಂತ್ರಣವನ್ನು ತಮ್ಮ ಪ್ರಾಬಲ್ಯದಲ್ಲಿಯೇ ಕಾಪಾಡಿ ಕೊಳ್ಳುವುದು ಇದರ ಮೂಲ ಉದ್ದೇಶವೇನಾಗಿತ್ತು. ಹಾಗೆಯೇ, 20 ನೇ ಶತಮಾನವು, ಸಮಾಜವಾದದ ಮೇಲೆ ಬಂಡವಾಳಶಾಹಿ ವಿಜಯವನ್ನು ಕಂಡ ಶತಮಾನವೆಂದು ಖಚಿತ ಪಡಿಸಿಕೊಳ್ಳುವುದು ನ್ಯಾಟೋ ಗೆ ಅಗತ್ಯವಾಗಿತ್ತು. ವಾಸ್ತವವೇನೆಂದರೆ, 1949 ರಲ್ಲಿ ನ್ಯಾಟೋ ಪ್ರಾರಂಭಗೊಂಡಾಗ, ಸೋವಿಯತ್ ಒಕ್ಕೂಟ ದಿಂದ ಆಕ್ರಮಣಶೀಲತೆಯ ಬೆದರಿಕೆ ಇರಲೇ ಇಲ್ಲವೆಂದು ಹೇಳಬಹುದು.

ಹಾಗಾದರೆ, ನ್ಯಾಟೋ ವನ್ನು ಪ್ರಾರಂಭಿಸಲು ಸೋವಿಯತ್ ಆಕ್ರಮಣಕಾರಿತನವೇ ನಿಜವಾದ ಕಾರಣವಾಗಿದ್ದರೆ, ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನಲ್ಲಿ ಸಮಾಜವಾದಿ ರಾಷ್ಟ್ರ ಗಳು

⇨⇨⇨



'ಕ್ಲಾಸಿಕ್ಸ್' ಅಧ್ಯಯನದ ಬೆನ್ನು ಹತಿ.... ಪುಟ 6 ರಿಂದ

ಕೃತಿಯನ್ನಿಟ್ಟು ಆಯ್ದ 50 ಜನರಿಗೆ ಬೆಂಗಳೂರಿನ ಹೊರವಲಯದಲ್ಲಿ ಮೂರು ದಿನಗಳ ಓದು-ಅಧ್ಯಯನ ಶಿಬಿರ ಸಂಘಟಿಸಲಾಗಿತ್ತು. ಚರ್ಚೆ, ಪ್ರಶ್ನೋತ್ತರ, ಸಂವಾದದ ರೀತಿಯಲ್ಲಿ ಈ ಶಿಬಿರವನ್ನು ಸಂಘಟಿಸಿದ್ದು, ವಿಶಿಷ್ಟ ಅನುಭವ ನೀಡಿದೆ.

ಮಾರ್ಕ್ಸ್‌ರವರ ಮೇರು ಕೃತಿ ದಾಸ್ ಕ್ಯಾಪಿಟಲ್‌ನ ಮೊದಲ ಸಂಪುಟ ಮುದ್ರಣದ 150 ವರ್ಷಗಳ ತರುವಾಯ ಕನ್ನಡಕ್ಕೆ ಬಂದಿದೆ. ಆದರೆ ಅದರ 'ಗಾತ್ರ' ಲಗೇ ರಹೋ ಮುನ್ನಾಭಾಯ್ ನಂತೆ ಸಾಮಾನ್ಯ ಓದುಗರನ್ನು ಸೆಳೆಯುವುದು ತುಸು ಕಷ್ಟ. ಮಾರ್ಕ್ಸ್ ಕೃತಿಗಳು ಕಬ್ಬಿಣದ ಕಡಲೆ ಎಂಬ ಗುಮ್ಮ ಹೊಕ್ಕಿರುವ ಸಂದರ್ಭದಲ್ಲಿ ಅದನ್ನು ಓದಿಸುವುದು ಸವಾಲಿನ ಕೆಲಸವೇ ಸರಿ. ಈ ದಿಸೆಯಲ್ಲಿ ಬಂಡವಾಳ ಕೃತಿ ಮೊದಲ ಸಂಪುಟವನ್ನು ಓದಿಸುವುದು ಮತ್ತು ಅದನ್ನು ಅರ್ಥ ಮಾಡಿಸುವ ವಿಶಿಷ್ಟ ಪ್ರಯತ್ನಕ್ಕೆ ಕೈ ಹಾಕಲಾಯಿತು.

'ಬಂಡವಾಳ' ಮೊದಲ ಸಂಪುಟದ 8 ಅಧ್ಯಾಯಗಳನ್ನು ತಿಂಗಳಿಗೊಂದರಂತೆ 8 ತರಗತಿಗಳು, 60 ಜನರಿಗೆ ಓದಿ ಹೇಳುವ ಜತೆಗೆ ಅದನ್ನು ವಿವರಿಸಿ ಅರ್ಥಮಾಡಿಸುವ ಹೊಸ ಪ್ರಯೋಗ ಆರಂಭವಾಯಿತು. ಇದನ್ನು ವಿವರಿಸಿ ಹೇಳುವವರು ಯಾರು? ಪಾಠ ಮಾಡುವ ಮೇಷ್ಟ್ರು ಬೇಕಲ್ಲವೇ? ಆ ಮೇಷ್ಟ್ರುಗಳಿಗೂ ಇದು ಹೊಸ ಅನುಭವ. ಆದರೂ ಇದೊಂದು ಪ್ರಯೋಗಲ್ಲವೇ! ಡಾ.ಕೆ.ಪ್ರಕಾಶ್, ಕೆ.ಎನ್.ಉಮೇಶ್ ಮತ್ತು ಮೀನಾಕ್ಷಿ ಸುಂದರಂ 8 ಅಧ್ಯಾಯಗಳನ್ನು ಹಂಚಿಕೊಂಡಿದ್ದರು. ಪ್ರತಿ ಪಾಠಕ್ಕೂ ನೋಟ್ಸ್ ಕೊಡಲಾಗಿತ್ತು. ಪಿಪಿಟಿ ಪ್ರಸ್ತುತಿ ಇದ್ದುದು, ಹಾಗೂ ಚರ್ಚೆ ಸಂವಾದಕ್ಕೆ ಹೆಚ್ಚು ಸಮಯ ನೀಡಿದ್ದರಿಂದ ಇಡಿಯಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿದೆ. ಜತೆಗೆ ಕೆಲವೊಮ್ಮೆ ಹಿಂದಿನ ಅಧ್ಯಾಯವನ್ನು ವಿದ್ಯಾರ್ಥಿಗಳಲೊಬ್ಬರು 20 ನಿಮಿಷಗಳ ಕಾಲ ರಿವಿಷನ್ ಮಾಡುವ ಪ್ರಯೋಗವೂ ನಡೆಯಿತು. ಅದೂ ಸಹಕಾರಿ ಆಗಿದೆ.

ಬಂಡವಾಳ ಕೃತಿ 'ಸರಕು' ಎಂಬ ಅಧ್ಯಾಯದಿಂದ ಆರಂಭವಾಗಿ 'ಬಂಡವಾಳದ ಆದಿಮ ಶೇಖರಣೆ' ಎಂಬ 8 ಅಧ್ಯಾಯಗಳಲ್ಲಿ ಬಂಡವಾಳಷಾಹಿ ವ್ಯವಸ್ಥೆಯ ಶೋಷಣೆಯ ಆಳ-ಅಗಲವನ್ನು ವಿಶ್ಲೇಷಿಸುತ್ತದೆ. ಮಾರ್ಕ್ಸ್, ಬಂಡವಾಳಷಾಹಿಯ ಸಮರ್ಥಕರಿಗೆ ತಕ್ಕ ಉತ್ತರವನ್ನೂ ಕೊಡುತ್ತಾ, ಎಳೆಎಳೆಯಾಗಿ ವಿವರಿಸುವ ಪರಿ ಅಸಾಧಾರಣವಾದುದು. ಓದುವಾಗ ವಿವರಣೆಗಳು ತುಸು ಹೆಚ್ಚು ಎನಿಸುವುದುಂಟು, ಆದರೆ, ತಾನು ಪ್ರತಿಪಾದಿಸುವ ವಾದದ ಸಮರ್ಥನೆಗೆ ಅದು ಅಗತ್ಯವೂ ಎಂದು ಆ ಅಧ್ಯಾಯ ಮುಗಿಸುವಾಗ ಓದುಗನಿಗೆ ಅನಿಸದಿರದು. ತನ್ನ ವಾದ ಸರಣಿಯನ್ನು ಮುಳ್ಳಿನ ಮೇಲಿನ ಬಟ್ಟೆಯನ್ನು ತೆಗೆಯುವಂತೆ ಮಾರ್ಕ್ಸ್ ನಿಧಾನವಾಗಿ ಒಂದೊಂದನ್ನೇ ಬಿಡಿಸುತ್ತಾ, ಬಿಡಿಸುವಾಗ ಅದಕ್ಕೆ ಸಂಬಂಧಿಸಿದ ಉದಾಹರಣೆಗಳನ್ನು ಪೋಣಿಸುತ್ತಾ ಬಂಡವಾಳಷಾಹಿಯನ್ನು ಬೆತ್ತಲು ಮಾಡಿ ಕಟಕಟೆಯಲ್ಲಿ ತಂದು ನಿಲ್ಲಿಸುತ್ತಾರೆ.

ಈ ಪ್ರಯೋಗ ಸಾಕಷ್ಟು ನಿರೀಕ್ಷೆಗಳನ್ನು ಹುಟ್ಟಿಹಾಕಿದೆ. ಬಂಡವಾಳ ಕೃತಿಯನ್ನು ಸರಳೀಕರಿಸಿ ಅದರ ಒಟ್ಟು ಕೆನೆಯನ್ನು ಪುಸ್ತಕ ರೂಪದಲ್ಲಿ ಹೊರತರುವ ಹಾಗು 'ಬಂಡವಾಳ'ದ ಉಳಿದೆರಡು ಸಂಪುಟಗಳನ್ನು ಇದೇ ಮಾದರಿಯಲ್ಲಿ ಪ್ರಸ್ತುತಪಡಿಸುವ ಬಗ್ಗೆ ಚರ್ಚೆ ನಡೆದಿದೆ. ಈ ಪ್ರಕ್ರಿಯೆಯಲ್ಲಿ ಹೊಸ ಉಪನ್ಯಾಸಕರನ್ನು ತೆರೆಗೆ ತರುವ, ಹೊಸ ಮಾದರಿಯಲ್ಲಿ ಪ್ರಸ್ತುತಪಡಿಸುವ ಪ್ರಯತ್ನಕ್ಕೆ ಇದು ಮುನ್ನುಡಿ ಬರೆದಿದೆ.

ಇತ್ತೀಚೆಗೆ ಸಿಪಿಐ(ಎಂ) ಪಕ್ಷದ ಕಾರ್ಯಕ್ರಮ ಓದು ಎರಡು ದಿನಗಳ ಶಿಬಿರ ಸಂಘಟಿಸಲಾಗಿತ್ತು. ಜಿಲ್ಲಾ ಸಮಿತಿ ಸದಸ್ಯರು, ವಲಯ/ತಾಲ್ಲೂಕು ಸಮಿತಿ ಸದಸ್ಯರು ಹಾಗು ಶಾಖಾ ಕಾರ್ಯದರ್ಶಿಗಳಿಗೆ ಇದನ್ನು ಸೀಮಿತಗೊಳಿಸಲಾಗಿತ್ತು. ಇದೀಗ ಹಲವು ವಲಯ ಮತ್ತು ತಾಲ್ಲೂಕು ಸಮಿತಿ ವ್ಯಾಪ್ತಿಗಳಲ್ಲಿ ವಾರದ ತರಗತಿಗಳನ್ನು ನಡೆಸಲಾಗುತ್ತಿದೆ. ಕ್ಲಾಸಿಕ್ಸ್ ಮಾತ್ರವಲ್ಲದೇ ಸಮಕಾಲೀನ ವಿಚಾರಗಳ ಕುರಿತಾಗಿಯೂ ತರಗತಿ, ಉಪನ್ಯಾಸಗಳು ನಡೆಯುತ್ತಿವೆ.

ಮೇಲ್ಕಂಡ ಎಲ್ಲವೂ ಪ್ರಯೋಗಗಳೇ. ಇದರಲ್ಲಿ ಶೇ ನೂರರಷ್ಟು ಫಲಿತಾಂಶವೇನು ಬಂದಿಲ್ಲ, ಆ ಭ್ರಮೆಯೂ ಇರಲಿಲ್ಲ, ಆದರೆ ಹಲವು ರೀತಿಯಲ್ಲಿ ಪ್ರಯೋಜನಕಾರಿಯಾಗಿದೆ. ಕಾರ್ಯಕರ್ತರಲ್ಲಿ ಓದಿನ ಹುಚ್ಚು ಹತ್ತಿಸುವ, ಜ್ಞಾನದ ಹಸಿವನ್ನು ಹೆಚ್ಚಿಸುವ, ಚರ್ಚೆ, ಸಂವಾದ, ಉಪನ್ಯಾಸಗಳತ್ತ ಆಸಕ್ತಿ ಮೂಡಿಸುವ ಪ್ರಯತ್ನದಲ್ಲಿ ಇದೊಂದು ಸಣ್ಣ ಹೆಜ್ಜೆ. ಇದು ಮುಂದುವರಿಯಲಿದೆ.

ಅಂಗನವಾಡಿಯಲ್ಲಿ ಎಲ್.ಕೆ.ಜಿ.-ಯು.ಕೆ.ಜಿ. ಆರಂಭಕ್ಕೆ ಒತ್ತಾಯ...... ಪುಟ 16 ರಿಂದ

ತಿಳಿಸಿದರು. ಇದಕ್ಕೆ ಒಪ್ಪಿ ಅಂಗನವಾಡಿಯ ನಾಯಕರ ತಂಡ ಮುಖ್ಯಮಂತ್ರಿಗಳ ಭೇಟಿಗೆ ತೆರಳಿತು. ಆದರೆ ತಂಡವನ್ನು ಭೇಟಿ ಮಾಡಿದ ಮುಖ್ಯಮಂತ್ರಿಗಳು ಮುಖ್ಯಕಾರ್ಯದರ್ಶಿಯವರೊಡನೆ ಚರ್ಚಿಸುತ್ತೇನೆ ಎಂಬುದನ್ನು ಬಿಟ್ಟರೆ ಯಾವುದೇ ಆಶ್ವಾಸನೆಯನ್ನು ನೀಡಲಿಲ್ಲ. ಈ ಚರ್ಚೆಯಲ್ಲಿ ಅಂಗನವಾಡಿ ನೌಕರರ ಸಂಘ ಭಾಗವಹಿಸಲು ಅನುವು ಮಾಡಿಕೊಡಲಾಗುತ್ತಾ ಎಂಬುದರ ಬಗ್ಗೆ ಸ್ಪಷ್ಟನೆ ನೀಡಲಿಲ್ಲ. ಸಂಬಂಧಿಸಿದ ಸಚಿವರು ಮತ್ತು ಅಧಿಕಾರಿಗಳು ಸಹ ಇದಕ್ಕೆ ಸ್ಪಷ್ಟನೆ ನೀಡದ್ದರಿಂದ ಅಂಗನವಾಡಿ ನಾಯಕರು ಹೋರಾಟವನ್ನು ಡಿಸೆಂಬರ್ 10ರಂದು ರಾತ್ರಿ ಮುಂದುವರೆಸುವ ನಿರ್ಧಾರದ ಘೋಷಣೆ ಮಾಡಿದರು. ಡಿಸೆಂಬರ್ 10ರ ರಾತ್ರಿ 30 ಸಾವಿರಕ್ಕೂ ಹೆಚ್ಚು ಅಂಗನವಾಡಿ ನೌಕರರು ರಾತ್ರಿ ಚಳಿಯಲ್ಲೇ ವಿವಿಧ ಮೈದಾನಗಳಲ್ಲಿ ಉಳಿದರು. ಅಲ್ಲೇ ಅಡುಗೆ ಮಾಡಿಕೊಂಡು ರಾತ್ರಿಯ ಊಟವನ್ನು ಮುಗಿಸಿದರು.



ಡಿಸೆಂಬರ್ 11ರಂದು ಬೆಳಿಗ್ಗೆ ವಿವಿಧ ಮೈದಾನಗಳಲ್ಲಿ ಸೇರಿದ್ದ ಅಂಗನವಾಡಿ ನೌಕರರು ಧರಣಿ, ಸಾರ್ವಜನಿಕ ಸಭೆಗಳ ಮೂಲಕ ತಮ್ಮ ಹೋರಾಟ ಮುಂದುವರೆಸಿದರು. ಹೋರಾಟದ ಬಿಸಿ ಮುಂದುವರೆದಂತೆ ಸರಕಾರ ಪರಿಸ್ಥಿತಿಯ ಗಂಭೀರತೆಯನ್ನು ಅರಿತುಕೊಂಡಿತು. ಅಂಗನವಾಡಿ ನೌಕರರ ಸಂಘವನ್ನು, ಸರಕಾರ ಉದ್ದೇಶಿಸಿದ್ದ ಪ್ರಾಥಮಿಕ-ಪೂರ್ವ ಶಿಕ್ಷಣವನ್ನು (ಎಲ್.ಕೆ.ಜಿ-ಯು.ಕೆ.ಜಿ) ಅಂಗನವಾಡಿಯಲ್ಲೇ ಆರಂಭಿಸಬೇಕು ಎಂಬುದು ಸೇರಿದಂತೆ ಅದು ಮುಂದಿಟ್ಟಿರುವ ಹಕ್ಕೊತ್ತಾಯಗಳ ಚರ್ಚೆಗೆ ಡಿಸೆಂಬರ್ 16ರಂದು ಮುಖ್ಯ ಕಾರ್ಯದರ್ಶಿಯವರ ಜತೆ ಮಾತುಕತೆಗೆ ಲಿಖಿತ ಆಹ್ವಾನವನ್ನು ಮಧ್ಯಾಹ್ನದ ಹೊತ್ತಿಗೆ ಕೊಟ್ಟಿತು. ಇದನ್ನು ಪರಿಶೀಲಿಸಿದ ಅಂಗನವಾಡಿ ನೌಕರರ ಸಂಘವು ಪಾದಯಾತ್ರೆ ಮತ್ತು ಹೋರಾಟವನ್ನು ಸದ್ಯಕ್ಕೆ ಸ್ಥಗಿತಗೊಳಿಸುವುದಾಗಿ ಪ್ರಕಟಿಸಿತು. ಸರಕಾರ ಸಕಾರಾತ್ಮಕವಾಗಿ ಸ್ಪಂದಿಸದಿದ್ದರೆ ಹೋರಾಟವನ್ನು ಮುಂದುವರೆಸುವುದಾಗಿ ಸಹ ಎಚ್ಚರಿಸಿತು.

ರೈಲಿನಲ್ಲಿ ಹೆರಿಗೆ ಮಾಡಿಸಿದ ಧರಣಿಗೆ ಹೊರಟಿದ್ದ ಅಂಗನವಾಡಿ ಕಾರ್ಯಕರ್ತೆಯರು

ತುಮಕೂರಿನಿಂದ ಬೆಂಗಳೂರಿಗೆ ಪಾದಯಾತ್ರೆಯಲ್ಲಿ ಭಾಗವಹಿಸಲು ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಅಂಗನವಾಡಿ ಕಾರ್ಯಕರ್ತೆಯರು ಮಹಿಳೆಯೊಬ್ಬರಿಗೆ ಸುರಕ್ಷಿತವಾಗಿ ಹೆರಿಗೆ ಮಾಡಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ. ಯಾದಗಿರಿ ಜಿಲ್ಲೆಯ ಸೈದಾಪುರ ನಿವಾಸಿ ಗೀತಾ ಎಂಬುವರು ಉದ್ಯಾನ ಎಕ್ಸ್ ಪ್ರೆಸ್ ರೈಲಿನಲ್ಲಿ ಮಗುವಿಗೆ ಜನ್ಮ ನೀಡಿದವರು.

ಬೆಂಗಳೂರಿಗೆ ಪತಿ ಜೊತೆ ಹೊರಟಿದ್ದ ಗೀತಾ ಅವರಿಗೆ ಪ್ರಯಾಣದ ಮಧ್ಯೆ ಹೆರಿಗೆ ನೋವು ಕಾಣಿಸಿತ್ತು. ಅದೇ ಬೋಗಿಯಲ್ಲಿ ಕಲಬುರಗಿ ಜಿಲ್ಲೆಯ ಅಂಗನವಾಡಿ ಕಾರ್ಯಕರ್ತೆಯರು ತೆರಳುತ್ತಿದ್ದರು. ವಿಷಯ ತಿಳಿದ ಕಾರ್ಯಕರ್ತೆಯರು ಗೀತಾ ಅವರಿಗೆ ಸುಲಭ ಹೆರಿಗೆ ಮಾಡಿಸಿದರು.

ರಾಯಚೂರು - ಗುಂತಕಲ್ ಮಾರ್ಗದಲ್ಲಿ ಗೀತಾ ಅವರು ಗಂಡು ಮಗುವಿಗೆ ಜನ್ಮ ನೀಡಿದ್ದಾರೆ. ಚಿತ್ತಾಪುರ ತಾಲೂಕು ನಾಲವಾರದ ಅಂಗನವಾಡಿ ಕಾರ್ಯಕರ್ತೆಯರಾದ ಮಲ್ಲಿಕಾ, ಹಾಲಾಬಾಯಿ ಮತ್ತಿತರರು ಹೆರಿಗೆ ಮಾಡಿಸಿದ್ದಾರೆ. ತಾಯಿ ಗೀತಾ ಮತ್ತು ಮಗು ಇಬ್ಬರೂ ಸುರಕ್ಷಿತವಾಗಿದ್ದಾರೆ.

⇨⇨⇨ ಪತನಗೊಂಡ ನಂತರ ನ್ಯಾಟೋ ಸಂಸ್ಥೆಯನ್ನು ಏಕೆ ವಿಸರ್ಜನೆ ಮಾಡಲಿಲ್ಲ? ಎಂಬ ಪ್ರಶ್ನೆ ಉದ್ಭವವಾಗುತ್ತದೆ ಅಲ್ಲವೇ? ಇದಕ್ಕೆ ಮೂಲ ಕಾರಣಗಳೆಂದರೆ, ಬಂಡವಾಳಶಾಹಿ ಮತ್ತು ಸಾಮ್ರಾಜ್ಯ ಶಾಹಿ ನಿಯಂತ್ರಣ ವನ್ನು ಜಗತ್ತಿನಾದ್ಯಂತ ಕಾಪಾಡಿಕೊಳ್ಳುವುದು, ನ್ಯಾಟೋ ಅಸ್ತಿತ್ವ ಮುಂದುವರಿಕೆಯ ನಿಜವಾದ ಗುರಿಯಾಗಿತ್ತು ಎಂಬುದನ್ನು ಯಾರು ಮರೆಯಬಾರದು. ಸೋವಿಯೆಟ್ ಒಕ್ಕೂಟ ಮತ್ತು ಯುರೋಪಿನ ಸಮಾಜವಾದಿ ರಾಷ್ಟ್ರಗಳ ಅಂತ್ಯದ ಸಮಯದಿಂದಲೂ ಇಲ್ಲಿಯವರೆಗೆ, ನ್ಯಾಟೋ ಯುಎಸ್ ಪ್ರೇರಿತವಾದ ಕಾರ್ಯವನ್ನೇ ತನ್ನ ಮೂಲ ಉದ್ದೇಶ ವನ್ನಾಗಿ ಮುಂದುವರಿಸಿಕೊಂಡು ಬರುತ್ತಿದೆ. ಹಾಗಾಗಿ, ಇದೊಂದು ಸಾಮ್ರಾಜ್ಯಶಾಹಿ ಶಕ್ತಿಯ ಜಾಗತಿಕ ಮಿಲಿಟರಿ ಅಂಗವಾಗಿದೆ ಎಂದೇ ಪರಿಗಣಿಸಬೇಕು.

ಯುರೋಪಿನ ಸಮಾಜವಾದಿ ರಾಷ್ಟ್ರಗಳ ಪತನದ ನಂತರ, ಸೋವಿಯತ್ ಮಿತ್ರ ರಾಷ್ಟ್ರಗಳನ್ನು ಸೇರಿಸಲು ನ್ಯಾಟೋ ವನ್ನು ವಿಸ್ತರಣೆ ಮಾಡುವುದಿಲ್ಲ ಎಂದು ಯುಎಸ್ ರಷ್ಯಾ ಕ್ಕೆ ಭರವಸೆ ನೀಡಿತ್ತು. ಆದರೆ, ಈ ಭರವಸೆಯನ್ನು ಕಡೆಗಣಿಸಲಾಯಿತು. ಬದಲಾಗಿ, ಈ ಮೈತ್ರಿಯು ಬಾಲ್ಟಿಕ್ ಗಣರಾಜ್ಯಗಳನ್ನು ಒಳಗೊಂಡಂತೆ, ರಷ್ಯಾದ ಗಡಿಯಲ್ಲಿರುವ ಹಲವಾರು ದೇಶಗಳನ್ನು ಸೇರಿಸಿಕೊಳ್ಳಲಾಯಿತು. ಇದೀಗ ಇದರ ಸದಸ್ಯ ರಾಷ್ಟ್ರಗಳ ಸಂಖ್ಯೆ 12 ರಿಂದ 29 ದೇಶಗಳಿಗೆ ವಿಸ್ತರಗೊಂಡಿದೆ. ಆದರೂ ಇಷ್ಟಕ್ಕೆ ನಿಲ್ಲದೆ, ಜಾರ್ಜಿಯಾ, ಮೊಲ್ಡೊವಾ, ಮತ್ತು ಉಕ್ರೇನ್ ದೇಶಗಳನ್ನು ಸೇರಿಸಿ ಕೊಳ್ಳಲು ಇದೀಗ ಮುಂದಾಗಿದೆ. ಅಂದರೆ, ಸೋವಿಯತ್ ಒಕ್ಕೂಟದ ಭಾಗವಾಗಿದ್ದ ಎಲ್ಲಾ ಹಿಂದಿನ ಗಣರಾಜ್ಯಗಳು, ಜೊತೆಗೆ, ಕೊಲಂಬಿಯಾ ಮತ್ತು ಬ್ರೆಜಿಲ್ ದೇಶಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು, ಲ್ಯಾಟಿನ್ ಅಮೆರಿಕಾಕ್ಕೂ ವಿಸ್ತರಿಸಲು ಮುಂದಾಗಿದೆ.

ಈ ವಾರ ನ್ಯಾಟೋ ಪ್ರಧಾನ ಕಾರ್ಯದರ್ಶಿ ಜೆನ್ಸ್ ಸ್ಟೋಲ್ಟೆನ್ ಬರ್ಗ್ ಅವರೊಂದಿಗೆ ಉತ್ತಮ ಸಭೆ ನಡೆಸಿದ್ದೇನೆ ಎಂದು ಟ್ರಂಪ್ ಹೆಮ್ಮೆ ಪಟ್ಟಿದ್ದಾರೆ. ಯುಎಸ್ ಮತ್ತು ಸದಸ್ಯ ರಾಷ್ಟ್ರಗಳು ನ್ಯಾಟೋದ ಹೆಚ್ಚಿನ ಖರ್ಚಿಗೆ ಪಾಲು ನೀಡಲು ಮುಂದಾಗಿರುವುದರ ಬಗ್ಗೆ ಜೆನ್ಸ್ ಸ್ಟೋಲ್ಟೆನ್ ಬರ್ಗ್ ಹರ್ಷಗೊಂಡಿದ್ದಾರೆ. ಅವರು ನ್ಯಾಟೋ ಬೊಕ್ಕಸವನ್ನು ಈಗ 400 ಬಿಲಿಯನ್ ಡಾಲರ್‌ಗೆ ಹೆಚ್ಚಿಸುವುದಾಗಿ ಪ್ರತಿಜ್ಞೆ ಮಾಡಿದ್ದಾರೆ.

ಮತ್ತೊಂದೆಡೆ, ವೆನೆಜುವೆಲಾ ಮತ್ತು ಬೊಲಿವಿಯಾ ಜನರು ತಮ್ಮ ದೇಶದಲ್ಲಿ ಆರ್ಥಿಕ ನ್ಯಾಯಕ್ಕಾಗಿ ಎದ್ದು ನಿಂತು ಯುಎಸ್ ಮತ್ತು ನ್ಯಾಟೋ ವನ್ನು ಎದುರಿಸುತ್ತಿದ್ದಾರೆ. ಸಾಮ್ರಾಜ್ಯಶಾಹಿ ನೀತಿಗಳನ್ನು ತಿರಸ್ಕರಿಸುತ್ತಿರುವ ಈ ಎರಡು ದೇಶಗಳನ್ನು ಸುತ್ತುವರಿದಿರುವ ದೇಶಗಳನ್ನು ಎತ್ತಿ ಕಟ್ಟಲು ಕ್ರಮಗಳನ್ನು ಹೇರುತ್ತಿದೆ. ಇಂತಹ ಕ್ರಮಗಳು ಆಕಸ್ಮಿವಲ್ಲ. ಮುಕ್ತ ಚುನಾವಣೆಗಳು, ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳು ನ್ಯಾಟೋ ಕ್ರಮಕ್ಕೆ ಮಾನದಂಡಗಳಲ್ಲ. ಸಾಮ್ರಾಜ್ಯ ಶಾಹಿ ಅಥವಾ ಬಂಡವಾಳಶಾಹಿಯ ಹಿತಾಸಕ್ತಿಗಳಿಗೆ ಬೆದರಿಕೆ ಬಂದಾಗಲೆಲ್ಲಾ ನ್ಯಾಟೋ ಕೂಟ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತದೆ.

ಲಂಡನ್ ನಲ್ಲಿ ನಡೆದ ಈ ಸಭೆಯಲ್ಲಿಯೂ ಕೂಡ, ನ್ಯಾಟೋ ದಿಂದ, ವಿಶ್ವ ಶಾಂತಿ ಅಥವಾ ಪ್ರಗತಿಯ ಬಗ್ಗೆ ಎಳ್ಳಷ್ಟು ಕಾಳಜಿಯಾಗಲಿ ಚರ್ಚೆಯಾಗಲಿ ಆಗಿಲ್ಲ. ಬದಲಿಗೆ, ಗೊರಕೆ, ಗೊಂದಲ, ಸದಸ್ಯರ ನಡುವೆ ಮಾತಿನ ಚರ್ಚೆಯಿಂದಾಗಿ, ಮೈತ್ರಿಯಲ್ಲಿ ವಿಭಜನೆ ಉಂಟಾದಂತೆ ಕಾಣುತ್ತದೆಯೇ ಹೊರತು, ಉದ್ದೇಶಗಳ ಬಗ್ಗೆ ಯಾವುದೇ ಚರ್ಚೆಯಾಗಲಿಲ್ಲ.

JANASHAKTHI KANNADA VARA PATRIKE DECEMBER 16-22, 2019 Price: Rs. 10/- Date of Publication: 13 DECEMBER 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಭವಿಷ್ಯನಿಧಿ ಕಾನೂನು ಹಾಗೂ ಸಾಮಾಜಿಕ ಭದ್ರತೆಗಾಗಿ ಐಕ್ಯತೆಯನ್ನು ಪ್ರದರ್ಶಿಸಿದ ಅಸಂಘಟಿತ ಕಾರ್ಮಿಕರು

ರಾಜ್ಯದ ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿರುವ ಹಮಾಲಿ ಕಾರ್ಮಿಕರು, ಬೀದಿಬದಿ ವ್ಯಾಪಾರಿಗಳು, ಆಟೋಚಾಲಕರು, ಟೈಲರ್ ಗಳು, ಮೇಕಾನಿಕ್ ಗಳು ಸೇರಿ ಸಾವಿರಾರು ಕಾರ್ಮಿಕರು ಮೊದಲ ಬಾರಿಗೆ "ಭವಿಷ್ಯನಿಧಿ ಕಾನೂನು ಜಾರಿಗಾಗಿ ಮತ್ತು ಸಾಮಾಜಿಕ-ಭದ್ರತೆಗಾಗಿ" ಐಕ್ಯ ಚಳವಳಿಯನ್ನು ಇಂದು ಬೆಂಗಳೂರಿನಲ್ಲಿ ಸಿಐಟಿಯು ನೇತೃತ್ವದಲ್ಲಿ ನಡೆಸಿದರು.

ಡಿಸೆಂಬರ್ 12 ರಂದು ಬೆಂಗಳೂರಿನಲ್ಲಿ ಅಸಂಘಟಿತ ಕಾರ್ಮಿಕರು ಸಂಘಟಿಸಿದ್ದ ಬೆಂಗಳೂರು ರ್ಯಾಲಿಯ ಪೂರ್ವದಲ್ಲೊ ಡಿಸೆಂಬರ್ 9 ರಂದೇ ಕಾರ್ಮಿಕ ಸಚಿವರಾದ ಶ್ರೀ ಸುರೇಶಕುಮಾರ್ ವಿವಿಧ ಕಾರ್ಮಿಕ ಸಂಘಗಳ ಮುಖಂಡರು ಹಾಗೂ ಸಿಐಟಿಯು ರಾಜ್ಯ ಮುಖಂಡರೊಂದಿಗೆ ವಿಧಾನಸೌಧದ ತಮ್ಮಕಚೇರಿಯಲ್ಲಿ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಈ ಸಭೆಯಲ್ಲಿ ಕಾರ್ಮಿಕ ಇಲಾಖೆ ರೂಪಿಸಿರು ಭವಿಷ್ಯನಿಧಿ ಕರಡನ್ನು ಕಾನೂನಾಗಿ ಜಾರಿ ಮಾಡುವುದು ಹಾಗೂ ಅಸಂಘಟಿತ ಕಾರ್ಮಿಕರಿಗೆ ಪಿಂಚಣಿ,ವೈದ್ಯಕೀಯ ಸೌಲಭ್ಯ, ಅವರ ಮಕ್ಕಳಿಗೆ ಶಿಕ್ಷಣ, ವಸತಿ ಮೊದಲಾದ ಕನಿಷ್ಟ ಸೌಲಭ್ಯಗಳನ್ನು ಖಾತ್ರಿಗೊಳಿಸುವ ಬಗ್ಗೆ ಚರ್ಚಿಸಲಾಯಿತು. ಇದಲ್ಲದೆ ಅದಕ್ಕೆ ಅಗತ್ಯವಿರುವ ಹಣಕಾಸು ನೆರವನ್ನು ವಿವಿಧ ಇಲಾಖೆಗಳಿಂದ ಪಡೆಯುವುದು ಮತ್ತು ರಾಜ್ಯ ಮತ್ತು ಕೇಂದ್ರ ಸರಕಾರದ ಅನುದಾನ ಪಡೆಯಲು ಇರುವ ಅವಕಾಶಗಳು ಕುರಿತು ಸುದೀರ್ಘ ಚರ್ಚಿಸಲಾಗಿತ್ತು.

ಮಾತ್ರವಲ್ಲ ಅದರ ಭಾಗವಾಗಿ ಪ.ಬಂಗಾಳದಲ್ಲಿ ಜಾರಿಯಲ್ಲಿರುವ ಭವಿಷ್ಯನಿಧಿ ಯೋಜನೆ ಜಾರಿಯ ಪರಿಶೀಲನೆಗಾಗಿ ಇಂದು ಕಾರ್ಮಿಕ ಇಲಾಖೆ ಪ್ರಧಾನ ಕಾರ್ಯದರ್ಶಿ ಕ್ಯಾ.ಮಣಿವಣ್ಣನ್, ಅಸಂಘಟಿತ ಸಾಮಾಜಿಕ ಭದ್ರತಾ ಮಂಡಳಿಯು ಜಂಟಿ ಕಾರ್ಯದರ್ಶಿ ಚಿದಾನಂದ ಹಾಗೂ ಸಿಐಟಿಯು ರಾಜ್ಯ ಕಾರ್ಯದರ್ಶಿ ಗಳಾದ ಎನ್.ಪ್ರತಾಪ ಸಿಂಹ ಹಾಗೂ ಬಿ.ಎನ್.ಮಂಜುನಾಥ್ ಅವರನ್ನೊಳಗೊಂಡ ಅಧ್ಯಯನ ತಂಡ ಕೊಲ್ಕತ್ತಾಗೆ ಭೇಟಿ ನೀಡಿದೆ.



ರಾಜ್ಯ ಸರಕಾರದ ಮೇಲೆ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ಒತ್ತಡ ಹೇರಲು ಇಂದು ಬೆಂಗಳೂರಿನಲ್ಲಿ ಕಾರ್ಮಿಕರ ರ್ಯಾಲಿ ಹಾಗೂ ಬಹಿರಂಗ ಸಭೆಯನ್ನು ಆಯೋಜಿಸಲಾಗಿತ್ತು. ಬೆಳಗ್ಗೆ ರೈಲ್ವೆ ನಿಲ್ದಾಣದಿಂದ ಆರಂಭಗೊಂಡ ಮೆರವಣಿಗೆ ಫ್ರೀಡಂ ಪಾರ್ಕ್ ನಲ್ಲಿ ಸಮಾವೇಶಗೊಂಡಿತು.



ಪ್ರತಿಭಟನಾ ಸಭೆಗೆ ರಾಜ್ಯ ಸರಕಾರದ ಕಾರ್ಮಿಕ ಸಚಿವರಾದ ಶ್ರೀ ಎಸ್.ಸುರೇಶ ಕುಮಾರ್ ಆಗಮಿಸಿ ಮನವಿ ಸ್ವೀಕರಿಸಿ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಈಗಾಗಲೇ ನಾನು ಸಿಐಟಿಯು ಮುಖಂಡರ ಜೊತೆ ಮಾತುಕತೆ ನಡೆಸಿದ್ದು ಕಾರ್ಮಿಕ ಇಲಾಖೆ ಅಧಿಕಾರಿಗಳೊಂದಿಗೆ ಸೇರಿ ಸಾಮಾಜಿಕ ಕಾರ್ಯಕ್ರಮಗಳನ್ನು ರೂಪಿಸಲಿದೆ ಎಂದು ಭರವಸೆ ನೀಡಿದರು. ಸಭೆಯಲ್ಲಿ ಕಾರ್ಮಿಕ ಆಯುಕ್ತ ರಾದ ಶ್ರೀ ಶಾಂತಾರಾಂ, ಹೆಚ್ಚುವರಿ ಆಯುಕ್ತರಾದ ನರಸಿಂಹಮೂರ್ತಿ ಸೇರಿದಂತೆ ಹಲವಾರು ಅಧಿಕಾರಿಗಳು ಭಾಗವಹಿಸಿದ್ದರು ಇದಲ್ಲದೆ ಕೃಷಿಮಾರುಕಟ್ಟೆ ಇಲಾಖೆ ಹೆಚ್ಚುವರಿ ನಿರ್ದೇಶಕಿ ಡಾ; ರಾಜಶ್ರೀ ಎಪಿಎಂಸಿ ಹಮಾಲಿ ಕಾರ್ಮಿಕರ ಕುರಿತಾಗಿ ಮನವಿ ಸ್ವೀಕರಿಸಿದರು.

ಇಂದಿನ ಬಹಿರಂಗ ಸಭೆಯನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಎನ್.ಉಮೇಶ್, ರಾಜ್ಯ ಅಧ್ಯಕ್ಷರಾದ ಎಸ್.ವರಲಕ್ಷ್ಮೀ, ಪ್ರಧಾನ ಕಾರ್ಯದರ್ಶಿ ಮೀನಾಕ್ಷೀ ಸುಂದರಂ, ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ, ಹಮಾಲಿ ಕಾರ್ಮಿಕ ಫೆಡರೇಷನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ್, ಆಟೋ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಬಿ.ವಿ. ರಾಘವೇಂದ್ರ, ಸಭೆಯನ್ನುದ್ದೇಶಿಸಿ ಮಾತನಾಡಿದರು. ಪ್ರತಿಭಟನಾ ಸಭೆಯಲ್ಲಿ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಹೆಚ್.ಎನ್ ಗೋಪಾಲಗೌಡ, ಕೆ. ಪ್ರಕಾಶ, ರಾಜ್ಯ ಕಾರ್ಯದರ್ಶಿ ಗಳಾದ ಹೆಚ್.ಎಸ್.ಸುನಂದ, ಮಾಲಿನಿ ಮೇಸ್ತಾ, ಸಿ.ಆರ್.ಶಾನಬಾಗ್, ನಿರುಪಾದಿ ಬೆಣಕಲ್, ಜನವಾದಿ ಮಹಿಳಾ ಸಂಘಟನೆ ರಾಜ್ಯ ಪ್ರಧಾನ ಕಾರ್ಯದರ್ಶಿ ಗೌರಮ್ಮ,ಇದಲ್ಲದೆ ಸಿಐಟಿಯು ಮುಖಂಡರಾದ ಸೆಲ್ವಿ ಶ್ರೀನಿವಾಸ, ಬಸಮ್ಮ, ಮಂಜು ಕೋಟೇಶ್ವರ, ಹುಲಗೆಮ್ಮ ಚೆಲವಾದಿ, ಸಂತೋಷ, ರಿಜ್ವಾನ್ ಖಾನ್ ಸೇರಿದಂತೆ ಹಲವಾರು ಮುಖಂಡರು ಉಪಸ್ಥಿತರಿದ್ದರು.

ಅಸಂಘಟಿತರಿಗೆ ಸಾಮಾಜಿಕ ಭದ್ರತೆ ಒದಗಿಸುವುದು ಸರಕಾರಗಳ ಆದ್ಯ ಜವಾಬ್ದಾರಿ

ಕೆ. ಮಹಾಂತೇಶ್

ರಾಜ್ಯದ ಅಸಂಘಟಿತ ವಲಯದ ಕಾರ್ಮಿಕರಿಗೆ ಸಾಮಾಜಿಕ ರಕ್ಷಣೆ ಒದಗಿಸುವ ಸಲುವಾಗಿ 2009 ರಲ್ಲಿ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕ ಸಾಮಾಜಿಕ ಭದ್ರತಾ ಮಂಡಳಿ ರಚನೆಯಾಗಿದೆ. ಆರಂಭದಲ್ಲಿ ಕೇಂದ್ರದ ಸಾಮಾಜಿಕ ಭದ್ರತಾ ಮಂಡಳಿ ರೂಪಿಸಿದ ಯೋಜನೆಗಳ ಅನ್ವಯ ಮಕ್ಕಳಿಗೆ ಶಿಕ್ಷಣ, ಅಪಘಾತ ಪರಿಹಾರ,ವಸತಿ ಹಾಗೂ ಪಿಂಚಣಿ ಸೇರಿ ಹಲವು ಕಾರ್ಯಕ್ರಮಗಳನ್ನು ಅಂಗೀಕರಿಸಿದರೂ ಅವು ಅನುದಾನದ ಕೊರತೆಯಿಂದ ಜಾರಿಯಾಗಲಿಲ್ಲ. ಬದಲಾಗಿ ಅಂದು ಕೇಂದ್ರ ಸರಕಾರ ಘೋಷಿಸಿದ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲು ವಿಫಲ ಯತ್ನ ನಡೆದವು ಆದರೆ ಇದಕ್ಕೆ ಕಾರ್ಮಿಕರ ತೀವ್ರ ವಿರೋಧ ಎದುರಾಯಿತು. ಅಲ್ಲದೆ ಅಸಂಘಟಿತ ಕಾರ್ಮಿಕರಿಗೆ ಖಚಿತ ಪಿಂಚಣಿ ಬೇಕು ಎಂಬ ಬೇಡಿಕೆಯನ್ನು ಸಿಐಟಯು ನೇತೃತ್ವದ ಸಂಘಗಳು ಮಂಡಿಸಿ ಪ್ರಚಾರ ಮಾಡಿದ್ದರಿಂದ ಪಿಂಚಣಿ ಯೋಜನೆ ಜಾರಿ ಸಾಕಷ್ಟು ಯಶಸ್ವಿ ಗಳಿಸಲಿಲ್ಲ.



ಇದಾದ ಬಳಿಕಾ ಸಿಐಟಿಯು ನಾಯಕತ್ವ ಪ.ಬಂಗಾಳ ಮಾದರಿಯಲ್ಲಿ ಭವಿಷ್ಯನಿಧಿಯನ್ನು ರಾಜ್ಯದ ಅಸಂಘಟಿತ ಕಾರ್ಮಿಕರಿಗೆ ಜಾರಿಗೊಳಿಸಬೇಕು ಎಂದು ಆಗ್ರಹಿಸಿ ವರದಿಯೊಂದನ್ನು 2014 ರಲ್ಲಿ ಸರಕಾರಕ್ಕೆ ಸಲ್ಲಿಸಿತ್ತು. ಅದರಂತೆ ಕಾರ್ಮಿಕ ಇಲಾಖೆಯ ನಿಯೋಗ ಪ.ಬಂಗಾಳಕ್ಕೆ ಭೇಟಿ ನೀಡಿ ಅಧ್ಯಯನ ನಡೆಸಿ ಒಂದು ವರದಿಯನ್ನು ರಾಜ್ಯ ಸರಕಾರಕ್ಕೆ ಸಲ್ಲಿಸಿತ್ತು. 2016 ಹಾಗೂ 2017 ರಲ್ಲಿ ಸಿಐಟಿಯು ಹಾಗೂ ವಿಶೇಷವಾಗಿ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕ ಫೆಡರೇಷನ್ ನಡೆಸಿದ ಹೋರಾಟಗಳಲ್ಲಿ ಪ್ರಶ್ನೆಯನ್ನು ಮುನ್ನೆಲೆಗೆ ತರಲಾಗಿತ್ತು ಇದರಿಂದಾಗಿ ಕಾರ್ಮಿಕ ಇಲಾಖೆಯು ಹಮಾಲಿ ಕಾರ್ಮಿಕರು, ಮನೆಕೆಲಸ, ಬೀದಿಬದಿ ವ್ಯಾಪರಿಗಳು ಹಾಗೂ ಚಿಂದಿ ಆಯುವ ಕಾರ್ಮಿಕರಿಗಾಗಿ ಆಧ್ಯತೆ ನೀಡಿ ಭವಿಷ್ಯನಿಧಿ ಜಾರಿಗೊಳಿಸಲು ರಾಜ್ಯ ಸರಕಾರದ ಮುಂದೆ 133 ಕೋಟಿ ರೂಗಳ ಅನುದಾನದ ಕೋರಿಕೆಯನ್ನು ಸಲ್ಲಿಸಿತ್ತು. ಅದರ ಪರಿಣಾಮವಾಗಿ 2017 ರ ರಾಜ್ಯ ಸರಕಾರದ ಬಜೆಟ್‌ನಲ್ಲಿ ಮಾನ್ಯ ಸಿದ್ದರಾಮಯ್ಯನವರು ಅಸಂಘಟಿತ ಕಾರ್ಮಿಕರಿಗಾಗಿ ಸ್ಮಾರ್ಟ ಕಾರ್ಡ ಹಾಗೂ ಭವಿಷ್ಯನಿಧಿ ಯೋಜನೆಯನ್ನು ಘೋಷಿಸಿದ್ದರು. ಆದರೆ ಕಾರ್ಮಿಕ ಇಲಾಖೆ ಕೋರಿಕೆಯನ್ನು ಮಾನ್ಯ ಮಾಡಿದರೂ ಅಗತ್ಯವಿರುವ ಹಣ ನೀಡದೇ ಕೇವಲ 25 ಕೋಟಿ ಹಣಕಾಸಿನ ನೆರವನ್ನು ಮುಖ್ಯಮಂತ್ರಿಗಳು ಪ್ರಕಟಿಸಿದರು. ಇದು ಕೇವಲ ಸ್ಮಾರ್ಟ ಕಾರ್ಡ ನೀಡಲು ಮಾತ್ರ ಅನುಕೂಲವಾಯಿತು. ಆದರೆ ಭವಿಷ್ಯನಿಧಿ ಅನುಷ್ಟಾನ ಮಾತ್ರ ಹಾಗೆ ಉಳಿಯಿತು. ಇದೀಗ ರಾಜ್ಯದಲ್ಲಿರುವ ಹಮಾಲಿ ಕಾರ್ಮಿಕರು ಮತ್ತು ಮನೆಕೆಲಸ ಕಾರ್ಮಿಕರಿಗೆ ಸಾಕಷ್ಟು ಒತ್ತಡ ಹಾಗೂ ಹೋರಾಟದ ಬಳಿಕಾ ಡಾ ಅಂಬೇಡ್ಕರ್ ಸಹಾಯ ಹಸ್ತಾ ಸ್ಮಾರ್ಟ ಕಾರ್ಡಗಳನ್ನು ವಿತರಿಸಲಾಗಿದೆಯಾದರೂ ಅದರಿಂದ ಯಾವುದೇ ಸೌಲಭ್ಯಗಳಿಲ್ಲ ಎನ್ನುವ ಕೊರಗು ಅಸಂಘಟಿತ ಕಾರ್ಮಿಕರ ಮಧ್ಯ ಇದೆ.

ರಾಜ್ಯದಲ್ಲಿರುವ ಅಸಂಘಟಿತ ವಲಯದ ಕಾರ್ಮಿಕರಿಗೆ ಯಾವೊಂದು ಸಾಮಾಜಿಕ ಭದ್ರತೆಯೂ ಇಲ್ಲದಿರುವ ಈ ಸನ್ನಿವೇಶದಲ್ಲಿ ಕಾರ್ಮಿಕ ಇಲಾಖೆ ರೂಪಿಸಿರುವ ಭವಿಷ್ಯನಿಧಿ ಯೋಜನೆಯು ಕಾನೂನಿನ ಸ್ವರೂಪದಲ್ಲಿ ಜಾರಿಯಾಗುವುದು ತುಂಬಾ ಅಗತ್ಯವಿದೆ. ಅಕ್ಟೋಬರ್ 21 ರಂದು ರಾಜ್ಯ ಸರಕಾರದ ಮಾನ್ಯ ಕಾರ್ಮಿಕ ಸಚಿವರಾದ ಶ್ರೀ ಸುರೇಶ್ ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲೂ ಸಿಐಟಿಯು ಪರವಾಗಿ ಭಾಗವಹಿಸಿದ್ದ ಮುಖಂಡರು ಈ ಬಗ್ಗೆ ಮತ್ತೆ ಆಗ್ರಹವನ್ನು ಮಾಡಲಾಗಿತ್ತು. ಇದಕ್ಕೆ ಮತ್ತಷ್ಟು ಚಳವಳಿ ಸ್ವರೂಪದ ಒತ್ತಡವನ್ನು ರಾಜ್ಯ ಸರಕಾರದ ಮೇಲೆ ಹೇರಲು 2019 ನವೆಂಬರ್ 8 ರಿಂದ 10ರವರೆಗೆ ತುಮಕೂರಿನಲ್ಲಿ ನಡೆದ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) 14 ನೇ ರಾಜ್ಯ ಸಮ್ಮೇಳನವು ಈಗಾಗಲೇ ಸಂಘಟಿತರಾಗಿರುವ ಹಮಾಲಿ, ಮನೆಕೆಲಸ, ಆಟೋ, ಟೈಲರ್ಸ್ ಹಾಗೂ ಬೀದಿಬದಿ ವ್ಯಾಪಾರಿಗಳನ್ನು ಒಂದಾಗಿಸಿ ಐಕ್ಯ ಚಳವಳಿಯನ್ನು ನಡೆಸಲು ಕರೆ ನೀಡಿತ್ತು.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**